


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 15 ಶನಿವಾರ 2025

ಸಂಪುಟ: 45 | ಸಂಚಿಕೆ: 325 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನನ್ನ ಹೆಗಲಿಗೆ ಹೆಗಲಾಗಿ ನಿಂತವರು ಡಿಕೆಶಿ...

ಡಿಸಿಎಂ ಡಿ.ಕೆ.ಶಿವಕುಮಾರ್ ಹಾಡಿ ಹೊಗಳಿದ ಸಿಎಂ ಸಿದ್ದರಾಮಯ್ಯ!

● ಕೆಪಿಸಿಸಿ ಅಧ್ಯಕ್ಷರಾಗಿ ಐದು ವರ್ಷ ಪೂರೈಸಿದ ಡಿಕೆಶಿ; ಪಂಚತಾರಾ ಹೋಟೆಲ್‌ನಲ್ಲಿ ಔತಣಕೂಟ ● ಟ್ವೀಟ್ ಮೂಲಕ ಡಿಕೆಶಿಗೆ ಶುಭ ಹಾರೈಸಿದ ಸಿಎಂ ಸಿದ್ದರಾಮಯ್ಯ ● ಎರಡು ದಿನದ ಹಿಂದಷ್ಟೇ ನಾನೇ ಐದೂ ವರ್ಷ ಸಿಎಂ ಎಂದು ಟಾಂಗ್ ನೀಡಿದ್ದ ಸಿಎಂ ● ಔತಣಕೂಟಗಳ ಅಧಿಕಾರದ ಮೇಲಾಟದಲ್ಲಿ ಹೊಸ ಅಂಕಣ ಆರಂಭ!

ಬೆಂಗಳೂರು, ಮಾ.14(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನನ್ನ ಹೆಗಲಿಗೆ ಹೆಗಲು ಕೊಟ್ಟು ನಿಂತಿರುವುದರಿಂದ ರಾಜ್ಯದಲ್ಲಿ ಸುಭದ್ರ ಸರ್ಕಾರ ರಚನೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಡಿ ಹೊಗಳಿದ್ದಾರೆ.

ಕಳೆದ ಎರಡು ದಿನಗಳ ಹಿಂದಷ್ಟೇ ವಿಧಾನಸಭೆಯಲ್ಲೇ, ತಾವು ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಇರುತ್ತೇನೆ ಎಂಬುದಾಗಿ ಹೇಳಿಕೆ ನೀಡಿದ ಬೆನ್ನಲ್ಲೇ ಅವರ ಇಂದಿನ ಹೇಳಿಕೆಗಳು ಅಚ್ಚರಿ ಮೂಡಿಸಿವೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಐದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಗುರುವಾರ ರಾತ್ರಿ ಪಂಚತಾರಾ ಹೋಟೆಲ್‌ನಲ್ಲಿ ಅವರು ಆಯೋಜಿಸಿದ್ದ ಔತಣಕೂಟದಲ್ಲಿ ಪಾಲ್ಗೊಂಡಿದ್ದ ಸಿದ್ದರಾಮಯ್ಯ, ಇಂದು ಟ್ವೀಟ್ ಮೂಲಕ ಶುಭ ಹಾರೈಸಿದ್ದಾರೆ. ಔತಣಕೂಟದಲ್ಲಿ ಪಾಲ್ಗೊಂಡಿದ್ದ ಸಿದ್ದರಾಮಯ್ಯ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಿಂದಿನ ಬಿಜೆಪಿ ಸರ್ಕಾರದ ದುರಾಡಳಿತ, ಭ್ರಷ್ಟಾಚಾರವನ್ನು ಮನೆ, ಮನಗಳಿಗೆ ತಲುಪಿಸಲು ನನ್ನ ಹೆಗಲಿಗೆ ಹೆಗಲಾಗಿ ನಿಂತವರು ಡಿಕೆಶಿ ಎಂದಿದ್ದಾರೆ. ವಿಪಕ್ಷಗಳ ಅಪಪ್ರಚಾರವನ್ನು ಮೆಟ್ಟಿ ನಿಂತು ನಮ್ಮ ಸಾಧನೆಗಳು ರಾಜ್ಯದ ಮನೆ ಮಾತಾಗಬೇಕು. ಇದಕ್ಕಾಗಿ ನಾವೆಲ್ಲರೂ ಕಾಂಗ್ರೆಸ್ ಪಕ್ಷದ ಒಬ್ಬ ಸಾಮಾನ್ಯ ಕಾರ್ಯಕರ್ತನಂತೆ ಕೆಲಸ

■ 6ನೇ ಪುಟಕ್ಕೆ



ಡಿ.ಕೆ.ಶಿವಕುಮಾರ್ ಗುರುವಾರ ರಾತ್ರಿ ಸ್ಟಾರ್ ಹೋಟೇಲ್‌ನಲ್ಲಿ ಏರ್ಪಡಿಸಿದ್ದ ಔತಣಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು, ಶಾಸಕರು ಪಾಲ್ಗೊಂಡಿದ್ದರು.

ನಟಿ ರನ್ಯಾರಾವ್ ಜಾಮೀನು ಅರ್ಜಿ ವಜಾ



ಬೆಂಗಳೂರು, ಮಾ.14– ಅಕ್ರಮ ಚಿನ್ನ ಸಾಗಾಟ ಪ್ರಕರಣದಲ್ಲಿ ಜೈಲು ಸೇರಿರುವ ನಟಿ ರನ್ಯಾ ರಾವ್ ಜಾಮೀನು ಅರ್ಜಿ ವಜಾಗೊಳಿಸಿ ಕೋರ್ಟ್ ಆದೇಶ ನೀಡಿದೆ ದುಬೈನಿಂದ ಅಕ್ರಮವಾಗಿ ಚಿನ್ನ ಸಾಗಾಟ ಮಾಡುತ್ತಿದ್ದ ವೇಳೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡಿಆರ್‌ಐ ಅಧಿಕಾರಿಗಳಿಂದ ಬಂಧಿಸಲ್ಪಟ್ಟಿದ್ದ ರನ್ಯಾರಾವ್‌ಗೆ ನ್ಯಾಯಾಂಗ ಬಂಧನ ವಿಧಿಸಿರುವ ಹಿನ್ನೆಲೆಯಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿದ್ದಾರೆ.

ಡಿಕೆಶಿ ಜೊತೆ ಮೂವರು ಸಚಿವರು ಮುನಿಸು!

ಬೆಂಗಳೂರು, ಮಾ.14– ಡಿ.ಕೆ.ಶಿವಕುಮಾರ್ ಜೊತೆ ಮೂವರು ಸಚಿವರು ಮುನಿಸು ಮುಂದುರಿಸಿದ್ದಾರಾ...! ಈ ಪ್ರಶ್ನೆ ಈಗ ಉದ್ಭವಿಸಿದೆ. ಡಿಕೆಶಿ ನಿನ್ನೆ ಆಯೋಜಿಸಿದ್ದ ಭೋಜನ ಕೂಟ ಈ ಮೂವರ ಗೈರು ಹಾಜರಿ ಇದಕ್ಕೆ ಕಾರಣ. ಡಿಸಿಎಂ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ 5 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಶಾಸಕರಿಗೆ ಸ್ಟಾರ್ ಹೋಟೆಲಿನಲ್ಲಿ ಗುರುವಾರ ರಾತ್ರಿ ಭೋಜನ ಕೂಟ ಆಯೋಜಿಸಿದ್ದರು.

ಡಿಕೆಶಿ ಜೊತೆ ದೊಡ್ಡ ಮಟ್ಟದ ಬಂಡಾಯದ ಬಾವುಟ ಹಾರಿಸಿದ್ದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಡಿನ್ನರ್‌ನಲ್ಲಿ ಭಾಗಿಯಾಗಿದ್ದರು. ಆದರೆ, ಗೃಹ ಸಚಿವ ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಮಹದೇವಪ್ಪ, ಸಹಕಾರಿ ಸಚಿವ ಕೆ.ಎನ್.ರಾಜಣ್ಣ ಆಗಮಿಸಿರಲಿಲ್ಲ. ಈ ಮೂಲಕ ಭೋಜನ ಕೂಟದಲ್ಲೂ ಡಿಕೆಶಿಯಿಂದ ಮೂವರು ಸಚಿವರು ಅಂತರ ಕಾಯ್ದುಕೊಂಡಿದ್ದಾರೆ. ಕಳೆದ ವಾರ ಡಿ.ಕೆ.ಶಿವಕುಮಾರ್ ಅವರು ಕೆ.ಎನ್.ರಾಜಣ್ಣ ಅವರ ಭೇಟಿಗಾಗಿ ಕಚೇರಿಗೆ ಬಂದಿದ್ದರು.

ಡಿಕೆಶಿ ಹಸನ್ಮುಖ; ಪರಿಷತ್‌ನಲ್ಲಿ ಆನಂದಮಯ ಚರ್ಚೆಗೆ ನಾಂದಿ!



ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಿ.ಟಿ.ರವಿ, ಎನ್.ರವಿಕುಮಾರ್ ನಡುವೆ ಹಾಸ್ಯಭರಿತ ಮಾತುಕತೆಗೆ ವಿಧಾನ ಪರಿಷತ್ ಇಂದು ಸಾಕ್ಷಿಯಾಯಿತು. ಬಿಜೆಪಿ ನಾಯಕರ ಪ್ರಶ್ನೆಗೆ, ಡಿಕೆಶಿ ಹಸನ್ಮುಖದಿಂದಲೇ ಛೇಡಿಸಿದರು. ವಿಧಾನ ಪರಿಷತ್‌ನಲ್ಲಿ ಡಿಕೆಶಿ, ಗ್ಯಾರಂಟಿ ಯೋಜನೆಗಳ ಅನುಕೂಲದ ಬಗ್ಗೆ ಮಾತನಾಡುತ್ತಿದ್ದರು. ಈ ವೇಳೆ ಸಿ.ಟಿ.ರವಿ ಗ್ಯಾರಂಟಿ ಯೋಜನೆ ಬಗ್ಗೆ ವಿರೋಧ ವ್ಯಕ್ತಪಡಿಸಿದರು. ಇಬ್ಬರು ನಾಯಕರ ಮಧ್ಯೆ ಕೆಲ ಹೊತ್ತು ಮಾತಿನ ಸಮರ ಜೋರಾಗಿ ನಡೆಯಿತು. ಇದಾದ ನಂತರ, ಶೂನ್ಯ ವೇಳೆಯಲ್ಲಿ

■ 6ನೇ ಪುಟಕ್ಕೆ

ಇನ್ನು ಗ್ರಾಮೀಣ ಜನರಿಗೂ ಇ–ಖಾತಾ; ಸಂಪುಟ ಸಮ್ಮತಿ



ಬೆಂಗಳೂರು, ಮಾ.14– ಇ–ಖಾತಾ ನಿರೀಕ್ಷೆಯಲ್ಲಿ ಇದ್ದವರಿಗೆ ಸರ್ಕಾರ ಸಿಹಿ ಸುದ್ದಿ ನೀಡಿದೆ. ಗ್ರಾಮಾಂತರ ಪ್ರದೇಶದಲ್ಲಿ ಇ–ಖಾತೆ ನೀಡಲು ಸಂಪುಟ ಒಪ್ಪಿಗೆ ನೀಡಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಧೇಯಕಕ್ಕೆ ಸಚಿವ ಸಂಪುಟ ಸಭೆ ಅಸ್ತು ಎಂದಿದೆ. ವಿಧೇಯಕ ಅಂಗೀಕರಿಸಿದರೆ ಗ್ರಾಮೀಣ ಭಾಗದ ಕಂದಾಯ ಬಡಾವಣೆ, ಗ್ರಾಮಠಾಣಾ ವ್ಯಾಪ್ತಿಯಲ್ಲಿ ಮನೆ, ನಿವೇಶನ ಸಕ್ರಮಕ್ಕೆ ಅವಕಾಶ ನೀಡಿದಂತಾಗುತ್ತದೆ. ರಾಜಧಾನಿ ಬೆಂಗಳೂರಿನಲ್ಲಿ ಆಸ್ತಿ ಮಾರಾಟ, ಖರೀದಿ ಸೇರಿದಂತೆ ಇತರೆ ಕೆಲಸಗಳಿಗೆ ಇ–ಖಾತಾ ಕಡ್ಡಾಯಗೊಳಿಸಲಾಗಿದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಎಲ್ಲಾ ಉಪ–ನೋಂದಣಿದಾರರಿಗೆ ಆಸ್ತಿ ನೋಂದಣಿಗೆ ಇ–ಆಸ್ತಿ ಮತ್ತು ಇ–ಖಾತಾ ಸಾಫ್ಟ್‌ವೇರ್ ಬಳಸುವಂತೆ ಆದೇಶಿಸಲಾಗಿದೆ ಒಂದು ವೇಳೆ ನಿಯಮ ಉಲ್ಲಂಘಿಸಿದರೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಇ–ಸ್ವತ್ತು, ಇ–ಆಸ್ತಿ ಮತ್ತು ಇ–ವಿನ್ಯಾಸ ಸುಗಮವಾಗಿ ವಿತರಿಸಲು ಅನುಕೂಲವಾಗುವಂತೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿತ್ತು. ಈಗಾಗಲೇ ಇ ಖಾತಾ ಕುರಿತು ಸೃಷ್ಟಿಯಾಗಿರುವ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಮುಂದಾಗಿತ್ತು. ಇತ್ತೀಚೆಗೆ ವಿಕಾಸಸೌಧದಲ್ಲಿ ಮೂವರು ಸಚಿವರ ನೇತೃತ್ವದಲ್ಲಿ ಇಲಾಖಾ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿತ್ತು. ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನ ಇಲಾಖೆಗಳ ಅಧಿಕಾರಿಗಳು ಒಳಗೊಂಡ ಕಾರ್ಯಪಡೆ ರಚನೆ ಸೂಚನೆ ನೀಡಲಾಗಿತ್ತು. ಕಂದಾಯ ಸಚಿವ ಕೃಷ್ಣಬೈರೇಗೌಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಪೌರಾಳಿಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ನೇತೃತ್ವದಲ್ಲಿ ನಡೆದಿದ್ದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿತ್ತು.





ಸಿಎಸ್‌ಆರ್ ನಿಧಿ ಶಾಲೆ, ಅಂಗನವಾಡಿ ಕೇಂದ್ರದ ಕಟ್ಟಡ ಕಾಮಗಾರಿಗೆ ನೀಡುವ ಚಿಂತನೆ

ಶಾಸಕ ಜಿ.ಟಿ.ದೇವೇಗೌಡರ ಪ್ರಸ್ತಾಪಕ್ಕೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಪ್ರತಿಕ್ರಿಯೆ


ಜಿ.ಟಿ.ದೇವೇಗೌಡ


ಎಂ.ಬಿ.ಪಾಟೀಲ್

ಬೆಂಗಳೂರು, ಮಾ.14(ಕೆಎಂಶಿ)– ಸಿಎಸ್‌ಆರ್ ನಿಧಿಯನ್ನು ಶಾಲೆ, ಅಂಗನವಾಡಿ ಕಟ್ಟಡ ಕಾಮಗಾರಿಗಳಿಗೆ ನೀಡುವ ಕುರಿತು ಚಿಂತನೆ ಇದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ವಿಧಾನಸಭೆಗಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಅಂಗನವಾಡಿ ಕಟ್ಟಡಗಳಿಗೂ ಸಿಎಸ್‌ಆರ್ ಅನುದಾನ ನೀಡುವ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿದೆ. ಸದ್ಯದಲ್ಲೇ ಈ ಸಂಬಂಧ ಮಾರ್ಗಸೂಚಿ ರೂಪಿಸಲಾಗುವುದು ಎಂದರು.

ಸಿಎಸ್‌ಆರ್ ಅನುದಾನ ಆರೋಗ್ಯ, ಶಿಕ್ಷಣ, ಕೌಶಲ್ಯ ತರಬೇತಿ, ಪರಿಸರ ನಿಯಂತ್ರಣ, ನೀರಿನ ಸೌಕರ್ಯ ಇತ್ಯಾದಿಗಳಿಗೆ ಉಪಯೋಗಿಸಲಾಗಿದೆ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಕೆಐಎಡಿಬಿಯಿಂದ 5 ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲಾಗಿದೆ, ಒಟ್ಟಾರೆ 1,181 ಕೈಗಾರಿಕಾ ಘಟಕಗಳಿವೆ. ಕೇಂದ್ರ ಸರ್ಕಾರದ ಕಂಪನಿ ಕಾಯ್ದೆ ಮಾರ್ಗಸೂಚಿಯಡಿ 500 ಕೋಟಿ ರೂ. ಹಾಗೂ ಹೆಚ್ಚಿನ ನಿವ್ವಳ ಮೌಲ್ಯವಿರುವ ಅಥವಾ 1000 ಕೋಟಿ ಹಾಗೂ ಹೆಚ್ಚಿನ ವಹಿವಾಟು ಕಂಪನಿಗಳು ಸಿಎಸ್‌ಆರ್ ನಿಧಿ ಹಣ ನೀಡಬೇಕು. ಐದು ಕೋಟಿ ರೂ. ಹಾಗೂ ಹೆಚ್ಚಿನ ನಿವ್ವಳ ಲಾಭ ಹೊಂದಿರುವ ಉದ್ಯಮಗಳು ಹಿಂದಿನ 3 ವರ್ಷಗಳ ಕನಿಷ್ಠ ಶೇ.2ರಷ್ಟು ಸರಾಸರಿ ನಿವ್ವಳ ಲಾಭಾಂಶವನ್ನು ಸಿಎಸ್‌ಆರ್ ಯೋಜನೆ, ಕಾರ್ಯಕ್ರಮಗಳಿಗೆ ಖರ್ಚು ಮಾಡಬೇಕಿದೆ ಎಂದರು.

ಸಿಎಸ್‌ಆರ್ ಫಂಡ್ ಸ್ಥಳೀಯ ಅಂಗನವಾಡಿ, ಸರ್ಕಾರಿ ಶಾಲೆಗಳಿಗೆ ಮಾತ್ರವೆ ಬಳಸಲು ಅವಕಾಶ ಕಲ್ಪಿಸಿ

ಮೈಸೂರು, ಮಾ.14(ಜಿಎ)–ಆಯಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಕೈಗಾರಿಕೆಗಳಿಂದ ಬರುವ ಸಿಎಸ್‌ಆರ್ ಫಂಡ್ ಅನ್ನು ಆಯಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಂಗನವಾಡಿ ಕೇಂದ್ರ, ಸರ್ಕಾರಿ ಶಾಲೆಗಳಿಗೆ ಬಳಸಲು ಅವಕಾಶ ನೀಡಿದರೆ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಸರ್ಕಾರಕ್ಕೆ ಮನವಿ ಮಾಡಿದರು. ಬಜೆಟ್ ಅಧಿವೇಶನದ ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ಜಿ.ಟಿ.ದೇವೇಗೌಡರು, ನನ್ನ ಮತಕ್ಷೇತ್ರ ವ್ಯಾಪ್ತಿಯಲ್ಲಿ ಹೆಬ್ಬಾಳು, ಹೂಟಗಳ್ಳಿ, ಬೆಳವಾಡಿ, ಕಡಕೋಳ ಕೈಗಾರಿಕಾ ಪ್ರದೇಶಗಳಿದ್ದು, ಇಲ್ಲಿ ಒಟ್ಟು 1299 ಕೈಗಾರಿಕಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿನ ಕೈಗಾರಿಕಾ ಘಟಕಗಳಿಂದ ಬರುವ ಸಿಎಸ್‌ಆರ್ ನಿಧಿಯನ್ನು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ, ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣ, ಸರ್ಕಾರಿ ಶಾಲೆಗಳ ಕೊಠಡಿ ನಿರ್ಮಾಣ, ಪೀಠೋಪಕರಣ ಖರೀದಿಗೆ ಬಳಕೆ ಮಾಡುವುದು ಒಳ್ಳೆಯದು. ಹೀಗೆ ಹಾಗಾಗಿ ಒಂದೊಂದು ಶಾಲೆಯನ್ನು ತೆಗೆದುಕೊಂಡು ನಿಧಿ ಒದಗಿಸಿದರೆ, ಅವುಗಳ ಸ್ಥಿತಿ ಸುಧಾರಿಸುತ್ತಿತ್ತು. ಆದ್ದರಿಂದ ಈಗಲಾದರೂ ಸಿಎಸ್‌ಆರ್ ಫಂಡ್ ಅನ್ನು ಅಂಗನವಾಡಿ ಮತ್ತು ಸರ್ಕಾರಿ ಶಾಲೆಗಳ ಸುಧಾರಣೆಗೆ ನೀಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದರು.

ಈ ಹಿಂದೆ ಕೈಗಾರಿಕೆ ಸ್ಥಾಪನೆಗೆ ಸರ್ಕಾರದಿಂದಲೇ ಕಡಿಮೆ ದರದಲ್ಲಿ ಭೂಮಿ, ನೀರು, ವಿದ್ಯುಚ್ಛಕ್ತಿ ಎಲ್ಲವನ್ನೂ ನೀಡಿದರೂ, ಭೂಮಿ ಕಳೆದುಕೊಂಡ ಕುಟುಂಬದವರಿಗೆ ಆ ಕೈಗಾರಿಕಾ ಘಟಕದಲ್ಲಿ ನೌಕರಿ ನೀಡುತ್ತಿಲ್ಲ. ಹಾಗಾಗಿ ಆ ಭಾಗದ ರೈತರ ಮಕ್ಕಳಿಗೆ ಶಿಕ್ಷಣ ಕೊಡುವ ಸಲುವಾಗಿಯಾದರೂ ಸಿಎಸ್‌ಆರ್ ನಿಧಿಯನ್ನು ಬಳಸಬೇಕು. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ಇದೆ. ಅದು ಸಿಎಸ್‌ಆರ್ ಫಂಡ್ ಲಭ್ಯತೆ ಪರಿಶೀಲನೆ ಮಾಡುತ್ತದೆ. ಸ್ಥಳೀಯ ಶಾಸಕರನ್ನು ಸದರಿ ಸಮಿತಿಗೆ ಸದಸ್ಯರನ್ನಾಗಿ ಮಾಡಿದರೆ, ಸಿಎಸ್‌ಆರ್ ಫಂಡ್ ಯಾವ ರೀತಿ ಬಳಕೆಯಾಗುತ್ತಿದೆ, ಜಮೀನು ಕಳೆದುಕೊಂಡವರಿಗೆ ನೌಕರಿ ಲಭ್ಯವಾಗದೇ ಇರುವುದನ್ನು ಗಮನಕ್ಕೆ ತರಬಹುದು. ಅಲ್ಲದೆ, ಸಿ.ಎಸ್.ಆರ್. ಫಂಡ್ ಅನ್ನು ಹಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿಗಳ ಸುಧಾರಣೆಗೆ ಮಾತ್ರವೇ ಉಪಯೋಗಿಸಬೇಕೆಂದು ಕೂಡಲೇ ತೀರ್ಮಾನ ಮಾಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

ತೆಂಗಿನ ಮರಕ್ಕೆ ರೋಗಭಾದೆ: ಸಿ.ಬಿ.ಸುರೇಶ್‌ಬಾಬು ಅವರ ಪ್ರತ್ಯೇಕ ಪ್ರಸ್ತಾವಕ್ಕೆ ತೋಟಗಾರಿಕಾ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಪರವಾಗಿ ಉತ್ತರಿಸಿದ ಪಾಟೀಲ್, ರಾಜ್ಯದ 14 ಜಿಲ್ಲೆಗಳ 1,48,448 ಹೆಕ್ಟೇರ್‌ನಲ್ಲಿನ ತೆಂಗಿನ ಮರಗಳಿಗೆ ಬಿಳಿನೊಣ, ಕೀಟಬಾಧೆ ಕಂಡು ಬಂದಿದ್ದು, ಮರಗಳಲ್ಲಿ ನೈಸರ್ಗಿಕ ರೋಗ ನಿರೋಧಕ ಶಕ್ತಿ ವೃದ್ಧಿ ಮೂಲಕ ಕೀಟ ಮತ್ತು ರೋಗಬಾಧೆ ಪರಿಣಾಮಕಾರಿಯಾಗಿ ನಿಯಂತ್ರಿಸಬಹುದು ಎಂದರು.

ಸಮಗ್ರ ಪೋಷಕಾಂಶ, ಕೀಟ ಹಾಗೂ ರೋಗಗಳ ನಿರ್ವಹಣೆಗೆ ಪ್ರಸಕ್ತ ಸಾಲಿನಲ್ಲಿ 15.31 ಕೋಟಿ ರೂ. ಅನುದಾನವನ್ನು ತೆಂಗು ಅಭಿವೃದ್ಧಿ ಮಂಡಳಿ ಯೋಜನೆಯಡಿ ಒದಗಿಸಲಾಗಿದೆ, ಬಿಳಿನೊಣ ಕೀಟಬಾಧೆ ತಡೆಗಟ್ಟಲು ಡ್ರೋನ್ ಮೂಲಕ ರಾಸಾಯನಿಕ ಔಷಧ ಸಿಂಪಡಿಸುವ ಕಾರ್ಯಕ್ರಮ ಕೈಗೊಂಡಿಲ್ಲ ಎಂದು ಸ್ಪಷ್ಟಪಡಿಸಿದರು.

ವಿಧಾನಮಂಡಲ ಕಲಾಪ

ಖರ್ಗೆ ಹಾಲು ಕುಡಿದಷ್ಟು, ನಾನು ನೀರು ಕುಡಿದಿಲ್ಲ’

ಪರಿಷತ್‌ನಲ್ಲಿ ಟಿಎ ಶರವಣ ಮಾತಿಗೆ ಪ್ರಿಯಾಂಕ್ ಕೆಂಡಾಮಂಡಲ

ಬೆಂಗಳೂರು, ಮಾ.14– ಹಾಲಾದರೂ ಕುಡಿತಿವಿ, ನೀರಾದರೂ ಕುಡಿತಿವಿ ಇವರಿಗೆ ಯಾಕೆ ಅದೆಲ್ಲ, ಇವರಿಗೆ ಏನು ಬೇಕು? ಎಂದು ಟಿಎ ಶರವಣ ವಿರುದ್ಧ ಸಚಿವ ಪ್ರಿಯಾಂಕ್ ಖರ್ಗೆ ಗರಂ ಆದ ಘಟನೆ ನಡೆಯಿತು.

ಇಂದು ಪರಿಷತ್ ಕಲಾಪ ವೇಳೆ, ‘ಪ್ರಿಯಾಂಕ್ ಖರ್ಗೆ ಹಾಲು ಕುಡಿದಷ್ಟು ನಾನು ನೀರು ಕುಡಿದಿಲ್ಲ’ ಎಂಬ ಶರವಣ ಮಾತಿಗೆ ಕೆಂಡಾಮಂಡಲರಾದ ಪ್ರಿಯಾಂಕ್ ಖರ್ಗೆ, ನನ್ನ ಕಂಡರೆ ನಿಮಗೆ ಯಾಕೆ ಅಸಹನೆ? ನಾನು ಇಲ್ಲಿ ಯಾರ ಮರ್ಜಿ, ಮುಲಾಜಿನಲ್ಲಿ ಬಂದಿಲ್ಲ. ಅರ್ಹತೆ ಮೇಲೆ ಬಂದಿದ್ದೇನೆ. ನಿಮ್ಮ ಭಿಕ್ಷೆಯಿಂದ ಅಥವಾ ಯಾರದ್ದೋ ಭಿಕ್ಷೆಯಿಂದ ನಾನಿಲ್ಲಿಗೆ ಬಂದಿಲ್ಲ. ಯಾವಾಗಲೂ ನಾನು ಎದ್ದು ನಿಂತು ಮಾತಾಡಿದಾಗ ಅಸಹನೆ ತೋರಿಸುತ್ತಾರೆ. ಜನರ ಕೃಪೆಯಿಂದ ನಾನು, ಮಲ್ಲಿಕಾರ್ಜುನ ಖರ್ಗೆಯವರು ಇಷ್ಟರ ಮಟ್ಟಕ್ಕೆ ಬಂದಿದ್ದೇವೆ. ನಮ್ಮ ಸಮುದಾಯದವರು ಹಾಲು ಕುಡಿಬಾರ್ದಾ ಎಂದು ಪ್ರಶ್ನಿಸಿದರು. ಈ ವೇಳೆ ನಾನು ಏನು ತಪ್ಪು ಮಾತನಾಡಿದೆ ಹೇಳಿ ಎಂದು ಶರವಣ ಮರುಪ್ರಶ್ನಿಸಿದರು.



ಪ್ರಿಯಾಂಕ್ ಖರ್ಗೆ

ಈ ವೇಳೆ ಪ್ರಿಯಾಂಕ್ ಖರ್ಗೆ ಬೆಂಬಲಕ್ಕೆ ಬಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರಿಯಾಂಕ್ ಖರ್ಗೆ ಅರ್ಹತೆಯಿಂದ ಬಂದವರು. ಅವರು ನಮ್ಮ ಪಾರ್ಟಿಯ ಧ್ವನಿ. ಯಾರು ಏನು ಕುಡಿತಾರೆ ಅಂತಾ ನಾವು ಕೇಳೋಕಾಗುತ್ತಾ. ನಾನು ಬೆಳಗ್ಗೆ ಎದ್ದರೆ ವಿಸ್ಕಿ ಕುಡಿತೀನಿ, ಅದನ್ನು ಯಾಕೆ ಅಂತ ಕೇಳೋಕಾಗುತ್ತಾ ಎಂದರು.

ಈ ವೇಳೆ ಪುನಃ ತನ್ನ ಮಾತು ಸಮರ್ಥಿಸಿಕೊಂಡ ಶರವಣ, ನಾನು ಪ್ರಿಯಾಂಕ್ ಖರ್ಗೆ ಬಗ್ಗೆ ಒಳ್ಳೆಯ ಮನಸ್ಸಿನಿಂದ ಹೇಳಿದ್ದೇನೆಯೇ ಹೊರತು ಯಾವುದೇ ಉದ್ದೇಶವಿಲ್ಲ. ನನ್ನ ಹೇಳಿಕೆಯನ್ನು ಅಪಾರ್ಥ ಮಾಡಿಕೊಂಡಿದ್ದಾರೆ. ಅವರು ಅಪಾರ್ಥ ಮಾಡಿಕೊಂಡಿದ್ದರೆ ನಾನು ಏನು ಮಾಡಲಿಕ್ಕೆ ಆಗುತ್ತೆ. ನನ್ನ ಬಗ್ಗೆ, ನನ್ನ ವೃತ್ತಿ ಬಗ್ಗೆಯೂ ಕೆಲವರು ಪದೇ ಪದೇ ಮಾತನಾಡುತ್ತಾರೆ. ಹಾಗಾಂತ ಅವರ ಮೇಲೆ ಕೋಪಿಸಿಕೊಳ್ಳಲಿಕ್ಕೆ ಆಗುತ್ತದೆಯೇ. ಎಲ್ಲವನ್ನೂ ದೇವರು ನೋಡಿಕೊಳ್ಳುತ್ತಾನೆ ಎಂದರು.

ಕಾರ್ಮಿಕ ಇಲಾಖೆ ಕೊಟ್ಟಿರುವ ನ್ಯೂಟ್ರಿಷನ್ ಕಿಟ್‌ನಲ್ಲಿ ಭಾರೀ ಅಕ್ರಮ

ತನಿಖೆಗೆ ಬಿಜೆಪಿ ಎಂಎಲ್‌ಸಿ ರವಿಕುಮಾರ್ ಒತ್ತಾಯ


ರವಿಕುಮಾರ್

ಬೆಂಗಳೂರು, ಮಾ.14– ರಕ್ತಹೀನತೆ ಇರುವ ಕಟ್ಟಡ ಕಾರ್ಮಿಕರಿಗೆ ಹಂಚಿಕೆ ಮಾಡಿರುವ ನ್ಯೂಟ್ರಿಷನ್ ಕಿಟ್‌ನಲ್ಲಿ ಭಾರೀ ಅಕ್ರಮವಾಗಿದೆ. ಈ ಕುರಿತು ತನಿಖೆ ನಡೆಸಬೇಕು ಎಂದು ಬಿಜೆಪಿ ಸದಸ್ಯ ರವಿಕುಮಾರ್ ಕಾರ್ಮಿಕ ಸಚಿವರನ್ನು ಒತ್ತಾಯ ಮಾಡಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಮಾತನಾಡಿದ ರವಿಕುಮಾರ್, ಕಾರ್ಮಿಕ ಇಲಾಖೆ ಹಂಚಿಕೆ ಮಾಡಿರುವ ನ್ಯೂಟ್ರಿಷನ್ ಕಿಟ್‌ನಲ್ಲಿ ಕೊಟ್ಟಿರುವ ಸಾಮಗ್ರಿಗಳಲ್ಲಿ ಅಕ್ರಮ ನಡೆದಿದೆ. ಮಾರುಕಟ್ಟೆಯಲ್ಲಿ ಒಂದು ರೇಟ್ ಇದ್ದರೆ ಕಾರ್ಮಿಕ ಇಲಾಖೆ ಹೆಚ್ಚು ಹಣ ಕೊಟ್ಟು ಖರೀದಿ ಮಾಡಿದೆ. ಮಹಾನಾರಾಯಣ ತೈಲ, ಚ್ಯವನ ಪ್ರಾಶ ಸೇರಿ ಹಲವು ಸಾಮಗ್ರಿಗಳಿಗೆ ಹೆಚ್ಚು ಹಣ ಕೊಡಲಾಗಿದೆ. ಮಾರುಕಟ್ಟೆಯಲ್ಲಿ 600–700 ರೂ.ಗೆ ಒಂದು ಕಿಟ್ ಸಿಗುತ್ತದೆ. ಆದರೆ ಕಾರ್ಮಿಕ ಇಲಾಖೆ ಒಂದು ಕಿಟ್‌ಗೆ 2,600 ರೂಪಾಯಿ ನೀಡಿದೆ ಎಂದು ಕಿಟ್ ಪದಾರ್ಥಗಳನ್ನು ಸದನದಲ್ಲಿ ಪ್ರದರ್ಶಿಸಿ, ತನಿಖೆಗೆ ಆಗ್ರಹಿಸಿದರು.

ಇದಕ್ಕೆ ಸಚಿವ ಸಂತೋಷ್ ಲಾಡ್ ಉತ್ತರಿಸಿ, ರಕ್ತಹೀನತೆ ಇರುವ ಕಟ್ಟಡ ಕಾರ್ಮಿಕರಿಗೆ 75 ಕೋಟಿ ರೂ. ವೆಚ್ಚದಲ್ಲಿ ಪ್ರತಿ ಜಿಲ್ಲೆಗೆ 26 ಸಾವಿರ ನ್ಯೂಟ್ರೀಷನ್ ಕಿಟ್‌ಗಳನ್ನು ಹಂಚಿಕೆ ಮಾಡಿದ್ದೇವೆ. ಒಟ್ಟು 12 ಲಕ್ಷ ಕಿಟ್ ವಿತರಣೆ ಆಗಿದೆ. ಟೆಂಡರ್ ಪ್ರಕ್ರಿಯೆ ಮೂಲಕವೇ ಕಿಟ್ ಹಂಚಿಕೆ ಆಗಿದೆ. ಬಿಜೆಪಿ ಅವಧಿಯಲ್ಲಿ ನ್ಯೂಟ್ರಿಷನ್ ಕಿಟ್ ಯೋಜನೆ ಅಪ್ರೂವ್ ಆಗಿದೆ. ಟೆಂಡರ್ ಪ್ರಕ್ರಿಯೆ ಮೂಲಕವೇ ಕಿಟ್ ಖರೀದಿ ಆಗಿದೆ ಟೆಂಡರ್‌ನಲ್ಲಿ ಲೋಪ ಆಗಿದ್ದರೆ ಹೇಳಿ. ಟೆಂಡರ್‌ಗೆ ನಾವು ಸಹಾಯ ಮಾಡಲು ಆಗೊಲ್ಲ. ಕಿಟ್ ಕೊಟ್ಟು ಒಂದು ವರ್ಷ ಆಗಿದೆ. ಟೆಂಡರ್‌ನಲ್ಲಿ ಯಾವುದೇ ಅಕ್ರಮವಾಗಿಲ್ಲ. ಎಲ್ಲದ್ದಕ್ಕೂ ಬಹಿರಂಗವಾಗಿ ಭ್ರಷ್ಟಾಚಾರ ಅಂತ ಹೇಳೋದು ಸರಿಯಲ್ಲ. ಅಕ್ರಮದ ದಾಖಲಾತಿ ಇದ್ದರೆ ಕೊಡಿ ತನಿಖೆ ಮಾಡಿಸ್ತೀನಿ ಎಂದು ತಿಳಿಸಿದರು.

ಮೈಸೂರು ಸೇರಿ 12,992 ಬಾಡಿಗೆ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರ

ಶಾಸಕ ಕೆ.ಹರೀಶ್‌ಗೌಡರ ಪ್ರಶ್ನೆಗೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಉತ್ತರ

ಬೆಂಗಳೂರು, ಮಾ.14(ಬಿಎಲ್‌ಯು)–ಸ್ವಂತ ಕಟ್ಟಡವಿಲ್ಲದ ಕಾರಣ ಮೈಸೂರು ಸೇರಿದಂತೆ ರಾಜ್ಯದ 12,992 ಬಾಡಿಗೆ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರ ನಡೆಯುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಆರ್.ಹೆಬ್ಬಾಳ್ಕರ್ ತಿಳಿಸಿದರು.

ವಿಧಾನಸಭಾ ಅಧಿವೇಶನದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಲಕ್ಷ್ಮಿ ಹೆಬ್ಬಾಳ್ಕರ್ ಅವರು, ರಾಜ್ಯದಲ್ಲಿ 47,293 ಸ್ವಂತ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರ ನಡೆಯು ತ್ತಿದೆ ಎಂದು ಮಾಹಿತಿ ನೀಡಿದರು. ಶಾಲಾ ಕಟ್ಟಡಗಳಲ್ಲಿ 4803, ಇತರೆ ಸರ್ಕಾರಿ ಕಟ್ಟಡದಲ್ಲಿ 3742, ಬಾಡಿಗೆ ರಹಿತ ಕಟ್ಟಡದಲ್ಲಿ 1089 ಸೇರಿದಂತೆ ರಾಜ್ಯದಲ್ಲಿ ಒಟ್ಟು 69,919 ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರ ನಡೆಯುತ್ತಿದೆ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ತಿಳಿಸಿ ದರು. ಮೈಸೂರಿನ ಚಾಮರಾಜ ಕ್ಷೇತ್ರದಲ್ಲಿ ಒಟ್ಟು 9 ಅಂಗನವಾಡಿ ಕೇಂದ್ರಗಳು ಬಾಡಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇದ ರಲ್ಲಿ ಒಂದು ಅಂಗನವಾಡಿ ಕೇಂದ್ರ ವನ್ನು 20 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ನಿವೇಶನ ಮತ್ತು ಅನುದಾನದ ಲಭ್ಯತೆಗನುಗುಣವಾಗಿ ಉಳಿತ ಅಂಗನವಾಡಿ ಕೇಂದ್ರಗಳಿಗೆ ಹಂತ ಹಂತವಾಗಿ ಸ್ವಂತ ಕಟ್ಟಡ ನಿರ್ಮಿಸಲಾಗುವುದು ಎಂದು ಹೇಳಿದರು.

ರಾಜ್ಯದ 68,781 ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯವಿದ್ದು, 1138 ಶೌಚಾಲವಿಲ್ಲ. ಹಾಗೆಯೇ 68,245 ಅಂಗನವಾಡಿ ಕೇಂದ್ರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದ್ದು, 674 ಕೇಂದ್ರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಅಂಕಿ ಅಂಶ ಸಹಿತ ಮಾಹಿತಿ ನೀಡಿದ್ದಾರೆ.


ಲಕ್ಷ್ಮಿ ಹೆಬ್ಬಾಳ್ಕರ್

ವಿಕಲಚೇತನರಿಗೆ ಸಹಾಯ ಧನ: ರಾಜ್ಯದಲ್ಲಿ ವಿಕಲಚೇತನರಿಗೆ ಸರ್ಕಾರದಿಂದ ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ ಯೋಜನೆ, ನಿರಾಮಯ ಆರೋಗ್ಯ ವಿಮಾ ಯೋಜನೆ ಹಾಗೂ ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಗಳು ಜಾರಿಯಲ್ಲಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದರು. ಶುಕ್ರವಾರ ವಿಧಾನಪರಿಷತ್‌ನಲ್ಲಿ ವೈ.ಎಂ.ಸತೀಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ವಿಕಲಚೇತನರಿಗಾಗಿ ಪ್ರಮುಖ ಮೂರು ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದರು.


ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ ಯೋಜನೆಯಡಿ ಶಸ್ತ್ರಚಿಕಿತ್ಸೆಯ ಮುಖಾಂತರ ವಿಕಲಚೇತನತೆಯನ್ನು ನಿವಾರಣೆ ಮಾಡಿಕೊಳ್ಳಲು ಅಥವಾ ಕಡಿಮೆ ಮಾಡಿಕೊಳ್ಳಲು ಎಲ್ಲಾ ಸರ್ಕಾರಿ ಆಸ್ಪತ್ರೆಗಳು ಅಥವಾ ಕರ್ನಾಟಕದ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು 1 ಲಕ್ಷ ರೂಪಾಯಿವರೆಗೆ ಸಹಾಯ ಧನ ಮಂಜೂರು ಮಾಡಲಾಗುತ್ತಿದೆ ಎಂದು ಹೇಳಿದರು.

ಪ್ರಸ್ತುತ ರಾಜ್ಯದಲ್ಲಿ ನ್ಯಾಷನಲ್ ಟ್ರಸ್ಟ್ ಆಕ್ಟ್ ಅಡಿಯಲ್ಲಿ ನಿರಾಮಯ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ವಿಕಲಚೇತನ ವ್ಯಕ್ತಿ ಒಂದು ಬಾರಿ ವಾರ್ಷಿಕ 250 ರೂಪಾಯಿ ಗಳನ್ನು ಸರ್ಕಾರದಿಂದ ವಿಮಾ ಕಂತಾಗಿ ಪಾವತಿಸಿ ಪ್ರತಿವರ್ಷ ಒಂದು ಲಕ್ಷದವರೆಗೆ ಉಚಿತವಾಗಿ ವೈದ್ಯಕೀಯ ಸೌಲಭ್ಯ ಪಡೆಯಬಹುದು ಎಂದರು.

ಮೈಸೂರಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಕೆಗೆ ಹಳೇ ದರ ನಿಗಧಿಗೆ ಶಾಸಕ ಕೆ.ಹರೀಶ್‌ಗೌಡರ ಆಗ್ರಹ

- ವಿಧಾನಸಭೆಯಲ್ಲಿ ಸವಿಸ್ತಾರವಾಗಿ ವಿಷಯ ಪ್ರಸ್ತಾಪಿಸಿದ ಗೌಡರು
- ದರ ಕಡಿತದಿಂದ ಪಾಲಿಕೆಗೆ ಆಗುವ ಭಾರೀ ನಷ್ಟದ ಬಗ್ಗೆ ವಿವರಣೆ
- ಇಂಧನ ಸಚಿವ ಕೆ.ಜೆ.ಜಾರ್ಜ್‌ರಿಂದ ದರ ಪರಿಷ್ಕರಣೆ ಭರವಸೆ


ಕೆ.ಹರೀಶ್‌ಗೌಡ


ಕೆ.ಜೆ. ಜಾರ್ಜ್

ಬೆಂಗಳೂರು, ಮಾ.14– ಮೈಸೂರು ಮಹಾನಗರ ಪಾಲಿಕೆಯ ಹಿತದೃಷ್ಟಿಯಿಂದ ಮನೆ ಮನೆಗೆ ನೈಸರ್ಗಿಕ ಅನಿಲ ಪೂರೈಸುವ ಗ್ಯಾಸ್ ಪೈಪ್ ಲೈನ್ ಕಾಮಗಾರಿಗೆ ಹಳೇ ದರವನ್ನೇ ಪುನರ್ ನಿಗಧಿಪಡಿಸಬೇಕು ಹಾಗೂ ಇತರೆ ಖಾಸಗಿ ಯುಜಿ ಕೇಬಲ್ ಅಳವಡಿಕೆಗೆ ನಿಗಧಿಪಡಿಸಿರುವ ದರವನ್ನು ಯಾವುದೇ ಕಾರಣಕ್ಕೂ ಇಳಿಕೆ ಮಾಡಬಾರದು ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ, ಸರ್ಕಾರವನ್ನು ಒತ್ತಾಯಿಸಿದ್ದಾರೆ.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ಗ್ಯಾಸ್ ಪೈಪ್ ಲೈನ್ ಅಳವಡಿಕೆ ಕಾಮಗಾರಿಗೆ ನಿಗಧಿಪಡಿಸಲಾಗಿದ್ದ ದರವನ್ನು ಭಾರೀ ಪ್ರಮಾಣದಲ್ಲಿ ಇಳಿಕೆ ಮಾಡಿರುವುದರಿಂದ ನಗರ ಪಾಲಿಕೆಗೆ ಆರ್ಥಿಕ ನಷ್ಟವಾಗಿದೆ. ಇದೀಗ ಇದೇ ಮಾನದಂಡದಲ್ಲಿ ಇತರೆ ಖಾಸಗಿ ಕಂಪನಿಗಳೂ ಯುಜಿ ಕೇಬಲ್ ಅಳವಡಿಕೆ ದರವನ್ನು ಕಡಿಮೆ ಮಾಡಿಸುವ ಪ್ರಯತ್ನ ನಡೆದಿದೆ. ಹೀಗಾದರೆ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳಾಗುವುದಿಲ್ಲ ಎಂದು ವಿವರಿಸಿದರು.

ನಗರ ಪಾಲಿಕೆ ವ್ಯಾಪ್ತಿಯಲ್ಲಿ ಗ್ಯಾಸ್ ಪೈಪ್‌ಲೈನ್ ಅಳವಡಿಸಲು ದರ ನಿಗಧಿಗೊಳಿಸಿ, 2021ರ ಆ.10ರ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಅದರಂತೆ ಸಾರ್ವಜನಿಕ ರಸ್ತೆಯನ್ನು ಓಪನ್ ಟ್ರೆಂಚ್ ಮೂಲಕ ಕತ್ತರಿಸಿದರೆ ಪ್ರತಿ ಮೀಟರ್‌ಗೆ 2,250 ರೂ. ಅಥವಾ ಹೆಚ್‌ಡಿಡಿ ಮೂಲಕ ಅಳವಡಿಸಿದರೆ ಮೀಟರ್‌ಗೆ 1000 ರೂ. ಪಾವತಿಸಬೇಕೆಂದು ನಿರ್ಧರಿಸಲಾಗಿತ್ತು. ಬಳಿಕ ಸರ್ಕಾರದ ಆದೇಶದಂತೆ ರಸ್ತೆ ಕತ್ತರಿಸಲು ಪ್ರತಿ ಮೀಟರ್‌ಗೆ 1857 ರೂ. ಅನುಮತಿ ಶುಲ್ಕ ಹಾಗೂ 100 ರೂ. ಮೇಲ್ವಿಚಾರಣಾ ಶುಲ್ಕವನ್ನು ನಿಗದಿಪಡಿಸಲಾಗಿತ್ತು. ಇದರಂತೆ ಸುಮಾರು 45 ಕಿ.ಮೀ. ಗ್ಯಾಸ್ ಪೈಪ್ ಲೈನ್‌ಗೆ ಅನುಮತಿ ನೀಡಿ 9,64,21,500 ರೂ. ಪಾವತಿಸಿಕೊಳ್ಳಲಾಗಿದೆ. ಆದರೆ ‘ನಗರ ಅನಿಲ ವಿತರಣಾ ಜಾಲದ ಅಭಿವೃದ್ಧಿಗೆ ರಾಜ್ಯದ ನೀತಿ’ ಕುರಿತ 2023ರ ನವೆಂಬರ್ 7ರ ಆದೇಶದಲ್ಲಿ ಗ್ಯಾಸ್ ಪೈಪ್ ಲೈನ್ ಹಾಕಲು ಅನುಮತಿಗಳನ್ನು ಕೈಗೆಟಕುವ ದರದಲ್ಲಿ ಒದಗಿಸುವ ಅಗತ್ಯವಿದೆ. ಅನುಮತಿ ಮತ್ತು ಮೇಲ್ವಿಚಾರಣಾ ಶುಲ್ಕಗಳು ಪ್ರತಿ ಕಿ.ಮೀ.ಗೆ ಸಾವಿರ ರೂ. ಆಗಿರಬೇಕು ಎಂದು ಸೂಚಿಸಲಾಗಿದೆ. ಅನುಮತಿ ಮತ್ತು ಮೇಲ್ವಿಚಾರಣಾ ಶುಲ್ಕ ಸೇರಿ ಪ್ರತಿ ಮೀಟರ್‌ಗೆ 1957 ರೂ. ಇದ್ದ ದರವನ್ನು ಏಕಾಏಕಿ ಪ್ರತಿ ಮೀಟರ್‌ಗೆ ಕೇವಲ 1 ರೂ.ಗೆ ಇಳಿಕೆ ಮಾಡಲಾಗಿದೆ. ಅಂದರೆ ಕಿ.ಮೀ.ಗೆ ಕೇವಲ ಸಾವಿರ ರೂ. ಆಗುತ್ತದೆ. ಇದರಿಂದ ಪಾಲಿಕೆಗೆ 25.65 ಕೋಟಿಗೂ ಹೆಚ್ಚು ಆರ್ಥಿಕ ನಷ್ಟ ಉಂಟಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಈ ನೀತಿಯಿಂದ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಸ್ಥಳೀಯ ಸಂಸ್ಥೆಗಳ ರಾಜಸ್ವದ ಕೊರತೆ ಹಾಗೂ ಸಾರ್ವಜನಿಕರಿಗೆ ಕಲ್ಪಿಸಬೇಕಿರುವ ಮೂಲ ಸೌಕರ್ಯಗಳ ಬಗ್ಗೆ ಅಧ್ಯಯನ ನಡೆಸದೇ ದಿಢೀರ್ ಪರಿಷ್ಕೃತ ದರ ಜಾರಿಗೊಳಿಸಿರುವುದು ವಿಷಾದನೀಯ. ಪಾಲಿಕೆ ವತಿಯಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ. ಅಲ್ಲದೆ ಪೈಪ್ ಲೈನ್ ಕಾಮಗಾರಿಗಳಿಂದ ಉತ್ತಮ ರಸ್ತೆಗಳು ಹಾಳಾಗುತ್ತಿವೆ. ಇದರ ನಡುವೆ ಗ್ಯಾಸ್ ಪೈಪ್ ಲೈನ್ ದರ ಪರಿಷ್ಕರಣೆ ಮಾನದಂಡದಲ್ಲೇ ಇತರೆ ಯುಜಿ ಕೇಬಲ್ ಅಳವಡಿಕೆ ದರವನ್ನೂ ಕಡಿಮೆ ಮಾಡುವಂತೆ ಖಾಸಗಿ ಕಂಪನಿಗಳು ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ತಿಳಿದುಬಂದಿದೆ. ಯಾವುದೇ ಕಾರಣಕ್ಕೂ ಯುಜಿ ಕೇಬಲ್ ಅಳವಡಿಕೆ ಕಾಮಗಾರಿಗೆ ನಿಗಧಿಪಡಿಸಿರುವ ದರವನ್ನು ಕಡಿಮೆ ಮಾಡಬಾರದು. ಜೊತೆಗೆ ಗ್ಯಾಸ್ ಪೈಪ್ ಲೈನ್ ಕಾಮಗಾರಿಯ ಪ್ರತಿ ಮೀಟರ್‌ಗೆ ಹಿಂದಿನಂತೆ 1957 ರೂ.ಗಳನ್ನು ಪುನರ್ ನಿಗಧಿಪಡಿಸಬೇಕೆಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಇಂಧನ ಸಚಿವ ಕೆ.ಜೆ.ಜಾರ್ಜ್, ಗ್ಯಾಸ್ ಪೈಪ್ ಲೈನ್ ಅಳವಡಿಕೆಯ ದರ ಹೆಚ್ಚಿಸುವ ಸಂಬಂಧ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಮೊದಲನೇ ವರ್ಷದ ಸವಿನೆನಪು




ದಿ॥ ಶ್ರೀ ಅವಿನಾಶ್.ಎ

ಜನನ: 25.05.1991 ನಿಧನ: 15.03.2024

ಆರ್.ಎಸ್.ನಾಯ್ಡುನಗರ, ಮೈಸೂರು

ಸದಾ ನಿನ್ನ ನೆನಪಿನಲ್ಲಿರುವ ತಂದೆ ತಾಯಿ ಮತ್ತು ಕುಟುಂಬವರ್ಗದವರು



ಮೃದಂಗ ವಿದ್ವಾನ್ ವಿ.ನಾಗಭೂಷಣಾಚಾರ್

ನಿವೃತ್ತ-ಪ್ರಾಧ್ಯಾಪಕರು, ಲಲಿತಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ಸ್ಮರಿಸುತ್ತಿರುವ ತಮ್ಮ ಶಿಷ್ಯ : ಎಂ.ಆರ್.ಉದಯ್‌ಕುಮಾರ್, ನಿವೃತ್ತ ಕರ್ನಾಟಕ ಪೊಲೀಸ್ ಬ್ಯಾಂಡ್ ಮ್ಯೂಸಿಷಿಯನ್, ಮೈಸೂರು

ನಕ್ಕರೆ ಅದೇ ಸ್ವರ್ಗ

ಗಿರಾಕಿ : ಒಂದು ಕೆಜಿ ಚಿಪ್ಸ್‌ಗೆ ಎಷ್ಟು ರೂಪಾಯಿ?
ಅಂಗಡಿಯಾತ : 80 ರೂಪಾಯಿ
ಗಿರಾಕಿ : ಲೂಸ್ ತಗೊಂಡರೆ?
ಅಂಗಡಿಯಾತ : ಯಾರ್ ತಗೊಂಡ್ರು ಅಷ್ಟೇ!

ಮೈಸೂರು ಮಿತ್ರ

ಶನಿವಾರ, 15 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ನೀವೇನು ಅಂದುಕೊಂಡಿರುವಿರೋ ಅದಕ್ಕಿಂತ ಹೆಚ್ಚಿನದನ್ನು ಸಾಧಿಸಬಲ್ಲಿರಿ, ನಿಸ್ಸಂಶಯವಾಗಿಯೂ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಜ್ಜನರ ಮಾತು ಸಿಹಿ, ದುರ್ಜನರ ತುತ್ತು ಕಹಿ.

ನಿಮ್ಮ ಪತ್ರಗಳು

ಚಿನ್ನದ ಸ್ಮಗ್ಲಿಂಗ್‌ಗೆ ಕಡಿವಾಣ ಅಗತ್ಯ

ಮಾನ್ಯರೆ,

ಕಳೆದ ವಾರ ಬೆಂಗಳೂರು ವಿಮಾನ ನಿಲ್ದಾಣದಲ್ಲಿ 14 ಕಿಲೋ ಗ್ರಾಂಗಳಷ್ಟು ಚಿನ್ನವನ್ನು ದೇಶಕ್ಕೆ ಕಳ್ಳ ಸಾಗಣೆ ಮಾಡಿದ್ದಕ್ಕಾಗಿ ಕನ್ನಡದ ನಟಿ ರನ್ಯಾ ರಾವ್ ಅವರನ್ನು ಬಂಧಿಸಲ್ಪಟ್ಟ ದಿನದಿಂದ ಒಂದಿಲ್ಲೊಂದು ಸ್ಫೋಟಕ ಸಂಗತಿಗಳು ಪ್ರತಿದಿನ ಹೊರಬರುತ್ತಿವೆ. ಕಳೆದ ಒಂದು ವರ್ಷದ ಅವಧಿಯಲ್ಲಿ ರನ್ಯಾ ಅವರು ದುಬೈಗೆ 28 ಬಾರಿ ತೆರಳಿದ್ದರು. ಪ್ರತಿ ಬಾರಿಯೂ ಅವರು ಚಿನ್ನವನ್ನು ಅಕ್ರಮವಾಗಿ ದೇಶದೊಳಕ್ಕೆ ತರುತ್ತಿದ್ದರು. ಪ್ರತಿ ಕೆ.ಜಿ. ಚಿನ್ನದಿಂದ ಅವರು ಗರಿಷ್ಠ 4 ಲಕ್ಷದವರೆಗೆ ಲಾಭ ಮಾಡಿಕೊಳ್ಳುತ್ತಿದ್ದರು ಎಂಬ ತನಿಖಾ ದಳದ ವರದಿಗಳು ಆತಂಕ ತರಿಸುತ್ತವೆ. ವಿಮಾನ ನಿಲ್ದಾಣಗಳ ಒಳಗೆ ಹಾಗೂ ಹೊರಗೆ ಹಲವಾರು ಬಾರಿ ಚಿನ್ನದ ಸ್ಮಗ್ಲಿಂಗ್‌ನಲ್ಲಿ ರನ್ಯಾ ಭಾಗಿದಾರರಾಗಿದ್ದಾಳೆ ಎಂದರೆ ಈಕೆಗೆ ಹಲವು ಪ್ರಭಾವಿ ವ್ಯಕ್ತಿಗಳ ಕೃಪಾಕಟಾಕ್ಷ ಇರುವುದು ಮೇಲ್ನೋಟಕ್ಕೆ ತಿಳಿದು ಬರುತ್ತದೆ. ನಿಷ್ಪಕ್ಷಪಾತವಾದ ತನಿಖೆಯಿಂದ ಸತ್ಯ ಹೊರ ಬರಬೇಕಿದೆ.

ಸರ್ಕಾರ ಕೂಡ ಚಿನ್ನದ ಸ್ಮಗ್ಲಿಂಗ್ ತಡೆಗಟ್ಟುವ ನಿಟ್ಟಿನಲ್ಲಿ ವಿಮಾನ ನಿಲ್ದಾಣಗಳು, ಬಂದರುಗಳು ಹಾಗೂ ಗಡಿಗಳಲ್ಲಿ ಲಗೇಜ್, ಸರಕು ಮತ್ತು ಪ್ರಯಾಣಿಕರನ್ನು ಸ್ಕ್ಯಾನ್ ಮಾಡಲು ಸುಧಾರಿತ ತಂತ್ರಜ್ಞಾನವನ್ನು ಹೆಚ್ಚೆಚ್ಚು ಬಳಸುವುದು ಅಗತ್ಯವಾಗಿದೆ. ಶಂಕಿತ ಕಳ್ಳ ಸಾಗಾಣಿಕೆದಾರರ ಮಾಹಿತಿ ಸಂಗ್ರಹಿಸಿ ಅವರ ಚಟುವಟಿಕೆಗಳ ಮೇಲೆ ನಿಗಾ ಇಡುವುದರ ಜೊತೆಗೆ, ಚಿನ್ನದ ರಫ್ತು ಮತ್ತು ಆಮದಿನ ಮೇಲೆ ಕಟ್ಟುನಿಟ್ಟಾದ ನಿಯಮಾವಳಿಗಳನ್ನು ಜಾರಿಗೊಳಿಸಬೇಕಿದೆ. ಅಲ್ಲದೆ ಅಕ್ರಮ ಚಿನ್ನದ ವ್ಯಾಪಾರ ಮತ್ತು ಅದರ ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣ ನೀಡುವುದು ಅಗತ್ಯವಾಗಿದೆ.

ಇಷ್ಟಕ್ಕೂ ನಟಿ ರನ್ಯಾಳ ಚಿನ್ನದ ಸ್ಮಗ್ಲಿಂಗ್ ಪ್ರಕರಣದಲ್ಲಿ ಸಚಿವರು, ಅಧಿಕಾರಿಗಳು, ಉದ್ಯಮಿಗಳು ಸೇರಿದಂತೆ ದೊಡ್ಡ ಜಾಲ ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ವ್ಯಕ್ತಿ ಎಷ್ಟೇ ದೊಡ್ಡವರಾಗಿದ್ದರು, ಎಷ್ಟೇ ಪ್ರಭಾವಶಾಲಿಯಾಗಿದ್ದರು ತನಿಖಾ ದಳದ ಅಧಿಕಾರಿಗಳು ಯಾರನ್ನೂ ಬಿಡದೆ ಎಲ್ಲರನ್ನು ಹೆಡೆಮುರಿ ಕಟ್ಟಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡಿಸಿ, ಇನ್ಮುಂದೆ ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಿ ಎಚ್ಚರ ವಹಿಸಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಇ–ಖಾತಾ ಪಡೆಯಲು ಹೈರಾಣದ ನಿವೇಶನ ಮಾಲೀಕರು

ಮಾನ್ಯರೆ,

ಮೈಸೂರಿನಲ್ಲಿರುವ ಎಲ್ಲಾ ನಿವೇಶನಗಳಿಗೂ ಫೆ. 15ರೊಳಗೆ ಇ–ಖಾತಾ ನೀಡಬೇಕು ಎಂದು ಮುಖ್ಯಮಂತ್ರಿಗಳು ಒಂದು ಆದೇಶ ನೀಡಿರುವುದು ಸರಿಯಷ್ಟೆ, ಆದರೆ ಬೆಮೆಲ್ 3ನೇ ಹಂತದ (ಜೆ.ಪಿ. ನಗರದ ಪಕ್ಕ) ನಿವೇಶನಗಳಿಗೆ ಇ–ಖಾತೆ ಪಡೆಯಲು ಹೋದರೆ ಮುಡಾ ಅಧಿಕಾರಿಗಳಿಂದಲೂ ಸರಿಯಾದ ಉತ್ತರ ಇಲ್ಲ. (ಯಾವಾಗ ನಿವೇಶನದ ಫೈಲ್‌ಗಳನ್ನು ಪಟ್ಟಣ ಪಂಚಾಯಿತಿಗೆ ಕಳುಹಿಸುತ್ತಾರೆ ಎಂದು). ಬೆಮೆಲ್ ಗೃಹ ನಿರ್ಮಾಣ ಸಹಕಾರ ಸಂಘದ ಪದಾಧಿಕಾರಿಗಳಿಗೆ ಫೋನ್ ಮಾಡಿದರೆ ಫೋನ್ ತೆಗೆದು ಉತ್ತರಿಸುವುದಿಲ್ಲ. ಕಡಕೊಳ ಪಟ್ಟಣ ಪಂಚಾಯಿತಿ ಕಚೇರಿಗೆ ಹೋದರೆ ಮುಡಾ ಕಚೇರಿಯಿಂದ ನಮಗೆ ಆದೇಶ ಬಂದಿಲ್ಲ ಎನ್ನುತ್ತಾರೆ. ಮೂರೂ ಕಡೆಗೂ ಅಲೆದು ಅಲೆದು ನಿವೇಶನದ ಮಾಲೀಕರು ಹೈರಾಣಾಗಿದ್ದಾರೆ. ನಿವೇಶನ ಮಾರಲು (ಮಾರಾಟ ಮಾಡಲು) ಹಾಗೂ ಕೊಂಡುಕೊಳ್ಳಲು ತುಂಬಾ ತೊಂದರೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಆದಷ್ಟು ಬೇಗ ಇ–ಖಾತಾ ಸಮಸ್ಯೆಯನ್ನು ಬಗೆಹರಿಸಬೇಕಾಗಿ ಈ ಮೂಲಕ ಮನವಿ.

–ಟಿ.ಎಸ್. ನಿರ್ಮಲ, ಗೆಜ್ಜಗಳ್ಳಿ, ಮೈಸೂರು.

ಶಿಷ್ಟಾಚಾರ... ದುಷ್ಟಾಚಾರ...ಭ್ರಷ್ಟಾಚಾರ!

ಮಾನ್ಯರೆ,

ಭ್ರಷ್ಟಾಚಾರ ಎಸಗಲು ಶಿಷ್ಟಾಚಾರವನ್ನೂ ದುರ್ಬಳಕೆ ಮಾಡಿಕೊಳ್ಳಬಹುದು ಎಂಬುದಕ್ಕೆ ನಿದರ್ಶನ ರನ್ಯಾರಾವ್ ಗೋಲ್ಡ್ ಸ್ಮಗ್ಲಿಂಗ್ ಪ್ರಕರಣ!

ಶಿಷ್ಟರೊಂದಿಗೆ ಶಿಷ್ಟಾಚಾರವಾಗಿ ನಡೆದುಕೊಂಡು ಶಿಷ್ಟಾಚಾರವನ್ನು ಪಾಲಿಸುವ ಹೊಣೆ ಹೊತ್ತ "ಶಿಷ್ಟಾಚಾರ ಅಧಿಕಾರಿಗಳು" ದುಷ್ಟಾಚಾರಿಣಿಯೊಂದಿಗೆ ಕೈಜೋಡಿಸಿ ಶಿಷ್ಟಾಚಾರಕ್ಕೆ ಅಪಚಾರ ಎಸಗುವಂತೆ ನಡೆದುಕೊಂಡಿರುವುದು ಭ್ರಷ್ಟಾಚಾರಕ್ಕೆ ಸಮ!

ಇದು ಶಿಷ್ಟಾಚಾರದ ಮೇಲಿನ ಅತ್ಯಾಚಾರವೂ ಹೌದು!

ದುಷ್ಟಾಚಾರಿಣಿಗೆ ಶಿಷ್ಟಾಚಾರವನ್ನು ಮಾರಿಕೊಂಡವರಿಗೂ ಸಹ ಶಿಕ್ಷೆಯಲ್ಲಿ ಸಮಪಾಲು ನೀಡಬೇಕಾಗಿರುವುದು ನಿಜವಾದ ಶಿಷ್ಟಾಚಾರ!

ಶಿಷ್ಟರೊಂದಿಗೆ ದುಷ್ಟರಂತೆಯೂ,ದುಷ್ಟರೊಂದಿಗೆ ಶಿಷ್ಟರಂತೆಯೂ ನಡೆದುಕೊಳ್ಳುವ ಭ್ರಷ್ಟಾಚಾರಿಗಳು ಶಿಷ್ಟಾಚಾರ ವಿಭಾಗದಲ್ಲಿ ಕಾರ್ಯನಿರ್ವಹಿಸಲು ವಿಫಲವಾಗಿದ್ದು ಇವರಿಂದಾಗಿ ಶಿಷ್ಟಾಚಾರಕ್ಕೇ ಕೆಟ್ಟ ಹೆಸರು ಬಂದಿದೆ. ಶಿಷ್ಟಾಚಾರದ ಸಮವಸ್ತ್ರ ತೊಟ್ಟಿರುವ ಈ ಭ್ರಷ್ಟಾಚಾರಿಗಳಿಗೆ ಸೂಕ್ತವಾದ ಜಾಗವೆಂದರೆ ಅದು ಪರಪ್ಪನ ಅಗ್ರಹಾರ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

ಕುಡಿಯುವ ನೀರಿನ ಪೈಪ್ ಸರಿಪಡಿಸಿ

ಮಾನ್ಯರೆ,



ನೀರು ಪ್ರತಿ ಒಬ್ಬ ಮನುಷ್ಯ ಮತ್ತು ಪಕ್ಷಿ ಪ್ರಾಣಿಗಳ ಜೀವನಾವಶ್ಯಕ ವಸ್ತುಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ. ಅದರಲ್ಲೂ ನೀರಿನ ಅಭಾವವಿರುವ ಈ ಸುಡು ಬೇಸಿಗೆಯಲ್ಲಿ ನೀರು ಪೋಲಾಗುವುದನ್ನು ತಡೆಯುವುದು ಪ್ರತಿಯೊಬ್ಬ ನಾಗರೀಕರ ಕರ್ತವ್ಯ.

ಆದರೆ ನಗರದ ಜೆ.ಎಲ್.ಬಿ. ರಸ್ತೆಯಲ್ಲಿ ಲಕ್ಷ್ಮಿಪುರಂ ನಲ್ಲಪಟ್ಟಣ ಪೊಲೀಸ್ ಸ್ಟೇಷನ್ ಹತ್ತಿರ ಕುಡಿಯುವ ನೀರಿನ ಪೈಪ್ ಒಡೆದು ಹಲವಾರು ದಿನಗಳಿಂದ ನೀರು ಸೋರಿಕೆಯಾಗಿ ಪೋಲಾಗುತ್ತಿದೆ. ಕುಡಿಯಲು ನೀರಿನ ಅಭಾವವಿರುವ ಈ ದಿನಗಳಲ್ಲಿ ಈ ರೀತಿ ಪೋಲಾಗುತ್ತಿರುವ ನೀರಿನ ಪೈಪ್‌ಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಗಮನಿಸದೆ ಇರುವುದು ವಿಷಾದದ ಸಂಗತಿಯಾಗಿದೆ. ಇನ್ನಾದರೂ ನೀರಾವರಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಒಡೆದಿರುವ ಕುಡಿಯುವ ನೀರಿನ ಪೈಪ್ ಅನ್ನು ಸರಿಪಡಿಸಿ ಪೋಲಾಗುತ್ತಿರುವ ನೀರನ್ನು ತಡೆಹಿಡಿಯುತ್ತಾರೆ ಎಂದು ಆಶಿಸೋಣವೇ?

–ಮಂಜುನಾಥ ಹೊಡೆ, ಚಾಮುಂಡಿಪುರಂ, ಮೈಸೂರು.




ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಬಹುಜನರ ಬಂಧು ಕಾನ್ಷಿರಾಂ!

ಮಾರ್ಚ್ 15, ಬಹುಜನೋದ್ಧಾರಕ ಕನಸುಗಾರ ಕಾನ್ಷಿರಾಂ ಅವರ ಜನ್ಮದಿನಾಚರಣೆ. ತನ್ನಿಮಿತ್ತ ಈ ಲೇಖನ.



ಕಾನ್ಷಿರಾಂ

2006, ತುಳಿತಕ್ಕೊಳಗಾದವರ ಪರ ಸದಾ ಮಿಡಿಯುತ್ತಿದ್ದ ಮಾನವತಾವಾದಿ ಕಾನ್ಷಿರಾಂ ಇಹಲೋಕ ತ್ಯಜಿಸಿದ ದಿನ. ಹೌದು, ಒಂದು ರೀತಿ ಬಹುಜನರ ಆರಾಧ್ಯ ದೈವವೇ ಆಗಿದ್ದರು ಕಾನ್ಷಿರಾಂ. ಮೇಲ್ವರ್ಗದವರ ತುಳಿತಕ್ಕೆ ಸಿಕ್ಕಿ ಪಾತಾಳ ಕಂಡಿದ್ದ ಈ ಜನಸಮೂಹವನ್ನು ಮೇಲೆತ್ತಲು, ಮೇಲ್ಜಾತಿಯವರ ದರ್ಪಕ್ಕೆ ಹೆದರಿ ಗಾವುದ ದೂರ ಉಳಿದಿದ್ದ ಇವರನ್ನು ಮುಂದೆ ತರಲು ಕಾನ್ಷಿರಾಂ ಪಟ್ಟ ಶ್ರಮ ಹೇಳುವುದು ಕಷ್ಟ. ಈ ದಿಸೆಯಲ್ಲಿ ಸಾಕಷ್ಟು ಯಶಸ್ಸನ್ನೂ ಕಂಡಿದ್ದ ಕಾನ್ಷಿರಾಂರ ಬಹುಜನಪರ ಹೋರಾಟ ವಿಧಿಗೂ ಅಸೂಯೆ ತಂದಿರಬೇಕು. ಅದೇನೇ ಇರಲಿ ಬೌದ್ಧಿಕವಾಗಿ ಇಂದು ಕಾನ್ಷಿರಾಂ ಇಲ್ಲವಾಗಿದ್ದರೂ ಬಹುಜನರ ಹೃನ್ಮನಗಳಲ್ಲಿ ತುಂಬಿಕೊಂಡಿದ್ದಾರೆ.

ಬದುಕಿರುವಾಗಲೇ ದಂತ ಕಥೆಯಾಗಿದ್ದ ಕಾನ್ಷಿರಾಂರ ಬದುಕೇ ರೋಚಕ. 1934ರ ಮಾರ್ಚ್ 15 ರಂದು ಪಂಜಾಬ್‌ನ ರೋಪುರ್ ಜಿಲ್ಲೆಯ ಖಾವಾಸ್ಪುರ ಗ್ರಾಮದಲ್ಲಿ ಇವರ ಜನನ. ತಾಯಿ ಬಿಷನ್‌ಕೌರ್, ತಂದೆ ಹರಿಸಿಂಗ್, ಮೂಲತಃ ದಲಿತರಾಗಿದ್ದು, ಸಿಖ್ ಧರ್ಮಕ್ಕೆ ಮತಾಂತರಗೊಂಡ ಕುಟುಂಬವಿದು. ನಾಲ್ವರು ಸಹೋದರಿಯರು, ಇಬ್ಬರು ಸಹೋದರರನ್ನು ಹೊಂದಿದ್ದ ಕಾನ್ಷಿರಾಂರ ಕುಟುಂಬದ ಸದಸ್ಯರೆಲ್ಲರೂ ಆ ಕಾಲದಲ್ಲೇ ಪೂರ್ಣ ವಿದ್ಯಾವಂತರಾಗಿದ್ದರು. ಇಂತಹ ವಿದ್ಯೆಯ ಬೆಳಕೇ ಇತರರಿಗೂ ಬೆಳಕು ನೀಡುವ ಎತ್ತರದ ಬದುಕಿಗೆ ಇವರನ್ನು ಕರೆತಂದಿತೇನೋ. ಹಿರಿಯ ಮಗನ ಸ್ಥಾನದಲ್ಲಿದ್ದ ಕಾನ್ಷಿರಾಂ ಭೌತಶಾಸ್ತ್ರದಲ್ಲಿ ಬಿ.ಎಸ್ಸಿ. ಪದವಿ ಗಳಿಸಿ ನಂತರ ದಲಿತರ ಮೀಸಲಾತಿಯಲ್ಲಿ ಪೂನಾದ ಡಿಫೆನ್ಸ್ ಪ್ರೊಡಕ್ಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಸಹಾಯಕ ವಿಜ್ಞಾನಿಯಾಗಿ ನೌಕರಿಗೆ ಸೇರಿಕೊಂಡು ಇಡೀ ಸಂಸಾರದ ಜವಾಬ್ದಾರಿ ಹೊತ್ತಿದ್ದರು.

ಸುಮಾರು ಏಳೆಂಟು ವರ್ಷಗಳ ತನಕವೂ ಕಾನ್ಷಿರಾಂ ಸಾಮಾನ್ಯ ವ್ಯಕ್ತಿಯಾಗಿ ತಾನಾಯಿತು ತನ್ನ ಕೆಲಸವಾಯಿತೆಂಬಂತೆ ಇದ್ದವರು. ಆದರೆ ನಂತರದ ದಿನಗಳಲ್ಲಿ ಅಂಬೇಡ್ಕರ್‌ರ ವಿಚಾರಧಾರೆಗೆ ಮನಸ್ಸೊಡ್ಡಿಕೊಂಡರು. ಮೊದಲೇ ಬಾಲ್ಯದಲ್ಲಿ ಅಸ್ಪೃಶ್ಯತೆಯ ನೋವುಂಡ ಮನಸ್ಸು, ಆಗೇನೂ ಅದರ ಬಗ್ಗೆ ಇವರಿಗೆ ಅಷ್ಟು ತಿಳುವಳಿಕೆ ಇರಲಿಲ್ಲ. ಆದರೆ ಈಗ ಅಸ್ಪೃಶ್ಯತೆಯ ತಾಪ ತನ್ನ ದಲಿತ ಜನರನ್ನು ಸುಟ್ಟ ಪರಿ ಹೆಜ್ಜೆ ಹೆಜ್ಜೆಗೂ ಇವರ ಎದೆಗಿಳಿದು ಅರಿವಾಗತೊಡಗಿತು. ಅದರಲ್ಲೂ ವಿಶೇಷವಾಗಿ ಅಂಬೇಡ್ಕರ್ ಅವರ 'Annihilation Of Caste' ಪುಸ್ತಕವನ್ನು ಒಂದೇ ರಾತ್ರಿಯಲ್ಲಿ ಮೂರ್‍ನಾಲ್ಕು ಬಾರಿ ಓದಿ ಮುಗಿಸಿದ್ದರು. ಈ ಕೃತಿ ಇವರ ಮೇಲೆ ಗಾಢ ಪರಿಣಾಮ ಬೀರಿತ್ತು. ಆ ರಾತ್ರಿ ಕತ್ತಲು ಸರಿದು ಮುಂಜಾನೆ ಬೆಳಕು ಹರಿಯುತ್ತಿದ್ದಂತೆಯೇ ಅಂಬೇಡ್ಕರರೇ ಇವರೊಳಕ್ಕೆ ಬಂದು ಸೇರಿಕೊಂಡಂತೆ ಕಾನ್ಷಿರಾಂ ಬೇರೆಯೇ ಕಾನ್ಷಿರಾಂ ಆಗಿ ಬದಲಾಗಿದ್ದರು.

ತಮ್ಮ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ, ಹೆತ್ತ ತಂದೆ–ತಾಯಿಗಳನ್ನು, ಒಡಹುಟ್ಟಿದವರನ್ನೆಲ್ಲಾ ಬಿಟ್ಟು ಏನನ್ನೋ ನಿಶ್ಚಯಿಸಿಕೊಂಡವರಂತೆ ಕುಟುಂಬ ಬಂಧನದಿಂದ ಹೊರಗೆ ಬಂದೇಬಿಟ್ಟರು. ಒಂದು ರೀತಿ ಸಿದ್ಧಾರ್ಥ ಬುದ್ಧನೆಡೆಗೆ ಸಾಗಿದಂತೆ...! ಹೀಗೆ ಇವರು ಹೊರಬಂದಾಗ ಮುಂದೊಂದು ದಿನ ದಲಿತರ ಕಷ್ಟ ಕಳೆವ, ಹಿಂದುಳಿದವರ ಕಣ್ಣೊರೆಸುವ, ಅಲ್ಪಸಂಖ್ಯಾತರ ನೋವು ನೀಗುವ ಬಹುಜನರ ರಾಷ್ಟ್ರನಾಯಕರಾಗಿ ಕಾನ್ಷಿರಾಂ ಹೊರಹೊಮ್ಮುತ್ತಾರೆಂದು ಯಾರೂ ಅಂದುಕೊಂಡಿರಲಿಲ್ಲ. ಆದರೆ ಇವರು ಅಂದುಕೊಂಡಿದ್ದರೆಂದು ಕಾಣುತ್ತದೆ. ಏಕೆಂದರೆ ಅಂಬೇಡ್ಕರರ ಕನಸನ್ನು ನನಸು ಮಾಡುವುದೇ ತಮ್ಮ ಬದುಕಿನ ಗುರಿ ಎಂದು ನಿರ್ಧರಿಸಿದಂತಿದೆ.

ದಲಿತ ಉದ್ಯೋಗಿಗಳನ್ನೆಲ್ಲಾ ಸಂಘಟಿಸಿ, ಅಂಬೇಡ್ಕರ್ ಜನ್ಮದಿನಕ್ಕೆ ಸಾರ್ವತ್ರಿಕ ರಜೆ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸಿ 1960ರಲ್ಲಿ ಪ್ರಪ್ರಥಮವಾಗಿ ಕಾನ್ಷಿರಾಂ ಹೋರಾಟಕ್ಕೆ ಧುಮುಕಿದರು. ಅಲ್ಲಿಂದೀಚೆಗೆ ಸಾಮಾಜಿಕ ಹೋರಾಟಕ್ಕೆ ದಿಟ್ಟ ಹೆಜ್ಜೆ ಹಾಕಿದ ಇವರು ದಿನದಿಂದ ದಿನಕ್ಕೆ ದಲಿತ ಪರ ಚಳವಳಿಯಲ್ಲಿ ಪ್ರವರ್ಧಮಾನಕ್ಕೆ ಬಂದರು. ಅಂಬೇಡ್ಕರರ ತತ್ವ ಸಿದ್ಧಾಂತಗಳನ್ನೇ ಮೈಮನಗಳಲ್ಲೆಲ್ಲಾ ತುಂಬಿಕೊಂಡು ಮೊಟ್ಟಮೊದಲ ಅಂಬೇಡ್ಕರ್‌ವಾದಿಯಾಗಿ ರೂಪುಗೊಂಡಿದ್ದ ಕಾನ್ಷಿರಾಂ, ಮೊದಲಿಗೆ ವಿದ್ಯಾವಂತ ದಲಿತರು ಮತ್ತು ಉದ್ಯೋಗಸ್ಥ ದಲಿತರನ್ನು ಸಂಘಟಿಸಿದರು. ಆ ಸಂದರ್ಭದಲ್ಲಿ ಅವರು ಅಖಿಲ ಭಾರತ ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ನೌಕರರ ಒಕ್ಕೂಟವನ್ನು ಆರಂಭಿಸಿ ಈ ವರ್ಗದ ಜನರ ಕಲ್ಯಾಣಕ್ಕಾಗಿ ಕಂಕಣಬದ್ಧರಾಗಿ ದುಡಿಯತೊಡಗಿದರು. ಆನಂತರ 1971ರಲ್ಲಿ ಪರಿಶಿಷ್ಟ ಜಾತಿ, ಪಂಗಡ, ಇತರ ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಂಘವನ್ನು ಕಾನ್ಷಿರಾಂ ಕಟ್ಟಿದರು. ಮುಂದೆ 1973ರ ಹೊತ್ತಿಗೆ BAMCEF (All India Backward and Minority Employees Federation) ಸಂಘ ಸ್ಥಾಪಿಸಿ ದೆಹಲಿಯಲ್ಲಿ ಅದರ ಕಛೇರಿ ತೆರೆದರು. ಈ ಬಾಮ್‌ಸೆಫ್ ಸಂಘಟನೆಗಾಗಿ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ದೇಶಾದ್ಯಂತ ಸಂಚರಿಸ ತೊಡಗಿದ ಕಾನ್ಷಿರಾಂ, ತಮ್ಮ ನಡೆಯ ಉದ್ದಕ್ಕೂ ದಲಿತರನ್ನು, ಹಿಂದುಳಿದವರನ್ನು, ಅಲ್ಪಸಂಖ್ಯಾತರನ್ನು ಒಂದುಗೂಡಿಸತೊಡಗಿದರು....! ವಿವಿಧ ದಲಿತ ಸಂಘಟನೆಗಳನ್ನು ಕಲೆಹಾಕಿ, ನಿಷ್ಕ್ರಿಯಗೊಂಡಿದ್ದ ದಲಿತ ಸಂಘಟನೆಗಳನ್ನು ಪುನಶ್ಚೇತನಗೊಳಿಸಿದ ಕಾನ್ಷಿರಾಂ, ದಲಿತರೊಡನೆ ಹಿಂದುಳಿದ ವರ್ಗಗಳನ್ನೂ ಸೇರಿಸಿದರು. ಶೋಷಿತರ ಪರವಾಗಿ ದನಿ ಎತ್ತಿ ದುಡಿದ ಮಹಾಪುರುಷರಾದ ಜ್ಯೋತಿ ಬಾಫುಲೆ, ಛತ್ರಪತಿ ಶಾಹುಮಹಾರಾಜ್, ನಾರಾಯಣಗುರು, ಪೆರಿಯಾರ್ ರಾಮಸ್ವಾಮಿಯವರ ತತ್ವಾದರ್ಶಗಳನ್ನು ರಾಷ್ಟ್ರಾದ್ಯಂತ ಪ್ರಚಾರ ಮಾಡಿ ಶೋಷಿತ ದಲಿತರಲ್ಲಿ ಅರಿವಿನ ದೀಪ ಬೆಳಗಿಸಿದರು. ತಮಿಳಿನ ದ್ರಾವಿಡ ನಾಯಕ ಪೆರಿಯಾರ್ ಕುರಿತು ಉತ್ತರ ಪ್ರದೇಶದಲ್ಲಿ ಬಹುದೊಡ್ಡ ಕಾರ್ಯಕ್ರಮ ರೂಪಿಸಿ ಪೆರಿಯಾರ್‌ರನ್ನು ಉತ್ತರಕ್ಕೆ ಪರಿಚಯಿಸಿದ ಕೀರ್ತಿ ಕಾನ್ಷಿರಾಂರವರದ್ದು.

1980ರಲ್ಲಿ 'ಅಂಬೇಡ್ಕರ್ ಮೇಳ ಆನ್ ವ್ಹೀಲ್ಸ್' ಬೀದಿ ಪ್ರದರ್ಶನ ಹುಟ್ಟು ಹಾಕಿದ ಕಾನ್ಷಿರಾಂ, ಅಂಬೇಡ್ಕರ್‌ರ ವಿವಿಧ ಬಗೆಯ ಚಿತ್ರಗಳನ್ನು, ಪುಸ್ತಕಗಳನ್ನು, ತತ್ವಗಳನ್ನು ಬಹುಜನರಿಗೆ ತಲುಪಿಸತೊಡಗಿದರು. ತಮ್ಮ ಭವಿಷ್ಯದ ರಾಜಕೀಯದ ಮುನ್ನುಡಿ ಎಂಬಂತೆ 1981ರಲ್ಲಿ ದಲಿತ ಶೋಷಿತ ಸಂಘರ್ಷ ಸಮಿತಿಯನ್ನು ಕಟ್ಟಿ ತಮ್ಮ ಸಾಮಾಜಿಕ ದಲಿತ ಚಳವಳಿಗೊಂದು ಹೊಸ ರೂಪ ಕೊಟ್ಟರು. ಅಲ್ಲಿ ಅಸ್ಪಷ್ಟವಾಗಿ ಆಗಲೇ ಗೋಚರಿಸುತ್ತಿದ್ದವು ಕಾನ್ಷಿರಾಂರ ರಾಜಕೀಯ ಮೆಟ್ಟಿಲುಗಳು. ಇನ್ನು ಹತ್ತುವುದಷ್ಟೇ ಅವರಿಗೆ ಬಾಕಿ ಇತ್ತು. ಕಾನ್ಷಿರಾಂ ಇನ್ನು ತಡಮಾಡಲಿಲ್ಲ. 1984ರಲ್ಲಿ ತಮ್ಮ ಬಹುದಿನದ ಕನಸಾದ ಬಹುಜನ ಸಮಾಜ ಪಕ್ಷವನ್ನು ಏಪ್ರಿಲ್ 14ರ ಅಂಬೇಡ್ಕರ್ ಜನ್ಮದಿನದಂದು ಸ್ಥಾಪಿಸಿ ಅದಕ್ಕೆ ಭದ್ರಬುನಾದಿ ಹಾಕಿದರು.

ಕಾನ್ಷಿರಾಂ ಪದೇ ಪದೆ ಹೇಳುತ್ತಿದ್ದರು. 'ದೇಶದ ಒಟ್ಟು ಜನಸಂಖ್ಯೆಯ ಪ್ರಮಾಣದಲ್ಲಿ ಮೇಲ್ಜಾತಿಯವರು ಕೇವಲ 15 ಪರ್ಸೆಂಟ್. ಹಾಗಿದ್ದೂ ಇವರು ಪ್ರತಿಯೊಂದು ಕ್ಷೇತ್ರವನ್ನೂ ಆಕ್ರಮಿಸಿಕೊಂಡಿದ್ದಾರೆ. ಮೇಲ್ಜಾತಿಯವರ ಅಧಿಪತ್ಯ ಹಾಗೂ ಪ್ರಾಬಲ್ಯದಿಂದಾಗಿ ಉಳಿದ 85 ಪರ್ಸೆಂಟ್ ಜನರು ಅಧಿಕಾರ ಮತ್ತು ಅವಕಾಶದಿಂದ ದೂರವಾಗಿದ್ದಾರೆ' ಎಂದು. ಹೀಗೆ ಅವಕಾಶ ವಂಚಿತರಾದ 85 ಪರ್ಸೆಂಟ್ ಜನರನ್ನೇ ಅವರು 'ಬಹುಜನ' ಎಂದು ಕರೆದರು. ಅಂತಹವರನ್ನು ಮುನ್ನಡೆಸಿ ಅವರನ್ನು ಅಧಿಕಾರದ ಪಟ್ಟಕ್ಕೇರಿಸಲು ಬಹುಜನ ಸಮಾಜ ಪಕ್ಷ ಕಟಿಬದ್ಧವಾಯಿತು.

ಅಲ್ಲಿಂದ ಶುರುವಾಯಿತು ನೋಡಿ ಕಾನ್ಷಿರಾಂರ ತೀವ್ರಗಾಮಿ ರಾಜಕೀಯ ಹೋರಾಟ. ದಲಿತರು, ಶೋಷಿತರು, ಅಲ್ಪಸಂಖ್ಯಾತರು ಹೀಗೆ ಬಹುಜನರನ್ನು ಅಧಿಕಾರದ ಗದ್ದುಗೆಯಲ್ಲಿ ಕೂರಿಸುವುದೇ ತಮ್ಮ ಪರಮ ಗುರಿಯಾಗಿಸಿಕೊಂಡ ಅವರು ಈ ದಿಕ್ಕಿನಲ್ಲಿ ಧೀಶಕ್ತಿಯಾಗಿ ವಿಜೃಂಭಿಸಿದರು. 'ಬೇಡಿದರೆ ತನ್ನ ಜನಕ್ಕೆ ಒಂದು ಹೊತ್ತಿನ ಕೂಳು ದೊರಕಿಸಿ ಕೊಡಬಹುದು. ಇನ್ನೂ ಹೆಚ್ಚೆಂದರೆ ಒಂದು ದಿನದ ತುತ್ತಿನ ಚೀಲವನ್ನು ತುಂಬಿಸಿ ಕೊಡಬಹುದು. ಅದೇ ಆಳುವ ವರ್ಗವಾಗಿಸಿದರೆ ಶಾಶ್ವತವಾಗಿ ಹಸಿವನ್ನು ನೀಗಿಸಬಹುದು...' ಎಂಬ ತಮ್ಮದೇ ಆದ ಸರಳ ಫಿಲಾಸಫಿ ಹೊಂದಿದ್ದ ಕಾನ್ಷಿರಾಂ, ಇದಕ್ಕಾಗಿ ತಾವು ಕಟ್ಟಿದ ಬಿಎಸ್‌ಪಿಯೊಡನೆ ಕಿತ್ತುಹೋದ ಹವಾಯ್ ಚಪ್ಪಲಿಯಲ್ಲೇ ದೇಶದ ಉದ್ದಗಲಕ್ಕೂ ಸೈಕಲ್‌ನಲ್ಲಿ, ಕಾಲು ನಡಿಗೆಯಲ್ಲಿ ಭರಭರನೆ ಸುತ್ತಿದರು. ಹೀಗೆ ಇವರು ಬೇಡುವ ಜನರನ್ನು ಆಳುವ ಜನರನ್ನಾಗಿ ಪರಿವರ್ತಿಸಲು ಸುಮಾರು 20 ಲಕ್ಷ ಕಿ.ಮೀ.ಗೂ ದೂರ ಹೆಚ್ಚು ದೇಶದಲ್ಲಿ ಸಂಚರಿಸಿದರು! ಅದುವರೆಗೂ ಅಸಂಘಟಿತರಾಗಿಯೇ ಉಳಿದಿದ್ದ ದಲಿತರು ಕಾನ್ಷಿರಾಂರ ಕೂಗಿಗೆ ಎಚ್ಚೆತ್ತು ಸಂಘಟಿತರಾಗತೊಡಗಿದರು. ಇವರ ಒಗ್ಗೂಡುವಿಕೆ ಬಲವಾದಂತೆ ಬಿಎಸ್ಪಿ ಕೂಡ ಬಲಿಯತೊಡಗಿತು. ಬಹುಜನರೊಡನೆ ಪಕ್ಷ ಸಂಘಟನೆ ಮಿಂಚಿನಂತೆ ಸಾಗಿತು.

ಹೀಗೆ ಪಕ್ಷ ಸಂಘಟನೆಯಲ್ಲಿ ಅವಿರತವಾಗಿ ನಡೆದಿದ್ದ ಕಾನ್ಷಿರಾಂರ ಸಭೆ–ಸಮಾರಂಭಗಳು ಎಲ್ಲೇ ನಡೆದರೂ ಗಣ್ಯರು ಬರುವ ಮೊದಲೇ ವೇದಿಕೆ ಹತ್ತಿ ನೆರೆದಿದ್ದ ಜನರಿಗೆ ತನ್ನ ಮಾತಿನ ಮೋಡಿಯ ಮೂಲಕವೇ ಕಾನ್ಷಿರಾಂ ಮತ್ತು ಬಿಎಸ್ಪಿ ಪಕ್ಷದ ತತ್ವ ಸಿದ್ಧಾಂತಗಳನ್ನು ತಿಳಿಯಪಡಿಸಿ ಚಪ್ಪಾಳೆ ಗಿಟ್ಟಿಸುತ್ತಿದ್ದ ಮಾಯಾವತಿ ಎಂಬ ಯುವತಿಯ ಕ್ರಿಯಾಶೀಲತೆ ಕಾನ್ಷಿರಾಂರನ್ನು ಆಕರ್ಷಿಸಿತು. ಆ ಕ್ಷಣವೇ ಗಾಜಿಯಾಬಾದ್‌ನಲ್ಲಿ ಸರ್ಕಾರಿ ಶಾಲಾ ಶಿಕ್ಷಕಿಯಾಗಿದ್ದ ಮಾಯಾವತಿಯನ್ನು ರಾಜಕೀಯಕ್ಕೆ ಕರೆತಂದು ತಮ್ಮ ಬಿಎಸ್ಪಿ ಪಕ್ಷದ ಮುಂಚೂಣಿಗೆ ಬಿಟ್ಟರು. ಮಾಯಾವತಿ ಕೂಡ ಕಾನ್ಷಿರಾಂರ ಗುರಿ ಸಾಧನೆಯ ಹಾದಿಯಲ್ಲಿ ಬಹುಜನರ ಸಂಘಟನೆಗೆ ಮುನ್ನಡೆದರು. 80ರ ದಶಕದಲ್ಲಿ ಎಲ್ಲೆಲ್ಲೂ ಕಾನ್ಷಿರಾಂರ ಬಹುಜನ ಸಮಾಜ ಪಕ್ಷದ ಧ್ವನಿ ಪಾಂಚಜನ್ಯವಾಗಿ ಮೊಳಗತೊಡಗಿತು. ಪಂಜಾಬ್, ಹರಿಯಾಣ, ಮಧ್ಯಪ್ರದೇಶ, ಮಹಾರಾಷ್ಟ್ರಗಳಲ್ಲೂ ದಲಿತ ಜಾಗೃತಿ ಸದ್ದು ಮಾಡಿತು. ಬಿಎಸ್ಪಿ ಭರಾಟೆಗೆ ಕಾಂಗ್ರೆಸ್, ಬಿಜೆಪಿಯಂತಹ ರಾಷ್ಟ್ರೀಯ ಪಕ್ಷಗಳು ತತ್ತರಿಸತೊಡಗಿದವು. ಅದರಲ್ಲೂ ಉತ್ತರ ಪ್ರದೇಶದಲ್ಲಿ ಕಾನ್ಷಿರಾಂರ ಬಿಎಸ್ಪಿ ಮುಂದೆ ಎಲ್ಲಾ ರಾಜಕೀಯ ಪಕ್ಷಗಳು ಹುಲಿ ಎದುರಿನ ಇಲಿಗಳಂತಾಗಿದ್ದವು. ಯಾವುದೇ ಬಂಡವಾಳ ಶಾಹಿಗಳ, ಉದ್ಯಮಿಗಳ ನೆರವಿಲ್ಲದೆಯೇ ಭಾರತ ದೇಶದ 3ನೇ ಅತಿದೊಡ್ಡ ರಾಷ್ಟ್ರೀಯ ಪಕ್ಷವಾಗಿ ಬಿಎಸ್ಪಿ ಹೊರಹೊಮ್ಮಿತೆಂದರೆ ಕಾನ್ಷಿರಾಂರ ಇಚ್ಛಾಶಕ್ತಿಯು, ಸಂಘಟನಾಯುಕ್ತಿ ಎಂತಾದ್ದಿರಬಹುದು?!

'ವೋಟ್ ಹಮಾರಾ, ರಾಜ್ ತುಮ್ಹಾರಾ, ನಹಿ ಚಲೇಗಾ, ಯೇ ನಹಿ ಚಲೇಗಾ...' ಎನ್ನುವ ಸ್ಲೋಗನ್ ಮೂಲಕ ದಲಿತರ, ಶೋಷಿತರ, ಅಲ್ಪಸಂಖ್ಯಾತರ ನರನಾಡಿಗಳಲ್ಲಿ ಜಾಗೃತಿಯ ಕಿಚ್ಚು ಹಚ್ಚಿದ್ದ ಕಾನ್ಷಿರಾಂ, ಮನುವಾದಿಗಳ ವಿರುದ್ಧ ಸಮರ ಸಾರಿದ್ದರು. ಚುನಾವಣೆ ಬಂತೆಂದರೆ ಕೈಗೆರಡು ಸಾರಾಯಿ ಪ್ಯಾಕೆಟ್ಟು, ಜೇಬಿಗೊಂದು ನೋಟು ಕೊಟ್ಟರಾಯಿತು ದಲಿತರ ವೋಟನ್ನು ಕಿತ್ತುಕೊಳ್ಳಬಹುದೆಂಬ ಭಾವನೆ ಇದ್ದ ಕಾಲದಲ್ಲಿ ದಲಿತರನ್ನು ಜಾಗೃತಿಗೊಳಿಸಿ, ಅಂತಹ ಭಾವನೆಗೆ ಕಾನ್ಷಿರಾಂ ಬೆಂಕಿ ಹಾಕಿದ್ದರು. ಅಷ್ಟೇ ಅಲ್ಲ, **'ದಲಿತರ ಮತ ಮಾರಾಟಕ್ಕಿಲ್ಲ'** ಎಂಬ ಸ್ಪಷ್ಟ ಸಂದೇಶವನ್ನು ದೇಶದ ಎಲ್ಲಾ ರಾಜಕೀಯ ಪಕ್ಷಗಳಿಗೂ, ರಾಜಕಾರಣಿಗಳಿಗೂ ತಲುಪಿಸಿದ್ದರು. 1987ರಲ್ಲಿ ಅಲಹಾಬಾದ್ ಲೋಕಸಭಾ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಪ್ರಪ್ರಥಮವಾಗಿ ಸ್ಪರ್ಧಿಸಿದ ಕಾನ್ಷಿರಾಂ, ಅಲ್ಲಿ ಮಾಜಿ ಪ್ರಧಾನಿ ವಿ.ಪಿ.ಸಿಂಗ್ ವಿರುದ್ಧ ಸೋತರೂ 1991ರಲ್ಲಿ ಇಟಾವ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು. ಆನಂತರ ಅವರ ಗೆಲುವಿನ ಓಟ ನಿರಂತರ ಸಾಗಿತು. ಮತ್ತೆಂದೂ ಅವರು ಹಿಂತಿರುಗಿ ನೋಡಲಿಲ್ಲ. ಉತ್ತರ ಪ್ರದೇಶದಂತಹ ಅರ್ಧ ಭಾರತದಲ್ಲಿ ತಮ್ಮ ಬಹುಜನ ಸಮಾಜ ಪಕ್ಷದ ಬಾವುಟವನ್ನು ಅದ್ವಿತೀಯವಾಗಿ ಹಾರಿಸಿದರು. ಹಾಗೆಯೇ ದಕ್ಷಿಣ ಭಾರತದಲ್ಲೂ ಬಿಎಸ್ಪಿ ನೆಲೆಯೂರುವಂತೆ ಮಾಡಿದ್ದರು.

ಕಾನ್ಷಿರಾಂ ಬರೀ ಹೇಳುತ್ತಿರಲಿಲ್ಲ, ಹೇಳಿದ್ದನ್ನು ಅಕ್ಷರಶಃ ಮಾಡಿ ತೋರಿಸುತ್ತಿದ್ದರು. ಶೋಷಿತರ ಕೈಗೆ ಅಧಿಕಾರದ ಅಸ್ತ್ರ ನೀಡುವುದೇ ನನ್ನ ಪರಮ ಗುರಿ ಎನ್ನುತ್ತಿದ್ದ ಇವರು ಅದರಂತೆಯೇ 1996ರಲ್ಲಿ ಮಾಯಾವತಿಯನ್ನು ಉತ್ತರ ಪ್ರದೇಶದ ಮೊದಲ ದಲಿತ ಮಹಿಳಾ ಮುಖ್ಯಮಂತ್ರಿಯಾಗಿ ಮಾಡಿದರು. ಮನಸ್ಸು ಮಾಡಿದ್ದರೆ ತಾವೇ ಮುಖ್ಯಮಂತ್ರಿಯಾಗ ಬಹುದಿತ್ತು. ಆದರೆ ಅವರೆಂದೂ ಅಧಿಕಾರ ಬಯಸದೆ ಜಂಗಮರಾಗೇ ಉಳಿದರು. ಅಧಿಕಾರದಿಂದ ದೂರ ಉಳಿಯುವ ಸನ್ಯಾಸಸ್ಥ ಗುಣ ಇಂದು ಯಾವ ರಾಜಕಾರಣಿಯಲ್ಲಿದ್ದೀತು?

ಹಲವು ವೈರುಧ್ಯಗಳ ನಡುವೆಯೂ ಕಾನ್ಷಿರಾಂ ಸಾಧನೆ ಬಹುದೊಡ್ಡದು. ಶೋಷಿತ ಸಮುದಾಯವನ್ನು ಒಂದೇ ಸೂರಿನಡಿ ಸಂಘಟಿಸಿ ದೇಶದ ರಾಜಕೀಯದ ದಿಕ್ಕನ್ನೇ ಬದಲಿಸಿದ ಬಹುಜನೋದ್ಧಾರಕರಿವರು. ಶೋಷಿತರು, ದಲಿತರು ಅಧಿಕಾರದ ಸಿಂಹಾಸನ ಏರಲು ಅರಿವಿನ ದಿಕ್ಸೂಚಿಯಾದವರಿವರು. ಆಳಿಗಿಂತಲೂ ಕೀಳಾಗಿ ಕೆಳಸ್ತರದಲ್ಲಿದ್ದ ತನ್ನ ಬಹುಜನ ಸಮುದಾಯವನ್ನು ಆಳುವ ವರ್ಗವಾಗಿಸಲು ತನ್ನ ಬದುಕನ್ನೇ ಬಸಿದ ಮಹಾತ್ಯಾಗಿ ಇವರು. ಅಂಬೇಡ್ಕರ್ ಎಳೆದು ತಂದು ನಿಲ್ಲಿಸಿದ್ದ ದಲಿತೋದ್ಧಾರಕ ರಥವನ್ನು ಶ್ರದ್ಧಾಭಕ್ತಿಯಿಂದ ಮತ್ತು ಛಲಬಲದಿಂದ ಮುನ್ನಡೆಸಿ ಅಂಬೇಡ್ಕರ್ ಕನಸನ್ನು ನನಸಾಗಿಸಿ ಶೋಷಿತ ದೀನದಲಿತರ ಮುಡಿಗೆ ಮುಕುಟವಿಟ್ಟವರು ಇವರು.

'ರಾಜ್ಯಾಡಳಿತವಷ್ಟೇ ಅಲ್ಲ ದಲಿತರ ಕೈಗೆ ದೇಶದ ಆಡಳಿತ ನೀಡುತ್ತೇನೆ' ಎಂದು ಘರ್ಜಿಸುತ್ತಲೇ ಬಹುಜನರೊಡನೆ ಸಾಗಿಬಂದ ಕಾನ್ಷಿರಾಂ, ಶೋಷಿತರೂ ತಮ್ಮ ಸ್ವಂತ ಶಕ್ತಿಯ ಮೇಲೆ ರಾಜ್ಯಾಧಿಕಾರ ಹಿಡಿಯಬಲ್ಲರು..., ರಾಜ್ಯಭಾರ ಕೂಡ ಮಾಡಬಲ್ಲರೆಂಬುದನ್ನು ಪ್ರಪಂಚಕ್ಕೆ ತೋರಿಸಿಕೊಟ್ಟ ಕಿಂಗ್ ಮೇಕರ್ ಇವರು. ಕಾನ್ಷಿರಾಂ ಅವರಿಗೆ ಆಯಸ್ಸು ಮತ್ತು ಆರೋಗ್ಯ ಚೆನ್ನಾಗಿದ್ದಿದ್ದರೆ ಖಂಡಿತವಾಗಿಯೂ ಭಾರತ ದೇಶ ದಲಿತರೊಬ್ಬರು ಪ್ರಧಾನಿಯಾಗುವುದನ್ನು ಕಾಣಬಹುದಾಗಿತ್ತು!

ಪ್ರವಾಸೋದ್ಯಮ ಇಲಾಖೆಯಲ್ಲಿ ಸ್ತುತ್ಯಾರ್ಹ ಕಾರ್ಯ; ಮಾಜಿ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾರಿಗೆ ಅಭಿನಂದನೆ



ವಿವಿಧ ಸಂಘಟನೆಗಳಿಂದ ಪ್ರವಾಸೋದ್ಯಮ ಇಲಾಖೆ ಮಾಜಿ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರು, ಮಾ.14(ಎಂಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಪ್ರವಾಸೋದ್ಯಮ ಇಲಾಖೆಯ ಮಯೂರ ಹೊಯ್ಸಳ ಹೋಟೆಲ್ ಸಭಾಂಗಣದಲ್ಲಿ ಮೈಸೂರು ಹೋಟೆಲ್ ಮಾಲೀಕರ ಸಂಘ, ಮೈಸೂರು ಗೈಡ್ ಅಸೋಸಿಯೇಷನ್, ಸ್ಕಲ್ ಇಂಟರ್‌ನ್ಯಾಷನಲ್ ಮೈಸೂರು ಹಾಗೂ ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ವತಿಯಿಂದ ಮೈಸೂರು ವಿವಿ ಕುಲಸಚಿವರು(ಆಡಳಿತ) ಹಾಗೂ ಪ್ರವಾಸೋದ್ಯಮ ಇಲಾಖೆ ಮಾಜಿ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಈ ವೇಳೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕರಾಗಿ ಎರಡು ವರ್ಷಗಳು ಸೇವೆ ಸಲ್ಲಿಸಿರುವ ಎಂ.ಕೆ.ಸವಿತಾ ಅವರು, ಮೈಸೂರು ಪ್ರವಾಸೋದ್ಯಮ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದ್ದಾರೆ. ಅವರ ನೇತೃತ್ವದಲ್ಲಿ ನಡೆದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ರಾಜ್ಯದಲ್ಲೇ ಮಾದರಿಯಾಗಿತ್ತು. ಮುಖ್ಯಮಂತ್ರಿಗಳೇ ಉದ್ಘಾಟಕರಾಗಿ ಆಗಮಿಸಿದ್ದು ಅತ್ಯಂತ ವಿಶೇಷವಾದುದಾಗಿದೆ. ಮೈಸೂರು ಫೆಸ್ಟ್ ಆಯೋಜನೆ ಸೇರಿದಂತೆ ಹಲವು ಮಾದರಿ ಕಾರ್ಯಕ್ರಮಗಳ ಮೂಲಕ ಮೈಸೂರಿನ ಪ್ರವಾಸೋದ್ಯಮಕ್ಕೆ ಹೊಸ ಆಯಾಮ ನೀಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರವಾಸೋದ್ಯಮ ಇಲಾಖೆ ಪ್ರಭಾರ ಜಂಟಿ ನಿರ್ದೇಶಕ ಕೆ.ರುದ್ರೇಶ್ ಮಾತನಾಡಿ, ತಮ್ಮ ಅಧಿಕಾರ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಅವರ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದಲ್ಲಿ ಮೈಸೂರು ವಿಭಾಗದ ಗುರ್ತಿಸಿಕೊಳ್ಳುವಂತಾಗಿದೆ. ಕಳೆದ ವಾರವಷ್ಟೇ ಕಾರಂಜಿಕೆರೆ ಅಭಿವೃದ್ಧಿಗೆ 18 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಇದರ ಕ್ರೆಡಿಟ್ ಅವರಿಗೆ ಸಲ್ಲಬೇಕು ಎಂದು ಹರ್ಷವ್ಯಕ್ತಪಡಿಸಿದರು.

ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಬಿ.ಎಸ್.ಪ್ರಶಾಂತ್ ಮಾತನಾಡಿ, ಮೈಸೂರಿನ ಪ್ರವಾಸೋದ್ಯಮ ರಾಜ್ಯದೆಲ್ಲೆಡೆ ಗುರ್ತಿಸಿಕೊಳ್ಳುವಂತೆ ಮಾಡಿದ ಕೀರ್ತಿ ಸವಿತಾ ಅವರಿಗೆ ಸಲ್ಲುತ್ತದೆ. ಅವರು, ಜಂಟಿ ನಿರ್ದೇಶಕರಾಗಿದ್ದ ಎರಡು ವರ್ಷಗಳ ಕಾಲ ಆಟೋ ಡ್ರೈವರ್‌ನಿಂದ ಹಿಡಿದು ದೊಡ್ಡ ಉದ್ಯಮಿಯನ್ನು ಸಮಾನವಾಗಿ ತಮ್ಮೊಂದಿಗೆ ಕರೆದುಕೊಂಡು ಹೋಗಿದ್ದಾರೆ ಎಂದು ಗುಣಗಾನ ಮಾಡಿದರು.

ಇದೇ ವೇಳೆ ಟೂರಿಸ್ಟ್ ಮಿತ್ರ ಸಿಬ್ಬಂದಿಗೆ ಜಾಕೆಟ್ ವಿತರಣೆ ಮಾಡಲಾಯಿತು. ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ, ಸ್ಕಲ್ ಇಂಟರ್ನ್ಯಾಷನಲ್ ಮೈಸೂರು ಅಧ್ಯಕ್ಷ ಜಯಕುಮಾರ್, ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ಪ್ರಶಾಂತ್, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಜಿಎಸ್‌ಎಸ್ ಸಂಸ್ಥೆಯ ಶ್ರೀಹರಿ, ಮೈಸೂರು ಗೈಡ್ ಅಸೋಸಿಯೇಷನ್ ಅಧ್ಯಕ್ಷ ಅಶೋಕ್ ಮತ್ತಿತರಿದ್ದರು.

ಪ್ರವಾಸೋದ್ಯಮದ ನೇರ ಪಾಲುದಾರರ ಸಹಕಾರದಿಂದ ಮೈಸೂರು ಪ್ರವಾಸೋದ್ಯಮ ಅಭಿವೃದ್ಧಿ...

ಮೈಸೂರಿನಲ್ಲಿ ಸಾಂಸ್ಕೃತಿಕ ಪ್ರವಾಸೋದ್ಯಮ ಅಭಿವೃದ್ಧಿಯಾಗಬೇಕು. ಇದಕ್ಕೆ ಪ್ರವಾಸೋದ್ಯಮದ ನೇರ ಪಾಲುದಾರರಾದ ಹೋಟೆಲ್ ಮಾಲೀಕರು, ಟ್ರಾವೆಲಿಸ್ಟ್, ಕೈಗಾರಿಕೊದ್ಯಮಿಗಳು, ಗೈಡ್‌ಗಳ ಸಹಕಾರ ಅತ್ಯಂತ ಅವಶ್ಯವಾಗಿದೆ ಎಂದು ಮೈಸೂರು ವಿವಿ ಕುಲಸಚಿವರು(ಆಡಳಿತ) ಹಾಗೂ ಪ್ರವಾಸೋದ್ಯಮ ಇಲಾಖೆ ನಿರ್ಗಮಿತ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಅಭಿಪ್ರಾಯಪಟ್ಟರು.

ಅಭಿನಂದನೆ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಜಂಟಿ ನಿರ್ದೇಶಕಿಯಾಗಿ ಅಧಿಕಾರ ವಹಿಸಿಕೊಂಡಾಗಲೇ ಬರೀ ಇಲಾಖೆಯನ್ನು ನಂಬಿಕೊಂಡರೆ ಯಾವುದೇ ಅಭಿವೃದ್ಧಿ ಕೆಲಸಗಳು ಸಾಧ್ಯವಿಲ್ಲ ಎಂಬುದನ್ನರಿತು, ಪ್ರವಾಸೋದ್ಯಮದ ನೇರ ಪಾಲುದಾರ ಸಹಕಾರ ಪಡೆದುಕೊಳ್ಳಲಾಯಿತು. ಆರಂಭದಲ್ಲಿ ಸಣ್ಣ ಸಣ್ಣ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸುದ್ದಿ ಮಾಧ್ಯಮಗಳು ಹಾಗೂ ಸಾಮಾಜಿಕ ಜಾಲತಾಣಗಳ ಸಹಕಾರದಿಂದ ಪ್ರವಾಸಿಗರ ಸಂಖ್ಯೆ ಹೆಚ್ಚಿಸುವ ಪ್ರಯತ್ನಗಳನ್ನು ಮಾಡಲಾಯಿತು. ನಂತರ ಮೈಸೂರು ಫೆಸ್ಟ್, ಮೈಸೂರು ಬ್ರಾಂಡ್ ಅಭಿಯಾನ, ವಿಶ್ವ ಪ್ರವಾಸೋದ್ಯಮ ದಿನಾಚರಣೆ ಯಶಸ್ವಿಯಾಗಿ ನಡೆದವು. ಇದೆಲ್ಲವೂ ಪಾಲುದಾರರು ಹಾಗೂ ಇಲಾಖೆಯ ಎಲ್ಲಾ ಅಧಿಕಾರಿ–ಸಿಬ್ಬಂದಿ ಟೀಂ ವರ್ಕ್‌ನಿಂದ ಸಾಧ್ಯವಾಯಿತು ಎಂದು ಸ್ಮರಿಸಿದರು.

ಇತ್ತೀಚೆಗೆ ಹಂಪಿಯಲ್ಲಿ ನಡೆದಂತಹ(ಇಬ್ಬರು ವಿದೇಶಿ ಮಹಿಳೆ ಮೇಲೆ ಅತ್ಯಾಚಾರ) ಘಟನೆಗಳಿಂದ ಪ್ರವಾಸೋದ್ಯಮ ಇಲಾಖೆಗೆ ದೊಡ್ಡಮಟ್ಟದ ಹೊಡೆತ ಬೀಳಲಿದೆ. ಒಂದೇ ಒಂದು ಕಪ್ಪು ಚುಕ್ಕೆಯಾದರೆ ಸಾಕಷ್ಟು ಹಿನ್ನಡೆ ಅನುಭವಿಸಬೇಕಾಗುತ್ತದೆ. ಹಾಗಾಗಿ ಪ್ರವಾಸಿಗರಲ್ಲಿ ಭರವಸೆ ಮೂಡಿಸುವ ಕೆಲಸಗಳು ಆಗಬೇಕು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು–ಮಾನಂದವಾಡಿ ರಸ್ತೆಯಲ್ಲಿ 'ಮೃತ್ಯು ಕಂದಕ'

ವಾಹನ ಚಾಲಕರು, ಸವಾರರಿಗೆ ಸಂಚಕಾರ ಸಾಧ್ಯತೆ



ಮೈಸೂರು–ಮಾನಂದವಾಡಿ ಹೆದ್ದಾರಿಯ ಸೇತುವೆ ಬಳಿ 'ಮೃತ್ಯುಕೂಪ' ಸೃಷ್ಟಿಯಾಗಿರುವುದು.

ಮೈಸೂರು, ಮಾ.14(ಎಸ್‌ಬಿಡಿ)– ಮೈಸೂರು–ಮಾನಂದವಾಡಿ ಹೆದ್ದಾರಿಯಲ್ಲೊಂದು 'ಮೃತ್ಯುಕೂಪ' ಸೃಷ್ಟಿಯಾಗಿದೆ.

ನಗರದ ಜೆಎಲ್‌ಬಿ ರಸ್ತೆಯಿಂದ ರೇಷ್ಮೆ ಕಾರ್ಖಾನೆ ಕಡೆಗೆ ಅನತಿ ದೂರದಲ್ಲೇ ರಾಜಕಾಲುವೆಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯೇ 'ಮೃತ್ಯು ಕಂದಕ'ವಾಗಿ ಪರಿಣಮಿಸಿದೆ. ಸೇತುವೆ ತಡೆಗೋಡೆಗೆ ಜೋಡಿಸಿದಂತೆ ಅಳವಡಿಸಿದ್ದ ಮೆಟಲ್ ಬೀಮ್ ಬ್ಯಾರಿಯರ್ ಕಳಚಿ, ಮೋರಿಯತ್ತ ಜಾರಿದೆ. ಮೋರಿ ಸಮೀಪ ಇಂಟರ್ ಲಾಕಿಂಗ್ ಟೈಲ್ಸ್ ಹಾಕಿರುವ ಫುಟ್‌ಪಾತ್ ಕುಸಿಯುತ್ತಿದೆ. ಇದೆಲ್ಲದಕ್ಕಿಂತ ಮುಖ್ಯವಾಗಿ ಸೇತುವೆ ಮೇಲೆಯೇ ಹಳ್ಳ ಬಿದ್ದಿದ್ದು, ಕುಸಿಯುವ ಆತಂಕ ಉಂಟಾಗಿದೆ.

ಈ ಮಾರ್ಗದಲ್ಲಿ ನಿರಂತರ ವಾಹನ ಸಂಚಾರವಿದೆ. ಕೇರಳ ರಾಜ್ಯ ಸಂಪರ್ಕ ರಸ್ತೆಯಾದ ಕಾರಣ ಪ್ರವಾಸಿ ವಾಹನಗಳೂ ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತವೆ. ಕೆಎಸ್‌ಆರ್‌ಟಿಸಿ ಬಸ್, ಲಾರಿ, ಟ್ರಕ್‌ಗಳಂತಹ ಭಾರೀ ವಾಹನಗಳ ಸಂಚಾರವೂ ಹೆಚ್ಚಾಗಿದೆ. ರೇಷ್ಮೆ ಕಾರ್ಖಾನೆ, ರೈಲ್ವೆ ಕಾರ್ಯಾಗಾರ, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಹಲವು ಬಡಾವಣೆಗಳಿರುವುದರಿಂದ ಈ ಮಾರ್ಗದಲ್ಲಿ ಅಪಾರ ಸಂಖ್ಯೆಯ ಜನ ಓಡಾಡುತ್ತಾರೆ. ಸೇತುವೆಯ ಪಕ್ಕದಲ್ಲೇ ಹಾಸ್ಟೆಲ್ ಹಾಗೂ ರೇಷ್ಮೆ ಬೀಜೋತ್ಪಾದನಾ ಕೇಂದ್ರವಿದೆ. ಆದರೂ ಸೇತುವೆಯ ದುಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸದಿರುವುದು ವಿಷಾದನೀಯ.

ಎಚ್ಚೆತ್ತುಕೊಳ್ಳದಿದ್ದರೆ ಅನಾಹುತ: ಸೇತುವೆ ಬಳಿಕ ತಿರುವಿದೆ. ರೇಷ್ಮೆ ಕಾರ್ಖಾನೆ ಕಡೆಯಿಂದ ಬರುವ ವಾಹನಗಳು ತಿರುವಿನಲ್ಲಿ ವೇಗವಾಗಿ ಬಂದರೆ ಸೇತುವೆ ಬಳಿ ಅಪಘಾತ ಸಂಭವಿಸುವ ಸಾಧ್ಯತೆ ಇದೆ ಇನ್ನು ಜೆಎಲ್‌ಬಿ ರಸ್ತೆ ಕಡೆಯಿಂದ ವೇಗವಾಗಿ ಸಾಗುವಾಗ ನಿಯಂತ್ರಣ ಕಳೆದುಕೊಂಡರೆ ಮೆಟಲ್ ಬ್ಯಾರಿಯರ್ ಇಲ್ಲದ ಕಾರಣ ನೇರವಾಗಿ ಮೋರಿಗೆ ಬೀಳುವುದು ನಿಶ್ಚಿತ. ನಿರಂತರ ವಾಹನಗಳ ಸಂಚಾರದ ಒತ್ತಡದಿಂದ ಸೇತುವೆ ಆಸುಪಾಸಿನಲ್ಲಿ ಕುಸಿಯುತ್ತಿರುವುದರಿಂದ ದೊಡ್ಡ ವಾಹನಗಳೂ ಮೋರಿಗೆ ಉರುಳಿ ಬೀಳುವ ಆತಂಕ ಸೃಷ್ಟಿಯಾಗಿದೆ. ಸೇತುವೆಯಲ್ಲಿ ಫುಟ್‌ಪಾತ್ ಇಲ್ಲದ ಕಾರಣ ಪಾದಚಾರಿಗಳು ರಸ್ತೆಯಲ್ಲೇ ಉಸಿರು ಬಿಗಿ ಹಿಡಿದು ಓಡಾಡುತ್ತಾರೆ.

ಸೇತುವೆ ದುಸ್ಥಿತಿಯಲ್ಲಿದ್ದರೂ ತಾತ್ಕಾಲಿಕವಾಗಿ ಬ್ಯಾರಿಕೇಡ್ ಹಾಗೂ ಟೇಪ್ ಅಳವಡಿಸಿ, ವಾಹನ ಸವಾರರಿಗೆ ಸೂಚನೆ ನೀಡುವ ಕೆಲಸ ಮಾಡಿಲ್ಲ. ನಿಧಾನವಾಗಿ ಚಲಿಸುವಂತೆ ಬ್ಯಾರಿಕೇಡ್ ಬಳಸಿ ವೇಗ ನಿಯಂತ್ರಿಸುವ ಕ್ರಮ ಕೈಗೊಂಡಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಸೇತುವೆ ದುರಸ್ತಿಗೆ ಗಮನಹರಿಸಿಲ್ಲ. ನಿರ್ಲಕ್ಷಿಸಿದರೆ ಅನಾಹುತ ಸಂಭವಿಸಿ, ಪ್ರಾಣಹಾನಿಯಾಗುವ ಸಾಧ್ಯತೆ ಇದೆ. ಹಾಗಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕಿದೆ.

ಬೇಲೂರು ಬಳಿ ಕಾಡಾನೆ ದಾಳಿಗೆ ಮಹಿಳೆ ಬಲಿ; ಗ್ರಾಮಸ್ಥರಿಂದ ರಸ್ತೆ ತಡೆ

ಬೇಲೂರು, ಮಾ.14– ಕಾಡಾನೆ ದಾಳಿಗೆ ಮಹಿಳೆಯೊಬ್ಬರು ಬಲಿಯಾಗಿರುವ ಘಟನೆ ಬೇಲೂರು ತಾಲೂಕಿನ ಕೋಗೋಡು ಗ್ರಾಮದಲ್ಲಿ ನಡೆದಿದೆ. ಇದು ಕಳೆದ 2 ತಿಂಗಳಿನಲ್ಲಿ ನಡೆದ ನಾಲ್ಕನೇ ಸಾವಿನ ಪ್ರಕರಣವಾಗಿದೆ.

ಸುಶೀಲಮ್ಮ (63) ಕಾಡಾನೆ ದಾಳಿಗೆ ಮೃತಪಟ್ಟ ಮಹಿಳೆಯಾಗಿದ್ದು, ಭಾನು ಪ್ರಕಾಶ್ ಎಂಬುವವರ ಕಾಫಿ ತೋಟದಲ್ಲಿ ಕೆಲಸ ಮುಗಿಸಿ ಸುಶೀಲಮ್ಮ ವಾಪಸ್ ಆಗುತ್ತಿದ್ದಾಗ ದಿಢೀರ್ ಕಾಡಾನೆಯೊಂದು ಪ್ರತ್ಯಕ್ಷವಾಗಿ ಅವರನ್ನು ಸೊಂಡಿಲಿನಿಂದ ಎತ್ತಿ ಬಿಸಾಡಿ, ತಲೆ ಭಾಗವನ್ನು ತುಳಿದು ಸಾಯಿಸಿದೆ. ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳು, ಅರೇಹಳ್ಳಿ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಹಿಳೆ ಸಾವಿನಿಂದ ರೊಚ್ಚಿಗೆದ್ದ ಗ್ರಾಮಸ್ಥರು ಚೀಕನಹಳ್ಳಿ–ಬೇಲೂರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಟೈರ್‌ಗೆ ಬೆಂಕಿ ಹಚ್ಚಿ ರಸ್ತೆಯಲ್ಲಿ ಧರಣಿ ಕುಳಿತು, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರು. ಸ್ಥಳಕ್ಕೆ ಅರಣ್ಯ ಸಚಿವರು ಆಗಮಿಸುವಂತೆ ಆಗ್ರಹಿಸಿದರಲ್ಲದೇ, ಅರಣ್ಯ ಸಚಿವರು ಬರುವವರೆಗೂ ಶವ ಮೇಲೆತ್ತಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಪ್ರತಿಭಟನೆ ವೇಳೆ ಸಾರಿಗೆ ಬಸ್ ಚಾಲನೆಗೆ ಮುಂದಾದ ಚಾಲಕನ ವಿರುದ್ಧ ಹರಿಹಾಯ್ದ ಪ್ರತಿಭಟನಾಕಾರರು ಬಸ್ ಮುಂದೆ ಹೋಗದಂತೆ ತಡೆದರು.

ಈ ವೇಳೆ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ರಸ್ತೆಯಲ್ಲೇ ಕುಳಿತು ನೂರಾರು ಮಂದಿ ಪ್ರತಿಭಟನೆ ನಡೆಸಿದರು.

ಡಿಸಿ ವಿರುದ್ಧವೂ ಆಕ್ರೋಶ: ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರು ಆಗಮಿಸುತ್ತಿದ್ದಂತೆ ಪ್ರತಿಭಟನಾಕಾರರು ಅವರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರು. ಡಿಸಿಗೆ ಮಾತನಾಡಲು ಅವಕಾಶ ನೀಡದೇ ಪ್ರತಿಭಟನಾಕಾರರು ಆಕ್ರೋಶ ಹೊರಹಾಕಿದರು. ಪ್ರತಿಭಟನಾಕಾರರನ್ನು ನಿಯಂತ್ರಿಸಲು ಪೊಲೀಸರ ಹರಸಾಹಸಪಟ್ಟರು. ಸ್ಥಳದಲ್ಲಿದ್ದ ಸಿಸಿಎಫ್ ಏಡುಕುಂಡಲ, ಡಿಎಫ್‌ಒ ಸೌರಭ್‌ಕುಮಾರ್, ತಹಶೀಲ್ದಾರ್ ಮಮತಾ ಅವರು ಪ್ರತಿಭಟನಾಕಾರರ ಮನವೊಲಿಸಲು ಯತ್ನಿಸಿದರು. ಪ್ರತಿಭಟನೆ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ಸ್ಥಳಕ್ಕೆ ಸಂಸದ ಶ್ರೇಯಸ್ ಪಟೇಲ್ ಆಗಮಿಸಿದ್ದು, ಪ್ರತಿಭಟನಾಕಾರರ ಮನವಿ ಆಲಿಸಲು ಮುಂದಾದರು. ಈ ವೇಳೆ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಲ್ಲಿ ಸಂಭ್ರಮದ ರಂಗಿನ ಹೋಳಿ ಹಬ್ಬ ಆಚರಣೆ



ಮೈಸೂರು, ಮಾ.14(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಹಲವೆಡೆ ಪರಸ್ಪರ ವಿವಿಧ ಬಗೆಯ ಬಣ್ಣ ಎರಚಿ ರಂಗು ರಂಗಿನ ಹೋಳಿ ಹಬ್ಬ ಆಚರಿಸಲಾಯಿತು.

ಶುಕ್ರವಾರ ಬೆಳಗ್ಗೆಯಿಂದಲೇ ನಗರದ ಕೆಲ ಬಡಾವಣೆ, ಬೀದಿಗಳಲ್ಲಿ ಹೋಳಿ ರಂಗು ಕಂಡು ಬಂದಿತು. ಪರಸ್ಪರ ಹೋಳಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು. ವಯಸ್ಸಿನ ಭೇದ–ಭಾವವಿಲ್ಲದೇ ಬಣ್ಣದ ಲೋಕದಲ್ಲಿ ಮುಳುಗೆದ್ದ ಚಿಣ್ಣರು, ಬಾಲಕ–ಬಾಲಕಿಯರು, ಯುವಕ–ಯುವತಿಯರು, ಹಿರಿಯ ನಾಗರಿಕರು ಬಣ್ಣದ ರಂಗಿನಾಟದಲ್ಲಿ ತಲ್ಲೀನರಾಗಿ ಮಿಂದೆದ್ದರು.

ಹೆಬ್ಬಾಳ, ಲೋಕನಾಯಕನಗರ, ಕುವೆಂಪುನಗರದ ಸೋಮಾನಿ ಕಾಲೇಜು ಸಮೀಪದ ಸ್ಮಾರ್ಟ್ ಅಕಾಡೆಮಿ, ವಿಜಯನಗರ, ಸುಣ್ಣದಕೇರಿ, ನಾರಾಯಣಶಾಸ್ತ್ರಿ ರಸ್ತೆ, ಕೆ.ಟಿ.ಸ್ಟ್ರೀಟ್, ನಜರ್‌ಬಾದ್ ಸೇರಿದಂತೆ ಹಲವೆಡೆ ಹೋಳಿ ರಂಗು ಜೋರಾಗಿತ್ತು. ಬಿಸಿಲ ಬೇಗೆ ನಡುವೆಯೂ ಬಣ್ಣದ ನೀರು, ಬಗೆಬಗೆಯ ಬಣ್ಣವನ್ನು ಹಾಕಿ ಹೋಳಿ ಸಂಭ್ರಮವನ್ನು ಹಂಚಿಕೊಂಡರು. ಯುವತಿಯರು ಅವರವರ ಮನೆಯಲ್ಲೇ ಮತ್ತು ಅಕ್ಕಪಕ್ಕದ ಮನೆಯ ಗೆಳತಿಯರಿಗೆ ಬಣ್ಣದ ನೀರು ಹಾಕಿ ಕುಣಿದಾಡಿದರು. ಪರೀಕ್ಷೆ ಹಿನ್ನಲೆ ಕಾಲೇಜು ಕ್ಯಾಂಪಸ್‌ಗಳಲ್ಲಿ ಹೋಳಿ ರಂಗು ಕಾಣಲಿಲ್ಲ. ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜುಗಳಲ್ಲಿ ಹೋಳಿ ಹಬ್ಬದ ಸಡಗರ ಗೋಚರವಾಗಲಿಲ್ಲ.

ಫ್ಲವರ್ ಹೋಳಿ ಸಂಭ್ರಮ: ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಶ್ರೀ ವಿಠಲ ರುಕ್ಮಿಣಿ ಕನ್ವೆನ್ಷನ್ ಹಾಲ್‌ನಲ್ಲಿ ವೃಂದಾವನ, ವೇದಶ್ರೀ ಫೌಂಡೇಷನ್ ವತಿಯಿಂದ ಫ್ಲವರ್ ಹೋಳಿ ಆಚರಿಸಲಾಯಿತು. ಬಣ್ಣದ ರಂಗಿನ ಜೊತೆಗೆ ಹೂವಿನ ಅಲಂಕಾರ, ಪ್ರಾರ್ಥನೆಗಳು ಸಂಭ್ರಮದ ಭಾಗಗಳಾಗಿದ್ದವು. ಫೌಂಡೇಷನ್‌ನ ರಾಧಾಕೃಷ್ಣ ಚಂದ್ರದಾಸ್ ಅವರ ನೇತೃತ್ವದಲ್ಲಿ ದೇಶದ ಎಲ್ಲಾ ರಾಜ್ಯಗಳ ಸುಪ್ರಸಿದ್ಧ 26 ಬಗೆಯ ಖಾದ್ಯಗಳನ್ನು ತಯಾರಿಸಿ, ಉಣಬಡಿಸಲಾಯಿತು. 500ಕ್ಕೂ ಹೆಚ್ಚು ಮಂದಿ ಫ್ಲವರ್ ಹೋಳಿ ಸಂಭ್ರಮದಲ್ಲಿ ಭಾಗವಹಿಸಿ, ಅದ್ಧೂರಿ ಆಚರಣೆಗೆ ಸಾಕ್ಷಿಯಾದರು.

ಪೋಕ್ಸೋ ಪ್ರಕರಣ: ಮಾಜಿ ಸಿಎಂ ಯಡಿಯೂರಪ್ಪರಿಗೆ ಮತ್ತೆ ರಿಲೀಫ್

ಖುದ್ದು ವಿಚಾರಣೆಗೆ ಹಾಜರಿ ಸಮನ್ಸ್‌ಗೆ ಹೈಕೋರ್ಟ್ ತಡೆ



ಬೆಂಗಳೂರು, ಮಾ.14(ಕೆಎಂಶಿ)– ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಖುದ್ದು ವಿಚಾರಣೆಗೆ ಹಾಜರಾಗುವಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ 1ನೇ ತ್ವರಿತಗತಿ ನ್ಯಾಯಾಲಯ ಜಾರಿ ಮಾಡಿದ್ದ ಸಮನ್ಸ್‌ಗೆ ಹೈಕೋರ್ಟ್ ತಡೆ ನೀಡಿದೆ.

ಮಾರ್ಚ್ 15ರಂದು ನ್ಯಾಯಾಲಯಕ್ಕೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಿರುವುದು ಯಡಿಯೂರಪ್ಪ ಅವರಿಗೆ ಮತ್ತೊಮ್ಮೆ ರಿಲೀಫ್ ಸಿಕ್ಕಂತಾಗಿದೆ.

ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿ, 2024ರ ಫೆಬ್ರವರಿ 2ರಂದು ಯಡಿಯೂರಪ್ಪ ಅವರು ಅಪ್ರಾಪ್ತ ಬಾಲಕಿಯೊಂದಿಗೆ ಅನುಚಿತವಾಗಿ ವರ್ತಿಸಿದರೆಂಬ ಆರೋಪವಿದೆ. ಈ ಬಗ್ಗೆ ಒಂದು ತಿಂಗಳ ಬಳಿಕ ಪೊಲೀಸ್ ಆಯುಕ್ತರಿಗೆ ದೂರು ನೀಡಲಾಗಿದೆ. ಸ್ಥಳದಲ್ಲಿದ್ದ ಸಾಕ್ಷಿಗಳು ಅಂತಹ ಘಟನೆ ನಡೆದಿಲ್ಲ ಎಂದಿದ್ದಾರೆ. ಬಾಲಕಿ ಮತ್ತು ಆಕೆಯ ತಾಯಿ ಹೇಳಿಕೆ ಮೇಲೆ ಆರೋಪಪಟ್ಟಿ ದಾಖಲಿಸಲಾಗಿದೆ ಎಂದರು.

ಸಂತ್ರಸ್ತ ಬಾಲಕಿ ತಾಯಿ ಮೊಬೈಲ್‌ನಲ್ಲಿದ್ದ ಸಂಭಾಷಣೆಯನ್ನು ಯಡಿಯೂರಪ್ಪ ಅಳಿಸಿಲ್ಲ. ಪೊಲೀಸರು ಪ್ರಕರಣದಲ್ಲಿ ನಮೂದಿಸಿರುವ ವಿಧಿಗಳು ದೂರುದಾರರಿಗೆ ಅನ್ವಯವಾಗುತ್ತವೆ. ಒಂದು ತಿಂಗಳು 12 ದಿನ ತಡವಾಗಿ ಪೋಕ್ಸೋ ಮೊಕದ್ದಮೆ ದಾಖಲಿಸಲಾಗಿದೆ, ಘಟನೆ ನಡೆದಿದ್ದರೆ, ಯಾರೂ ಇಷ್ಟು ತಡವಾಗಿ ದೂರು ದಾಖಲಿಸುತ್ತಿರಲಿಲ್ಲ.

ಪ್ರಕರಣದ ವಿಚಾರಣೆ ವೇಳೆ ಹೈಕೋರ್ಟ್ ಮಧ್ಯಂತರ ರಿಲೀಫ್ ನೀಡಿತ್ತು. ಅಲ್ಲದೆ, ಖುದ್ದು ಹಾಜರಾತಿಯಿಂದಲೂ ಹೈಕೋರ್ಟ್ ವಿನಾಯಿತಿ ನೀಡಿತ್ತು. ಸಮನ್ಸ್ ರದ್ದುಪಡಿಸಿ ಹೊಸದಾಗಿ ಪರಿಶೀಲನೆಗೆ ಆದೇಶಿಸಲಾಗಿತ್ತು.

ಇದೀಗ ವಿಶೇಷ ಕೋರ್ಟ್ ಕಾಗ್ನಿಜೆನ್ಸ್ ಪಡೆದು ಸಮನ್ಸ್ ಜಾರಿಗೊಳಿಸಿದೆ ಎಂದು ವಾದ ಮಂಡಿಸಿದರು. ಯಡಿಯೂರಪ್ಪ ವಕೀಲರ ವಾದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅಡ್ವೋಕೇಟ್ ಜನರಲ್, ಹೈಕೋರ್ಟ್ ಸೂಚನೆಯಂತೆ ವಿಶೇಷ ಕೋರ್ಟ್ ಸಮನ್ಸ್ ಜಾರಿಗೊಳಿಸಿದೆ, ಸಮನ್ಸ್‌ಗೆ ತಡೆ ನೀಡಬಾರದು ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರ್ ಅವರ ಪೀಠ, ಯಡಿಯೂರಪ್ಪ ಅರ್ಜಿ ವಿಚಾರಣೆಯ ಅಗತ್ಯವಿದೆ ಎನ್ನುವ ಮೂಲಕ ಸಮನ್ಸ್ ಆದೇಶಕ್ಕೆ ತಡೆ ನೀಡಿದರಲ್ಲದೆ, ಖುದ್ದು ಹಾಜರಾತಿಯಿಂದಲೂ ವಿನಾಯಿತಿ ನೀಡಿದರು.

ರನ್ಯಾ ರಾವ್ ಸ್ನೇಹಿತ ತರುಣ್ ರಾಜುಗೆ ನ್ಯಾಯಾಂಗ ಬಂಧನ

ಬೆಂಗಳೂರು, ಮಾ.14– ನಟಿ ರನ್ಯಾ ರಾವ್ ಭಾಗಿಯಾಗಿದ್ದಾರೆ ಎನ್ನಲಾದ ಚಿನ್ನ ಕಳ್ಳಸಾಗಣೆ ಪ್ರಕರಣದ ಎರಡನೇ ಆರೋಪಿಯಾಗಿರುವ ತರುಣ್ ರಾಜು ಅವರನ್ನು ಬೆಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ ಶುಕ್ರವಾರ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ತರುಣ್ ರಾಜು ಅವರ ಕಂದಾಯ ಗುಪ್ತಚರ ನಿರ್ದೇಶನಾಲಯದ ಕಸ್ಟಡಿ ಅಂತ್ಯಗೊಂಡ ನಂತರ ನ್ಯಾಯಾಧೀಶ ವಿಶ್ವನಾಥ್ ಸಿ. ಗೌಡರ್ ಈ ಆದೇಶ ಹೊರಡಿಸಿದ್ದಾರೆ. ಎರಡನೇ ಆರೋಪಿಯನ್ನು ಈಗ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಬಹುದು ಎಂದು ಡಿಆರ್‌ಐ ನ್ಯಾಯಾಲಯಕ್ಕೆ ತಿಳಿಸಿದೆ.

ಗುರುವಾರ ಜಾರಿ ನಿರ್ದೇಶನಾಲಯ ಬೆಂಗಳೂರಿನ ಕುಮಾರ ಪಾರ್ಕ್ ಪೂರ್ವ ರಸ್ತೆಯಲ್ಲಿರುವ ರನ್ಯಾ ರಾವ್ ಅವರ ಆಪ್ತ ಸ್ನೇಹಿತ ಮತ್ತು ಸ್ಟಾರ್ ಹೋಟೆಲ್ ಮಾಲೀಕರ ಮೊಮ್ಮಗನಾದ ತರುಣ್ ರಾಜು ಅವರ ನಿವಾಸದ ಮೇಲೆ ದಾಳಿ ನಡೆಸಿತು.

ಕೈಕೊಟ್ಟ ಪ್ರಿಯಕರ; ರೈಲಿಗೆ ತಲೆಕೊಟ್ಟು ಯುವತಿ ಆತ್ಮಹತ್ಯೆ!

ಮಗಳ ಸಾವಿಗೆ ನ್ಯಾಯ ಸಿಗದಿದ್ದಕ್ಕೆ ತಾಯಿಯೂ ಸಾವಿಗೆ ಶರಣು!!

ಮಂಡ್ಯ, ಮಾ.14– ಮಗಳು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣರಾದವರ ವಿರುದ್ಧ 20 ದಿನವಾದರೂ ಪೊಲೀಸರು ಕ್ರಮ ಕೈಗೊಂಡು, ನ್ಯಾಯ ಕೊಡಿಸಲಿಲ್ಲವೆಂದು ಮನನೊಂದ ತಾಯಿ ಡೆತ್ ನೋಟ್ ಬರೆದಿಟ್ಟು ನೇಣಿಗೆ ಶರಣಾಗಿದ್ದಾರೆ. ಈ ಘಟನೆ ತಾಲೂಕಿನ ಹೆಬ್ಬಕವಾಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಲಕ್ಷ್ಮಿ(37) ಆತ್ಮಹತ್ಯೆ ಮಾಡಿಕೊಂಡ ಮಹಿಳೆ. ಇವರ ಮಗಳು ವಿಜಯಲಕ್ಷ್ಮಿ ಯುವಕನೊಬ್ಬನನ್ನು ಪ್ರೀತಿಸುತ್ತಿದ್ದು, ಆತ ಕೈಕೊಟ್ಟ ಕಾರಣಕ್ಕೆ ಹತಾಶೆಯಿಂದ ವಿಜಯಲಕ್ಷ್ಮಿ ಕಳೆದ ಫೆ.21ರಂದು ಮಂಡ್ಯ ನಗರದಲ್ಲಿ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಳು.

ತನ್ನ ಮಗಳ ಆತ್ಮಹತ್ಯೆಗೆ ಸಂಬಂಧಿಸಿದಂತೆ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಲಕ್ಷ್ಮಿ ದೂರು ಸಲ್ಲಿಸಿದ್ದರು. ತಮ್ಮ ಮಗಳಿಗೆ ವಂಚಿಸಿದ ಪ್ರಿಯಕರನ ವಿರುದ್ಧ



ವಿಜಯಲಕ್ಷ್ಮಿ



ಲಕ್ಷ್ಮಿ

ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದರು. ಆದರೆ ಇಲ್ಲಿವರೆಗೆ ಪೊಲೀಸರು ಏನೂ ಕ್ರಮ ಕೈಗೊಳ್ಳಲಿಲ್ಲ ಎಂದು ದೂರಿ ಡೆತ್‌ನೋಟ್‌ನಲ್ಲಿ ಯುವಕರ ಕುಟುಂಬದವರು ಮತ್ತು ಗ್ರಾಮದ ಕೆಲವು ಮುಖಂಡರ ಹೆಸರುಗಳನ್ನು ಬರೆದಿಟ್ಟು ಲಕ್ಷ್ಮಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಡೆತ್‌ನೋಟ್‌ನಲ್ಲೇನಿದೆ?: ನನ್ನ ಮಗಳು ಡೆತ್ ಆಗಿ 20 ದಿನ ಕಳೆದರೂ ಕಾನೂನು ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಹಾಗೂ ಹರಿಕೃಷ್ಣ ಮನೆಯವರು ನಮ್ಮ ಮನೆಯವರ ಮೇಲೆ ದರ್ಪ, ದೌರ್ಜನ್ಯ ತೋರಿಸಿ ಹಣದ ಮೋಹಕ್ಕೆ ಕಾನೂನು ಜಾರಿಯಾಗಿದ್ದು, ಇವರು ನನ್ನ ಸಾವಿಗೆ ಕಾರಣರಾಗಿದ್ದಾರೆ. ಕೆಂಪೇಗೌಡ, ಸರೋಜಮ್ಮ, ನಾಗಣ್ಣ, ಚಿಕ್ಕತಿಮ್ಮೇಗೌಡ, ಪುಟ್ಟೇಗೌಡ, ಶಿವು, ಮಂಜು, ಪ್ರಕಾಶ ಇವರು ನಮ್ಮ ಊರಿನ ಜನಗಳು. ನ್ಯಾಯ ಕೇಳುವುದಕ್ಕೆ ಹೋಗುವುದರಿಂದ ಆ ಜನರ ಮೇಲೆ ಕಂಪ್ಲೇಂಟ್ ಮಾಡಿ ಅವರದೇ ತಪ್ಪಿದ್ದರೂ ನಮ್ಮ ಊರಿನ ಜನರ ಮೇಲೆ ತಪ್ಪು ಹೊರಿಸಿದ್ದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ಇವರೇ ಕಾರಣ ನನ್ನ ಮಗಳಿಗೆ ನ್ಯಾಯ ಕೊಡಿಸಿ ಎಂದು ಡೆತ್‌ನೋಟ್ ಬರೆಯಲಾಗಿದೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಆಹ್ವಾನ



ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿರುವ 'ಮನೆ ಮಾದೇಗೌಡ'ರು ಎಂದೇ ಹೆಸರಾಗಿರುವ ಆಶಾ ಮಂದಿರದ ರೂವಾರಿ ಡಿ. ಮಾದೇಗೌಡರ ಅಭಿನಂದನಾ ಕಾರ್ಯಕ್ರಮಕ್ಕೆ ಹಾಲಿ ಸಂಸದರೂ ಆದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಶುಕ್ರವಾರ ಆಹ್ವಾನಿಸಲಾಯಿತು. ಈ ವೇಳೆ ಅಭಿನಂದನಾ ಸಮಿತಿಯ ಅಧ್ಯಕ್ಷ ದೇವಿಪ್ರಸಾದ್, ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್ ಹಾಗೂ ಉದ್ಯಮಿ ಚೇತನ್ ಉಪಸ್ಥಿತರಿದ್ದಾರೆ.



ಹಸಿರು ನಮ್ಮ ಉಸಿರು

ಮೈಸೂರು ಮಿತ್ರ ಶನಿವಾರ 15 ಮಾರ್ಚ್ 2025

ಹೋಳಿ ಹುಣ್ಣಿಮೆ ಸಂದರ್ಭ ಪ್ರಸನ್ನ ನಂಜುಂಡೇಶ್ವರ ಸ್ವಾಮಿ ರಥೋತ್ಸವ

ಮೈಸೂರು, ಮಾ.14– ಮೈಸೂರಿನ ಹಳೇ ಸಂತೆಪೇಟೆಯಲ್ಲಿರುವ ಪುರಾತನ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನದಲ್ಲಿ ಹೋಳಿ ಹುಣ್ಣಿಮೆ ಅಂಗವಾಗಿ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿ ರಥೋತ್ಸವಕ್ಕೆ ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡರ ಪತ್ನಿ ಗೌರಿ ಹರೀಶ್‌ಗೌಡರು ಚಾಲನೆ ನೀಡಿದರು.



ರಥೋತ್ಸವ ಹಳೆ ಸಂತೆಪೇಟೆ ರಸ್ತೆ ಮಾರ್ಗದಿಂದ ರವಾವಿಲಾಶ್ ರಸ್ತೆ, ಕೃಷ್ಣ ವಿಲಾಸ್ ರಸ್ತೆ ಮೂಲಕ ಸಾಗಿತು. ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು. ಮಾಜಿ ಶಾಸಕ ಎಲ್. ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಧ್ರುವ ಕುಮಾರ್, ಮಾಜಿ ನಗರ ಪಾಲಿಕಾ ಸದಸ್ಯ ಪ್ರಶಾಂತ್ ಗೌಡ, ಕಿಶನ್ ಹರೀಶ್‌ಗೌಡ ಸಮಿತಿಯ ಅಧ್ಯಕ್ಷರಾದ ರಾಜು, ಉಪಾಧ್ಯಕ್ಷರಾದ ಮುನಾವರ್ ಪಾಷಾ, ಕಾರ್ಯದರ್ಶಿ ಆಸಿಫ್ ಅಹಮದ್, ಸಹ ಕಾರ್ಯದರ್ಶಿ ಸೋಮಶೇಖರ್, ನಂಜುಂಡಿ, ನವೀನ್, ರವಿಚಂದ್ರ, ವಿಘ್ನೇಶ್ವರ ಭಟ್, ಸುದರ್ಶನ್, ಪ್ರವೀಣ್ ಇನ್ನಿತರರು ಉಪಸ್ಥಿತರಿದ್ದರು.

ಇಂದು ಧನ್ಯಾ ರಂಗಪ್ರವೇಶ



ಮೈಸೂರು, ಮಾ. 14– ನಾದ ವಿದ್ಯಾಲಯ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್ ವತಿಯಿಂದ ಮಾ. 15 ರಂದು ಸಂಜೆ 5.30ಕ್ಕೆ ಜಗನ್ಮೋಹನ ಅರಮನೆಯಲ್ಲಿ ಮಿತ್ರಾ ನವೀನ್ ಅವರ ಶಿಷ್ಯೆ ಎಂ.ಆರ್.ಧನ್ಯಾ ಅವರ ಭರತ ನಾಟ್ಯ ರಂಗಪ್ರವೇಶ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಬೇಬಿ ಮಠದ ಡಾ. ಶ್ರೀ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ವಾಗ್ಮಿ ಮತ್ತು ಸಂಸ್ಕೃತಿ ಚಿಂತಕ ಪ್ರೊ. ಕೃಷ್ಣೇಗೌಡ, ನಾಟ್ಯಾ ಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಗುರು ವಿದುಷಿ ಮಿತ್ರ ನವೀನ್ ಅವರನ್ನು ಇದೇ ವೇಳೆ ಸನ್ಮಾನಿಸಲಾಗುವುದು. ಕಾರ್ಯಕ್ರಮದ ನಿರ್ದೇಶನ, ನೃತ್ಯ ಸಂಯೋಜನೆ, ನಟ್ಟುವಾಂಗ ಗುರು ವಿದುಷಿ ಮಿತ್ರಾ ಅವರದು. ಗಾಯನದಲ್ಲಿ ವಿದ್ವಾನ್ ಎಂ.ಎಸ್. ನವೀನ್, ಕೊಳಲಿನಲ್ಲಿ ವಿದ್ವಾನ್ ವಿವೇಕ್ ಕೃಷ್ಣ, ಮೃದಂಗದಲ್ಲಿ ವಿದ್ವಾನ್ ಜಿ.ಎಸ್. ನಾಗರಾಜ್ ಸಹಕಾರ ನೀಡಲಿದ್ದಾರೆ.

ಒಂದನೇ ಪುಟದಿಂದ

ಆನಂದಮಯ ಚರ್ಚೆಗೆ ನಾಂದಿ!

ಮತ್ತೆ ಮಾತನಾಡಲು ಆರಂಭಿಸಿದ ರವಿ, ಯಾಕೋ ನೀವು ಬೆಳಗ್ಗೆಯಿಂದ ಲವಲವಿಕೆಯಿಂದ ಇದ್ದೀರಿ, ಏನಾದರೂ ಸಂತೋಷದ ಸುದ್ದಿ ಇದೆಯೇ ಎಂದು ಪ್ರಶ್ನಿಸಿದರು. ನೀವು ಇಂದು ಅತ್ಯಂತ ಪ್ರಸನ್ನರಾಗಿ ಕಾಣುತ್ತಿದ್ದೀರಿ, ಏನಾದರೂ ಶುಭ ಸೂಚನೆ ನಿಮಗೆ ಸಿಕ್ಕಿದೆಯಾ? ಸೂಕ್ತಕಾಲ ಎನ್ನುವ ಮಾತನ್ನು ಉಪಯೋಗಿಸಿದ್ದೀರಿ, ನೀವು ಹಾಕಿಕೊಂಡಿರುವ ಶಾಲು ಕೂಡಾ ನಿಮಗೆ ಕಳೆಕೊಡುತ್ತಿದೆ ಎಂದು ಡಿ.ಕೆ.ಶಿವಕುಮಾರ್ ಅವರನ್ನು ವಿನೋದದಿಂದಲೇ ಪ್ರಶ್ನಿಸಿದರು.

ಏನಾದರೂ ಶುಭ ಶಕುನ ಆಗಿದ್ದರೆ ಹೇಳಿ, ನಿಮ್ಮ ಸಂತೋಷವನ್ನು ನಮ್ಮ ಜೊತೆ ಹಂಚಿಕೊಳ್ಳಿ ಎಂದು ರವಿ, ಡಿಕೆಶಿ ಕಾಲೆಳೆದರು. ಆಗ ಎದ್ದು ನಿಂತ ರವಿ ಕುಮಾರ್, ನಿನ್ನೆ ಡಿನ್ನರ್ ಪಾರ್ಟಿಯನ್ನು ಕೊಟ್ಟಿದ್ದೀರಿ. ಇದೆಲ್ಲಾ ಶುಭಸೂಚನೆಯ ಸಂಕೇತವೇ ಇರಬೇಕು ಎಂದು ಹೇಳಿದರು.

ಆಗ ಮಧ್ಯ ಪ್ರವೇಶಿಸಿದ ಡಿ.ಕೆ.ಶಿವ ಕುಮಾರ್, ಬಿಜೆಪಿಯವರು ನೀವು ಊಟಕ್ಕೆ ಬರುತ್ತೀರಾ ಎಂದಾದರೆ ಊಟ ಹಾಕೋಕೆ ನಾನು ರೆಡಿ ಎಂದು ಹೇಳಿದರು. ಆಗ ಮತ್ತೆ ಮಾತನಾಡಿದ ರವಿಕುಮಾರ್, ಸದ್ಯದಲ್ಲೇ ಡಿಕೆಶಿಯವರು ನಮಗೆಲ್ಲರಿಗೂ ಊಟ ಹಾಕಿಸುತ್ತಾರೆ ಬಿಡಿ ಎಂದು ಹೇಳಿದರು. ಜನರನ್ನು ಸಂತೋಷ ಪಡಿಸುವುದೇ ನಿಜವಾದ ಈಶ್ವರನ ಪೂಜೆ ಎಂದು ಮೊದಲು ಸಂಸ್ಕೃತದಲ್ಲಿ ನಂತರ ಕನ್ನಡದಲ್ಲಿ ಡಿಕೆಶಿ ಹೇಳಿದರು. ಹಾಗಾಗಿ ನೀವೆಲ್ಲಾ ಸಂತೋಷದಿಂದ ಇದ್ದರೆ, ನಾನೂ ಸಂತೋಷ ಪಟ್ಟಂತೆ ಎಂದು ಹೇಳಿದರು.

1984ರಲ್ಲಿ ನಾನು ಅಸೆಂಬ್ಲಿಗೆ ನಿಂತಿರುವುದು. ಅಂದಿನಿಂದ ನಿಮ್ಮನ್ನು ನೋಡುತ್ತಾ ಇದ್ದೇನೆ ಎಂದು ಡಿಕೆಶಿ ಹೇಳಿದರು. ಆಗ ಮತ್ತೆ ಎದ್ದು ನಿಂತ ರವಿಕುಮಾರ್, ಅದಕ್ಕಾಗಿಯೇ ನಿಮ್ಮನ್ನು ಕೇಳುತ್ತಿದ್ದೇನೆ. ರಾಜಕೀಯದಲ್ಲಿ ಮೇಲೆಮೇಲೆಕ್ಕೆ ಹೋಗುತ್ತಿದ್ದೀರಿ, ಗುರಿ ತಲುಪುವುದು ಯಾವಾಗ ಎಂದು ಪುನರ್ ಪ್ರಶ್ನಿಸಿದರು.

ನಿಮ್ಮ ಸಹಕಾರವಿರಲಿ, ಅಸಲಿಗೆ ನಿಮ್ಮ (ಬಿಜೆಪಿ) ಕಾಟದಿಂದಲೇ ನಾನು ಕೆಳಗೆ ಬಿದ್ದವನು ಎಂದು ಹೇಳಿದರು. ಆಗ, ಮಧ್ಯ ಪ್ರವೇಶಿಸಿದ ಸಭಾಪತಿ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿಗಳೇ, ಬಿಜೆಪಿಯವರು ಯಾಕೋ ನಿಮ್ಮ ಮೇಲೆ ಬಹಳ ಕಾಳಜಿ ತೋರಿಸುತ್ತಿದ್ದಾರೆ, ಯಾವುದಕ್ಕೂ ಸಾಯಂಕಾಲ ತನಕ ಹುಷಾರಾಗಿರಿ ಎಂದು ವ್ಯಂಗ್ಯವಾಡಿದರು.

ಯಾವುದೇ ವಿವಿ ಮುಚ್ಚುವ ತೀರ್ಮಾನ ಮಾಡಿಲ್ಲ: ಸಿಎಂ

ಯಾವುದೇ ವಿಶ್ವ ವಿದ್ಯಾನಿಲಯಗಳನ್ನು ಮುಚ್ಚುವ ತೀರ್ಮಾನ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ. ವಿಶ್ವ ವಿದ್ಯಾನಿಲಯ ಕುರಿತ ಸಂಪುಟ ಉಪಸಮಿತಿ ವರದಿ ಇನ್ನೂ ಬಂದಿಲ್ಲ. ಇದಕ್ಕೂ ಮೊದಲೇ ಬಿಜೆಪಿಗೆ ಆತಂಕ ಏಕೆ ಎಂದರು. ವಿರೋಧ ಪಕ್ಷದ ಸದಸ್ಯರು ವ್ಯಕ್ತಪಡಿಸಿದ ಆತಂಕಕ್ಕೆ ಉತ್ತರಿಸಿದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಕೂಲಂಕುಷ ಪರಿಶೀಲನೆ ನಡೆಸಲಾಗುತ್ತಿದೆ. ಉಪಸಮಿತಿ ವರದಿ ಬಾಕಿ ಇದೆ, ವರದಿ ಬಂದ ನಂತರ ಸಂಪುಟದ ಮುಂದೆ ತಂದು ತೀರ್ಮಾನ ತೆಗೆದು ಕೊಳ್ಳಲಾಗುವುದು ಎಂದರು. ವರದಿ ಬರುವ ಮೊದಲೇ ವಿವಿಗಳನ್ನು ಮುಚ್ಚುತ್ತೇವೆ ಎನ್ನುವುದು ಸರಿಯಲ್ಲ. ಇಂತಹ ಯಾವುದೇ ತೀರ್ಮಾನ ನಮ್ಮಿಂದ ಇನ್ನೂ ಆಗಿಲ್ಲ ಎಂದರು.

ಹೆಗಲಾಗಿ ನಿಂತವರು ಡಿಕೆಶಿ...


ಮಾಡೋಣ ಎಂದಿದ್ದಾರೆ. ಮುಖ್ಯ ಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಶಿವಕುಮಾರ್ ಅವರಿಗೆ ಸಿದ್ದರಾಮಯ್ಯ ಬಣದ ಸಚಿವರು, ಶಾಸಕರು ಅಡ್ಡಗಾಲಾಗಿದ್ದಾರೆ. ಎಲ್ಲರನ್ನೂ ಸರಿದೂಗಿಸಿಕೊಂಡು ಹೋಗಿ ಎಂದು ಎಐಸಿಸಿ ವರಿಷ್ಠರು ನೀಡಿರುವ ಸಂದೇಶದ ಹಿನ್ನೆಲೆಯಲ್ಲಿ ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಐದು ವರ್ಷ ಪೂರೈಸಿದ ನೆನಪಿನಲ್ಲಿ ಪಂಚತಾರಾ ಹೋಟೆಲ್‌ನಲ್ಲಿ ಭರ್ಜರಿ ಔತಣಕೂಟ ಏರ್ಪಡಿಸಿದ್ದರು.

ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಮುಂಬರುವ ಜುಲೈ ಮಧ್ಯ ಭಾಗದಲ್ಲಿ ಐದು ವರ್ಷ ಪೂರ್ಣಗೊಳ್ಳಲಿದೆ. ಆದರೆ, ಅವರು, ಅಧ್ಯಕ್ಷರಾಗಿ ಬಂದ ಆದೇಶ ಪತ್ರದ ದಿನಾಂಕ ಮುಂದಿಟ್ಟುಕೊಂಡು ಮುಖ್ಯಮಂತ್ರಿ ಗಾದಿಗೇರಲು ವೇದಿಕೆ ನಿರ್ಮಿಸಿಕೊಂಡಿದ್ದಾರೆ. ಶಿವಕುಮಾರ್ ಅವರೇ ಖುದ್ದಾಗಿ ಮುಖ್ಯಮಂತ್ರಿ, ಸಂಪುಟದ ಸಚಿವರು, ಪಕ್ಷದ ಸಂಸದರು ಹಾಗೂ ಶಾಸಕರಿಗೆ ಆಹ್ವಾನ ನೀಡಿದ್ದರು. ಈ ಆಹ್ವಾನಕ್ಕೆ ಬಹುತೇಕರು ಹಾಜರಾಗಿದ್ದರೂ, ಸಿದ್ದರಾಮಯ್ಯ ಕಟ್ಟಾ ಬೆಂಬಲಿಗ ಸಚಿವರು ಹಾಗೂ 40ಕ್ಕೂ ಹೆಚ್ಚು ಶಾಸಕರು ಗೈರುಹಾಜರಾಗಿದ್ದರು. ಶಿವಕುಮಾರ್ ಗುರುವಾರ ಔತಣಕೂಟ ಏರ್ಪಡಿಸುವುದಕ್ಕೂ ಮುನ್ನ ತಮ್ಮ ಆಪ್ತ ಚನ್ನಗಿರಿ ಶಾಸಕ ಬಸವರಾಜ್ ವಿ.ಶಿವಗಂಗಾ ಹಾಗೂ ಜೆಡಿಎಸ್‌ನ ಶರಣಗೌಡ ಕಂದಕೂರು ನಾಯಕತ್ವದಲ್ಲಿ ಕಳೆದ ಮಂಗಳವಾರ ಪಂಚತಾರಾ ಹೋಟೆಲ್ ಒಂದರಲ್ಲಿ ಬೋಜನಕೂಟ ಏರ್ಪಡಿಸಿದ್ದರು.

ಬಸವರಾಜ್ ಶಿವಗಂಗಾ ಕರೆದ ಔತಣಕೂಟದಲ್ಲಿ 57 ಶಾಸಕರು ಭಾಗಿಯಾಗಿದ್ದರು. ಕಾಂಗ್ರೆಸ್ ಅಲ್ಲದೆ, ಬೇರೆ ಪಕ್ಷದ ಶಾಸಕರೂ ಉಪಸ್ಥಿತರಿದ್ದರು. ಇದರ ಪೂರ್ಣ ವೆಚ್ಚವನ್ನು ಮಂಡ್ಯ ಶಾಸಕರೊಬ್ಬರು ಭರಿಸಿದ್ದರು. ಶಿವಕುಮಾರ್ ಬೆಂಬಲಿಗರು ಔತಣಕೂಟ ಏರ್ಪಡಿಸಿದ್ದರು ಎಂಬ ಮಾಹಿತಿ ಸಿದ್ದರಾಮಯ್ಯ ಅವರಿಗೆ ತಲುಪುತ್ತಿದ್ದಂತೆ, ಬುಧವಾರ ವಿಧಾನಸಭೆಯಲ್ಲೇ, ಯಾವುದೋ ಒಂದು ವಿಷಯವನ್ನು ಮುಂದಿಟ್ಟುಕೊಂಡು ನಾನೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಟಾಂಗ್ ನೀಡಿದ್ದರು.

ತೋಟದ ಮನೆಯಲ್ಲಿ ರೌಡಿಶೀಟರ್ ಬರ್ಬರ ಹತ್ಯೆ

●ಜಯಪುರ ಬಳಿಯ ಅನಗಹಳ್ಳಿಯಲ್ಲಿ ಘಟನೆ ●ಈ ವೇಳೆ ಆತನ ಜೊತೆ ಇದ್ದ ಪ್ರೇಯಸಿ ಪರಾರಿ ಶಂಕೆ ●ಈ ಸಂಬಂಧ ಐವರು ಶಂಕಿತ ಆರೋಪಿಗಳು ಪೊಲೀಸ್ ವಶಕ್ಕೆ



ದೊರೆಸ್ವಾಮಿ ಅಲಿಯಾಸ್ ಸೂರ್ಯ

ಜಯಪುರ, ಮಾ. 14– ರೌಡಿಶೀಟರ್ ಒಬ್ಬನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಮೈಸೂರು ತಾಲೂಕು ಜಯಪುರ ಸಮೀಪದ ಅನಗಹಳ್ಳಿಯ ತೋಟದ ಮನೆಯಲ್ಲಿ ನಡೆದಿದೆ. ಈ ಸಂಬಂಧ ಮೈಸೂರು ಜಿಲ್ಲಾ ಪೊಲೀಸರು ಈಗಾಗಲೇ ಐವರನ್ನು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅನಗಹಳ್ಳಿ ಗ್ರಾಮದ ದೊರೆಸ್ವಾಮಿ ಅಲಿಯಾಸ್ ಸೂರ್ಯ(30) ಹತ್ಯೆಗೀಡಾದವನಾಗಿದ್ದು, ಈತನ ವಿರುದ್ಧ ಜಯ ಪುರ ಠಾಣೆಯಲ್ಲಿ ಕೊಲೆ ಯತ್ನ, ಮೈಸೂ ರಿನ ವಿಜಯನಗರ ಠಾಣೆ, ಹುಣಸೂರು ತಾಲೂಕು ಬಿಳಿಕೆರೆ ಠಾಣೆಯಲ್ಲಿ ಕಳವು ಪ್ರಕರಣಗಳು ದಾಖಲಾಗಿದ್ದು, ರೌಡಿ ಶೀಟರ್ ಆಗಿದ್ದ ಎಂದು ಹೇಳಲಾಗಿದೆ.

ವಿವರ: ವಿವಾಹಿತನಾಗಿರುವ ಸೂರ್ಯ, ತನಗೆ ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾದ ಯುವತಿಯೊಂದಿಗೆ ಸಂಬಂಧ ಹೊಂದಿದ್ದು, ಕಳೆದ 6 ತಿಂಗಳಿಂದ ಆಕೆಯನ್ನು ತನ್ನ ತೋಟದ ಮನೆಗೆ ಕರೆತಂದು ಇರಿಸಿಕೊಂಡಿದ್ದ ಎಂದು ಹೇಳಲಾಗಿದೆ. ಅಲ್ಲದೇ, ತನ್ನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಯುವತಿಯೊಂದಿಗಿನ ಫೋಟೋಗಳನ್ನು ಸತತವಾಗಿ ಅಪ್‌ಲೋಡ್ ಮಾಡಿದ್ದಾನೆ. ಈ ಕಾರಣದಿಂದ ಈತನ ಪತ್ನಿ ದೀಪಿಕಾ, ಆತನನ್ನು ತೊರೆದು ಅತ್ತೆಯೊಂದಿಗೆ (ಸೂರ್ಯನ ತಾಯಿ) ಬೇರೆ ಮನೆಯಲ್ಲಿ ವಾಸಿಸುತ್ತಿದ್ದರು ಎಂದು ಹೇಳಲಾಗಿದೆ.

ಸೂರ್ಯ ಬುಧವಾರ ರಾತ್ರಿ 8 ಗಂಟೆ ಸುಮಾರಿನಲ್ಲೂ ಇನ್‌ಸ್ಟಾಗ್ರಾಂ ಖಾತೆಯಲ್ಲಿ ತಾನು ಪ್ರೇಯಸಿಯೊಂದಿಗಿರುವ ಫೋಟೋವನ್ನು ಅಪ್‌ಲೋಡ್ ಮಾಡಿದ್ದ. ನಂತರ ಬುಧವಾರ ಎಷ್ಟೊತ್ತಾದರೂ ಮನೆಯಿಂದ ಹೊರಗೆ ಬಾರದೇ ಇದ್ದಾಗ ಅಕ್ಕ-ಪಕ್ಕದವರು ಹೋಗಿ ನೋಡಲಾಗಿ ಸೂರ್ಯ ರಕ್ತದ ಮಡುವಿನಲ್ಲಿ ಶವವಾಗಿ ಬಿದ್ದಿದ್ದಾನೆ. ಅದೇ ವೇಳೆ ಆತನೊಂದಿಗಿದ್ದ ಯುವತಿ ತನ್ನ ಎಲ್ಲಾ ವಸ್ತುಗಳನ್ನು ಮನೆಯಲ್ಲೇ ಬಿಟ್ಟು ನಾಪತ್ತೆಯಾಗಿರುವುದು ಕಂಡು ಬಂದಿದೆ. ಅಲ್ಲದೇ, ಈ ಹಿಂದೆ ಸೂರ್ಯ, ತನ್ನ ಪ್ರೇಯಸಿ ಆಸ್ತಿ ಬರೆದುಕೊಡುವಂತೆ ಒತ್ತಡ ಹೇರುತ್ತಿದ್ದಾಳೆ. ಹೀಗಾಗಿ ತನ್ನ ಪಾಲಿನ ಆಸ್ತಿಯನ್ನು ತನ್ನ ಹೆಸರಿಗೆ ಬರೆದು ಕೊಡುವಂತೆ ತಾಯಿಗೆ ಪೀಡಿಸುತ್ತಿದ್ದ. ಇತ್ತೀಚೆಗೆ ಆಸ್ತಿಗಾಗಿ ಗೋಗರೆದು ವಾಯ್ಸ್ ಮೆಸೇಜ್‌ಗಳನ್ನು ತಾಯಿಗೆ ರವಾನಿಸಿದ್ದ ಎಂದು ಹೇಳಲಾಗಿದ್ದು, ಸೂರ್ಯ ಹತ್ಯೆಗೀಡಾಗಿ, ಪ್ರೇಯಸಿ ನಾಪತ್ತೆಯಾಗಿದ್ದರಿಂದ ಆಕೆಯೇ ಹತ್ಯೆ ಮಾಡಿರಬಹುದು ಎಂಬ ಮಾತುಗಳು ಕೇಳಿಬರುತ್ತಿತ್ತು. ಅದೇ ವೇಳೆ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಎಸ್ಪಿ ವಿಷ್ಣುವರ್ಧನ್, ಅಡಿಷನಲ್ ಎಸ್ಪಿ ಮಲ್ಲಿಕಾ, ಡಿವೈಎಸ್ಪಿ ಕರೀಂ ರಾವುತರ್, ಸರ್ಕಲ್ ಇನ್‌ಸ್ಪೆಕ್ಟರ್ ಶಿವನಂಜ ಶೆಟ್ಟಿ ಮತ್ತು ಜಯಪುರ ಠಾಣೆ ಸಬ್ ಇನ್‌ಸ್ಪೆಕ್ಟರ್ ಪ್ರಕಾಶ್ ಯತ್ತಿನಮನಿ, ಪರಿಶೀಲನೆ ನಡೆಸಿದರು. ಎಸ್ಪಿ ವಿಷ್ಣುವರ್ಧನ್ ಮತ್ತು ಅಡಿಷನಲ್ ಎಸ್ಪಿ ಮಲ್ಲಿಕ್ ನಿರ್ದೇಶನದ ಮೇರೆಗೆ ಡಿವೈಎಸ್ಪಿ ಕರೀಂ ರಾವುತರ್ ನೇತೃತ್ವದ ತಂಡ ಕಾರ್ಯಾಚರಣೆಗಿಳಿದಿತ್ತು. ಅದೇ ವೇಳೆ ಮೈಸೂರು ಜಿಲ್ಲಾ ಗುಪ್ತದಳವೂ ಮಾಹಿತಿ ಸಂಗ್ರಹದಲ್ಲಿ ತೊಡಗಿತ್ತು.

ಹಳೇ ದ್ವೇಷದ ಹಿನ್ನೆಲೆಯಲ್ಲಿ ಬುಧವಾರ ರಾತ್ರಿ ಸೂರ್ಯನ ತೋಟದ ಮನೆಗೆ ನುಗ್ಗಿದ ಗುಂಪೊಂದು ಮಾರಕಾಸ್ತಗಳಿಂದ ಆತನನ್ನು ಕೊಚ್ಚಿ ಕೊಲೆ ಮಾಡಿದೆ. ಈ ಸಂದರ್ಭದಲ್ಲಿ ಆತನ ಪ್ರೇಯಸಿ ಸ್ಥಳದಿಂದ ಓಡಿ ಹೋಗಿದ್ದಾಳೆ ಎಂಬ ಖಚಿತ ಮಾಹಿತಿ ಪೊಲೀಸರಿಗೆ ದೊರೆತಿದೆ. ಇಂದು ಬೋಗಾದಿ ಸುತ್ತ ಮುತ್ತಲ ನಿವಾಸಿಗಳಾದ ಐವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅಡಿಷನಲ್ ಎಸ್ಪಿ ಮಲ್ಲಿಕಾ ಅವರು, ಈ ಪ್ರಕರಣದಲ್ಲಿ ಈವರೆಗೂ ಯಾರನ್ನೂ ಬಂಧಿಸಿಲ್ಲ. ಆದರೆ, ಆರೋಪಿಗಳ ಬಗ್ಗೆ ಸುಳಿವು ದೊರೆತಿದ್ದು, ಶೀಘ್ರದಲ್ಲೇ ಬಂಧಿಸುವ ವಿಶ್ವಾಸ ವ್ಯಕ್ತಪಡಿಸಿದರು.


ಶಾಲಾ ವಾರ್ಷಿಕೋತ್ಸವದಲ್ಲಿ ಯು.ಟಿ.ಖಾದರ್...



ಮೈಸೂರಿನ ವಿವೇಕಾನಂದನಗರದ ಕಿಡ್‌ಜೀ ಪ್ರೀ ಸ್ಕೂಲ್‌ನ ವಾರ್ಷಿಕೋತ್ಸವವನ್ನು ವಿಧಾನಸಭೆ ಸಭಾಪತಿ ಯು.ಟಿ.ಖಾದರ್ ಉದ್ಘಾಟಿಸಿದರು. ವಿಶ್ರಾಂತ ಮುಖ್ಯ ಅಭಿಯಂತರ ಶಂಕರ್ ದೇವನೂರು, ಎಸಿಪಿ ಡಾ.ಪ್ರಿಯದರ್ಶಿನಿ ಸಾಣೆಕೊಪ್ಪ, ಡಾ.ಸಂತೋಷ ನವಲೂರು, ಸೆಂಟರ್ ಮುಖ್ಯಸ್ಥ ಕೆ.ಎಸ್.ಗಿರೀಶ್, ಶಾಲೆ ಮುಖ್ಯ ಶಿಕ್ಷಕಿ ನಂದಿನಿ ಉಪಸ್ಥಿತರಿದ್ದರು.

ಪಪಂ., ಪುರಸಭೆಯ 3 ಕಿ.ಮೀ. ವ್ಯಾಪ್ತಿಯ ಕಂದಾಯ ಭೂಮಿ ಸಕ್ರಮಕ್ಕೆ ಅವಕಾಶವಿಲ

ಮಹಾನಗರ ಪಾಲಿಕೆಯ 10 ಕಿಮೀ, ನಗರ ಸಭೆಗಳ 5 ಕಿಮೀ ವ್ಯಾಪ್ತಿಯಲ್ಲಿ ಬಗರ್‌ಹುಕುಂ ಸಾಗುವಳಿ ಮಂಜೂರು ಸಾಧ್ಯವಿಲ್ಲ



ಬೆಂಗಳೂರು, ಮಾ. 14(ಕುಂಶಿ)–ಪಟ್ಟಣ ಪಂಚಾಯತ್ ಮತ್ತು ಪುರಸಭೆ ವ್ಯಾಪ್ತಿಯ 3 ಕಿ.ಮೀ. ವ್ಯಾಪ್ತಿಯೊಳಗೆ ಕಂದಾಯ ಭೂಮಿಯ ನಮೂನೆ–50, 53, 57ರ ಅರ್ಜಿಗಳ ಸಕ್ರಮಕ್ಕೆ ಅವ ಕಾಶವಿಲ್ಲ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನಸಭೆಗಿಂದು ತಿಳಿ ಸಿದ್ದಾರೆ. ಟಿ.ಡಿ.ರಾಜೇಗೌಡ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ–94/ಎ, 94/ಬಿ ಮತ್ತು 94/ಎ(4) ಅಡಿ ಹಾಗೂ ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರ ಉಪಬಂಧಗಳ ಅಡಿಯಲ್ಲಿ ಎಲ್ಲಾ ಪುರಸಭೆಗಳು (ಟಿಎಂಸಿ) ಮತ್ತು ಪಟ್ಟಣ ಪಂಚಾಯತ್‌ಗಳ 3 ಕಿ.ಮೀ ವ್ಯಾಪ್ತಿಯೊಳಗೆ ಯಾವುದೇ ಭೂಮಿಯನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ ಎಂದರು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 18 ಕಿ.ಮೀ. ಒಳಗೆ, ಬೆಳಗಾವಿ, ಕಲಬುರಗಿ, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಮೈಸೂರು ಮಹಾನಗರ ಪಾಲಿಕೆಗಳ 10 ಕಿ.ಮೀ ಹಾಗೂ ನಗರಸಭೆಗಳ 5 ಕಿ.ಮೀ. ವ್ಯಾಪ್ತಿಯೊಳಗೆ ಬರುವ ಜಮೀನಿನ ಬಗರ್‌ಹುಕುಂ ಸಾಗು ವಳಿ ಅರ್ಜಿಗಳನ್ನು ಮಂಜೂರು ಮಾಡಲು ಅವಕಾಶವಿಲ್ಲ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.03.2025 ಶನಿವಾರ, ಮಳೆ ನಕ್ಷತ್ರ: ಪೂರ್ವಭಾದ್ರಾ 04.03.2025ರಿಂದ 16.03.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸಂಯಾಟೀಕ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಡಾ. ಪುಟ್ಟರಾಜ ಗವಾಯಿ ಕ್ರೀಡಾಂಗಣದ ಯೋಗ ಸಭಾಂಗಣ, ಜೆ.ಪಿ.ನಗರ, ಬೆಳಗ್ಗೆ 9 ರಿಂದ.

■ **ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ :** ಮೈಸೂರು ನಗರ ಹಳೇ ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಅಶ್ವಾರೋಹಣ ನಂತರ ದೇವಿಪ್ರಣಯ ಕಲಹ ಸಂಧಾನ, ಸ್ಥಳ: ದೇವಸ್ಥಾನದ ಪ್ರಾಂಗಣ, ಹಳೇ ಸಂತೇಪೇಟೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಅರ್ಬನ್ ಹಾತ್, ಜವಳಿ ಸಚಿವಾಲಯದ ಅಭಿವೃದ್ಧಿ ಆಯುಕ್ತರು, ತ್ರಿಪುರ ಸರ್ಕಾರದ ಕೈಮಗ್ಗ ಕರಕುಶಲ ಮತ್ತು ರೇಷ್ಮೆ ನಿರ್ದೇಶನಾಲಯ :** ಗಾಂಧಿ ಶಿಲ್ಪ ಬಜಾರ್ ಮೇಳ, ಕರಕುಶಲ–ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರಸ್ತೆ, ಬೆಳಗ್ಗೆ 10 ರಿಂದ.

■ **ವ್ಯವಸ್ಥಾಪಕರು :** ಸಮಾನತೆಯ ಸಂದೇಶದೊಂದಿಗೆ ವಿಶ್ವದಾಖಲೆಗಾಗಿ ಚಿನ್ನದ ನಾಡು ಕೋಲಾರದಿಂದ ಸಾಂಸ್ಕೃತಿಕ ನಗರಿ ಮೈಸೂರಿಗೆ 12 ಗಂಟೆಗಳ ಅತಿವೇಗದ ಸೈಕ್ಲಿಂಗ್, ಜಿಡಬ್ಲ್ಯೂಆರ್ (ಗ್ಲೋಬಲ್ ವರ್ಲ್ಡ್ ರೆಕಾರ್ಡ್) ಸಂಸ್ಥೆ ಉಪಸ್ಥಿತಿಯಲ್ಲಿ. ಬರಮಾಡಿಕೊಳ್ಳುವವರು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ದಸಂಸ ಸಂಚಾಲಕ ಬೆಟ್ಟಯ್ಯ ಕೋಟೆ, ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ, ಸ್ಥಳ: ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಆವರಣ, ಪುರಭವನ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ರಿಸರ್ಚ್ ಫೌಂಡೇಷನ್ :** ಸಮಾಜ ವಿಜ್ಞಾನದಲ್ಲಿ ನವೀನ ಸಂಶೋಧನಾ ಪದ್ಧತಿಗಳು ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಜಿಯೋಜಿತ್ ಫೈನಾನ್ಸಿಯಲ್ ಸರ್ವೀಸಸ್ ಲಿಮಿಟೆಡ್ ಹಿರಿಯ ಉಪಾಧ್ಯಕ್ಷ ಗೌರಂಗ್ ಹೆಚ್. ಶಾ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ಬೌದ್ಧಿಕ ಆಸ್ತಿ ಹಕ್ಕುಗಳ ಕುರಿತು ಜಾಗೃತಿ ಕಾರ್ಯಕ್ರಮ, ಉಪಸ್ಥಿತರು : ಎಂಎಸ್‌ಎಂಇ ಜಂಟಿ ನಿರ್ದೇಶಕ ಶಶಿಕುಮಾರ್, ವಕೀಲ ಕಿರಣ್ ಬೆಟ್ಟದಪುರ, ಅಧ್ಯಕ್ಷತೆ : ಎನ್‌ಐಇ ಪ್ರಿನ್ಸಿಪಾಲ್ ಡಾ. ರೋಹಿಣಿ ನಾಗಪದ್ಮ, ಸ್ಥಳ: ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಸಭಾಂಗಣ, ಎನ್‌ಐಇ ಆವರಣ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ವಾಣಿಜ್ಯ ತೆರಿಗೆ ಜಂಟಿ ಆಯುಕ್ತರಾದ ಶ್ರೀಮತಿ ಎಸ್. ತೇಜಸ್ವಿನಿ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್, ಮುಖ್ಯ ಅತಿಥಿಗಳು : ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು, ಸ್ಥಳ: ಮಾಯಾಸ್ ಕಿಂಗ್ಸ್ ಕೋರ್ಟ್ ಹೋಟೆಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ :** ಸರಣಿ ಉಪನ್ಯಾಸ ಮಾಲಿಕೆ, ಡಾ. ಎಸ್. ಶಿವರಾಜಪ್ಪ ಅವರಿಂದ ಮಾದಾರ ಚನ್ನಯ್ಯನವರ ವಚನಗಳಲ್ಲಿಯ ಚಿಂತನೆಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ಸೌಮ್ಯ ಈರಪ್ಪ ಕೆ., ಸಮಾರೋಪ ನುಡಿ : ಪ್ರೊ. ಎನ್.ಕೆ. ಲೋಲಾಕ್ಷಿ, ಸ್ಥಳ: ಶೇಷಾದ್ರಿಪುರಂ ಪದವಿ ಕಾಲೇಜು, ಬಸವ ಅಧ್ಯಯನ ಕೇಂದ್ರ, ಬೆಳಗ್ಗೆ 10.30ಕ್ಕೆ.

■ **ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಮೈಸೂರು ಜಿಲ್ಲಾ ಸಮಿತಿ :** 117ನೇ ಅಂತರ ರಾಷ್ಟ್ರೀಯ ದುಡಿಯುವ ಮಹಿಳಾ ದಿನಾಚರಣೆ, ಉದ್ಘಾಟನೆ : ಹಿರಿಯ ಮಹಿಳಾ ಪರ ಹೋರಾಟಗಾರ್ತಿ ಇ. ರತಿರಾವ್, ಮುಖ್ಯ ಅತಿಥಿಗಳು : ಸಿಐಟಿಯು ರಾಜ್ಯ ಕಾರ್ಯದರ್ಶಿ ಹೆಚ್.ಎಸ್. ಸುನಂದಾ, ಅಧ್ಯಕ್ಷತೆ : ಸಿಐಟಿಯು ಮೈಸೂರು ಜಿಲ್ಲಾಧ್ಯಕ್ಷ ಜಿ. ಜಯರಾಂ, ಸ್ಥಳ: ಜಿಲ್ಲಾಧಿಕಾರಿ ಕಚೇರಿ ಬಳಿ, ಸಿದ್ದಾರ್ಥನಗರ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಗಾರ್ಡ್ ಸಂಸ್ಥೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ :** ಸಮುದಾಯ ಸಂಗಮ ಕಾರ್ಯಕ್ರಮ, ವಾರ್ಷಿಕೋತ್ಸವ ಸಮಾರಂಭ, ಉದ್ಘಾಟನೆ: ಉಪನಿರ್ದೇಶಕರಾದ ಡಾ. ಬಿ. ಮಲ್ಲಿಕಾ, ಅಧ್ಯಕ್ಷತೆ : ಗಾರ್ಡ್ ಸಂಸ್ಥೆ ಅಧ್ಯಕ್ಷ ಡಾ. ಎಸ್. ದಿವಾಕರ್, ಮುಖ್ಯ ಅತಿಥಿಗಳು : ಜಿಲ್ಲಾ ಏಡ್ಸ್ ನಿಯಂತ್ರಣ ಅಧಿಕಾರಿ ಡಾ. ಜಯಂತ್, ಪ್ರಾಧ್ಯಾಪಕರಾದ ಡಾ. ಅಮೃತಕುಮಾರಿ, ಸಹ ಪ್ರಾಧ್ಯಾಪಕರಾದ ಡಾ. ಎಂ. ಶ್ವೇತ, ಸನ್ಮಾನ : ಮಕ್ಕಳ ಆರೋಗ್ಯ ಅಧಿಕಾರಿ ಡಾ. ಮೊಹಮ್ಮದ್ ಸಿರಾಜ್ ಅಹಮದ್, ಸ್ಥಳ: ವೈದ್ಯರ ಭವನ ಸಭಾಂಗಣ, ನಾಗಮ್ಮ ಆಸ್ಪತ್ರೆ ಪಕ್ಕ, ಬೆಳಗ್ಗೆ 11ಕ್ಕೆ.

■ **ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸಮೂಹ, ಸುಯೋಗ್ ನರ್ಸಿಂಗ್ ಕಾಲೇಜು ಮತ್ತು ಸುಯೋಗ್ ಇನ್‌ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್ :** ಮೊದಲನೇ ಬ್ಯಾಚಿನ ವಿದ್ಯಾರ್ಥಿಗಳ ಘಟಿಕೋತ್ಸವ ಸಮಾರಂಭ, ಘಟಿಕೋತ್ಸವ ಭಾಷಣ : ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ನೂತನ ಕುಲಪತಿ ಡಾ. ಭಗವಾನ್, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಭಿನಂದನಾ ಭಾಷಣ : ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಅಧ್ಯಕ್ಷತೆ : ಕರಾಮುವಿವಿ ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಮುಖ್ಯ ಅತಿಥಿಗಳು : ಬೆಂಗಳೂರಿನ ಕಿಮ್ಸ್ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಡಾ. ಶ್ರೀಧರಮೂರ್ತಿ, ರಾಜೀವ್ ಗಾಂಧಿ ವಿವಿ ಸೆನೆಟ್ ಸದಸ್ಯೆ ಡಾ. ಸಿ. ಯಶೋಧ, ಸ್ಥಳ: ಕರಾಮುವಿವಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ಖ್ಯಾತ ವಿಜ್ಞಾನ ಲೇಖಕ ಕೊಳ್ಳೇಗಾಲ ಶರ್ಮ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 4.30 ರಿಂದ.

■ **ರಂಗಾಯಣ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು :** ಕರ್ನಾಟಕ ನಾಟಕ ಅಕಾಡೆಮಿಯ ಪುಸ್ತಕ ಬಹುಮಾನ ಪ್ರದಾನ ಸಮಾರಂಭ : ಹಿರಿಯ ಸಾಹಿತಿ ಶ್ರೀಮತಿ ಚ. ಸರ್ವಮಂಗಳ, ಮುಖ್ಯ ಅತಿಥಿಗಳು : ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಡಾ. ನಾಗೇಶ್ ಬೆಟ್ಟಕೋಟೆ, ಅಧ್ಯಕ್ಷತೆ : ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತರು : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, 2021ನೇ ಸಾಲಿನ ಪುಸ್ತಕ ಬಹುಮಾನ ಪುರಸ್ಕೃತರು : ಡಾ. ಬಸವರಾಜ ಸಬರದ, 2022ನೇ ಸಾಲಿನ ಪುರಸ್ಕೃತರು ಡಾ. ಟಿ.ವಿ. ವೆಂಕಟೇಶಮೂರ್ತಿ, 2023ನೇ ಸಾಲಿನ ಪುರಸ್ಕೃತರು ಶ್ರೀಮತಿ ರಾಮೇಶ್ವರಿ ವರ್ಮಾ, ಸಮತೆಂತೋ ರಂಗ ತಂಡದಿಂದ ಅಯಾನ್ ಶಾಂತಿ ಕುಟೀರ ನಾಟಕ ಪ್ರದರ್ಶನ, ಸ್ಥಳ: ರಂಗಾಯಣದ ಭೂಮಿಗೀತ, ಸಂಜೆ 5ಕ್ಕೆ.

■ **ಶ್ರೀಮತಿ ಪೂರ್ಣಿಮಾ ಎಂ.ಎನ್. ಮತ್ತು ಜಿ.ಎಂ. ರಾಜಶೇಖರ್, ನಾದ ವಿದ್ಯಾಲಯ ಅಕಾಡೆಮಿ ಆಫ್ ಮ್ಯೂಸಿಕ್ ಅಂಡ್ ಡ್ಯಾನ್ಸ್ :** ಗುರು ವಿದುಷಿ ಶ್ರೀಮತಿ ಮಿತ್ರಾ ನವೀನ್ ಅವರ ಶಿಷ್ಯ ಎಂ.ಆರ್. ಧನ್ಯಾ ಅವರ ಭರತನಾಟ್ಯ ರಂಗ ಪ್ರವೇಶ, ಮುಖ್ಯ ಅತಿಥಿಗಳು : ಬೇಬಿ ಮಠದ ಡಾ. ಶ್ರೀ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ವಾಗ್ಮಿ ಮತ್ತು ಸಂಸ್ಕೃತಿ ಚಿಂತಕ ಪ್ರೊ ಕೃಷ್ಣೇಗೌಡ, ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಸನ್ಮಾನ : ಗುರು ವಿದುಷಿ ಮಿತ್ರ ನವೀನ್, ಕಾರ್ಯಕ್ರಮದ ನಿರ್ದೇಶನ, ನೃತ್ಯ ಸಂಯೋಜನೆ, ನಟ್ಟುವಾಂಗ ಗುರು ವಿದುಷಿ ಶ್ರೀಮತಿ ಮಿತ್ರಾ ನವೀನ್, ವಿದ್ವಾನ್ ಎಂ.ಎಸ್. ನವೀನ್–ಗಾಯನ, ವಿದ್ವಾನ್ ವಿವೇಕ್ ಕೃಷ್ಣ–ಕೊಳಲು, ಮೃದಂಗದಲ್ಲಿ ವಿದ್ವಾನ್ ಜಿ.ಎಸ್. ನಾಗರಾಜ್– ಮೃದಂಗ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5.30ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವೇಣು ವಿದ್ವಾನ್ ಸಂಸ್ಮರಣಾ ಕಾರ್ಯಕ್ರಮ, ವಿದುಷಿ ಐಶ್ವರ್ಯ ಮಣಿಕರ್ಣಿಕೆ ಅವರಿಂದ ವೀಣಾ ವಾದನ, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಧೀಮಂತ ಭಟ್ಟ–ಘಟಂ, ಸ್ಥಳ: ಶ್ರೀ ವಿದ್ಯಾಭಾರತಿ ಪ್ರಾರ್ಥನಾ ಮಂದಿರ, ಶ್ರೀ ಚಂದ್ರಮೌಳೀಶ್ವರ ದೇವಸ್ಥಾನ, ವಿ.ವಿ. ಮೊಹಲ್ಲಾ, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಸರ್ವೀಸ್ ಅಂಡ್ ಸಾಲ್ವೇಷನ್–ಲೆಟರ್ಸ್ ಆಫ್ ಸ್ವಾಮಿ ವಿವೇಕಾನಂದ ಕುರಿತು ಇಂಗ್ಲೀಷ್‌ನಲ್ಲಿ ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಭಾರತೀಯ ವಿದ್ಯಾಭವನ, ಮೈಸೂರು ಕೇಂದ್ರ :** ಬೆಂಗಳೂರಿನ ಭಾರತ ನೃತ್ಯ ಸಂಗೀತ ಅಕಾಡೆಮಿಯಿಂದ ಭರತನಾಟ್ಯ ಕಾರ್ಯಕ್ರಮ, ಗುರು ಡಾ. ಶುಭರಾಣಿ ಬೋಳಾರ್ ಅವರಿಂದ ಭರತನಾಟ್ಯ ಕಾರ್ಯಕ್ರಮ, ಶ್ರೀಮತಿ ಕವಿತಾ ಮತ್ತು ಶ್ರೀಮತಿ ಅಕ್ಷಯ–ಹಾಡುಗಾರಿಕೆ, ವಿದ್ವಾನ್ ಎಂ. ಕಿಶೋರ್–ಮೃದಂಗ, ವಿದ್ವಾನ್ ಕೆ.ಎಸ್. ಗಣೇಶ್–ಕೊಳಲು, ಸ್ಥಳ: ತಾತಾಚಾರಿ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 6 ರಿಂದ.

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಸುಸ್ಥಿರ ಅಭಿವೃದ್ಧಿಗಾಗಿ ವಿಶ್ವ ಇಂಜಿನಿಯರಿಂಗ್ ದಿನ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಸದಾಶಿವೇಗೌಡ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ರಂಗವಲ್ಲಿ :** ರಂಗವಲ್ಲಿ ಕಲಾವಿದರಿಂದ ಪ್ರಮೇಶಿ ಪ್ರೇಮ ಪ್ರಸಂಗ ನಗೆ ನಾಟಕ ಪ್ರದರ್ಶನ, ರಚನೆ: ಶ್ರೀನಿವಾಸ ಪ್ರಭು, ನಿರ್ದೇಶನ : ರವಿಪ್ರಸಾದ್, ಸ್ಥಳ: ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಅಂಬಯ್ಯನುಲಿ, ಜಯಂತಿ. ವಿ. ಭಟ್, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ: ಅಬ್ದುಲ್ ರಶೀದ್, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಟಿ. ನರಸೀಪುರ ತಾಲ್ಲೂಕು ಬನ್ನೂರು ಹೋಬಳಿ ಮಾದಗಳ್ಳಿ ಗ್ರಾಮದ ರಾಜಮ್ಮ ಮತ್ತು ಸಂಗಡಿಗರಿಂದ ಭೈರವೇಶ್ವರನ ಹಾಡು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ– ಮೈಸೂರಿನ ಕುಕ್ಕರಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ–ಮಹಾಕಲ್ಯಾಣ, ರಚನೆ–ಎಸ್.ವಿ.ಕೃಷ್ಣ ಶರ್ಮ, ನಿರ್ಮಾಣ–ಉಮೇಶ್. ಎಸ್. ಎಸ್., 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕರು, ಚಿತ್ರಸಾಹಿತಿಗಳಾದ ಸಿ.ವಿ. ಶಿವಶಂಕರ್ ಅವರೊಂದಿಗೆ ಎಂ. ಶಂಕರಪ್ಪ ಅವರು ನಡೆಸಿದ್ದ ಸಂವಾದದ ಮೊದಲ ಭಾಗ, 6.50 ಕೃಷಿರಂಗ : ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ರೈತರ ಸಹಭಾಗಿತ್ವದಲ್ಲಿ ಬೀಜೋತ್ಪಾದನೆ ಕುರಿತು ಸಂವಾದ ಭಾಗವಹಿಸುತ್ತಾರೆ–ನಂಜನಗೂಡು ತಾಲ್ಲೂಕು ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಹೆಚ್.ವಿ. ದಿವ್ಯಾ ಮತ್ತು ಮಳವಳ್ಳಿ ತಾಲೂಕು ಬಿ.ಜಿ. ಪುರ ಹೋಬಳಿ ಪೂರಿಗಾಲಿ ಗ್ರಾಮದ ಹೆಚ್. ಮಹದೇವಸ್ವಾಮಿ, ಪ್ರಸ್ತುತಿ:ಎನ್. ಕೇಶವಮೂರ್ತಿ, 8.00 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ–ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆಯ ಸಂಬಂಧವಾಗಿ ಗ್ರಾಹಕರ ಸಂರಕ್ಷಣೆಯಲ್ಲಿ ಯುವಜನರ ಪಾತ್ರ ಕುರಿತು ಮಾತುಕತೆ. ಭಾಗವಹಿಸುತ್ತಾರೆ–ಮಂಡ್ಯ ಜಿಲ್ಲೆ ಚಿನಕುರಳಿಯ ಎಸ್.ಟಿ.ಜಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ಆನಂದ, ರೂಫಾನ್ ಫಾಜಿಲ್, ಸೋನು. ಬಿ. ಕೆ., ಸಹನಾ. ಎಲ್.ಟಿ, ನಡೆಸಿಕೊಡುತ್ತಾರೆ–ಶ್ರಾವಣಿ ಗಿರೀಶ್, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಯೋಗ ಕೀರ್ತನಾ – ಹಾಡುಗಾರಿಕೆ

ನಗರ ಸ್ಥಳೀಯ ಸಂಸ್ಥೆಗಳಿಗೆ 17 ಮುಡಾ ಬಡಾವಣೆಗಳ 38,000 ಖಾತೆ ಹಸ್ತಾಂತರ



ವಿವಿಧ 17 ವಸತಿ ಬಡಾವಣೆಗಳ ಖಾತೆಗಳನ್ನು ಒಪ್ಪಿಸುತ್ತಿರುವುದು

ಮೈಸೂರು, ಮಾ. 14(ಆರ್‌ಕೆ)– ನಗರ ಸ್ಥಳೀಯ ಸಂಸ್ಥೆಗಳಿಗೆ ಮುಡಾದಿಂದ ವಸತಿ ಬಡಾವಣೆಗಳು ಮತ್ತು ಆಸ್ತಿಗಳ ಖಾತಾ ಪತ್ರ ಹಸ್ತಾಂತರ ಪ್ರಕ್ರಿಯೆ ಮುಂದುವರಿದಿದೆ.

ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಮುಡಾ ವ್ಯಾಪ್ತಿಯ 17 ಬಡಾವಣೆಗಳ 38,000 ಖಾತೆ ಮತ್ತು ಸಂಬಂಧಿಸಿದ ದಾಖಲೆ ಪತ್ರಗಳನ್ನು ಗುರುವಾರ ಪ್ರಾಧಿಕಾರದ ಕಾರ್ಯದರ್ಶಿ ಪ್ರಸನ್ನಕುಮಾರ್ ಹೂಟಗಳ್ಳಿ ನಗರಸಭೆ ಅಧಿಕಾರಿಗಳಿಗೆ ಹಸ್ತಾಂತರಿಸಿದರು.

ಮುಡಾ ಅಭಿವೃದ್ಧಿಪಡಿಸಿದ ವಿಜಯ ನಗರ 4ನೇ ಹಂತ, ಪ್ರಾಧಿಕಾರದಿಂದ ಅನುಮೋದನೆಗೊಂಡ ಸಾಧನಾ ಲೇಔಟ್, ವಿನಾಯಕ ಬಡಾವಣೆ, ಎಂಎಂಜಿ ಲೇಔಟ್, ಪಿಎಸ್‌ಕೆ ಸೆರೆನಿಟಿ ಸೇರಿದಂತೆ ವಿವಿಧ 17 ವಸತಿ ಬಡಾ ವಣೆಗಳ ಖಾತೆಗಳನ್ನು ಹೂಟಗಳ್ಳಿ ನಗರಸಭೆ ಕಂದಾಯ ಅಧಿಕಾರಿ ರಾಮಸ್ವಾಮಿ, ರೆವಿನ್ಯೂ ಇನ್‌ಸ್ಪೆಕ್ಟರ್ ಪ್ರವೀಣ್ ಅವರಿಗೆ ಒಪ್ಪಿಸಲಾಯಿತು.

ಇನ್ನು ಮುಂದೆ ನಿವೇಶನಗಳ ಖಾತೆ, ಕಂದಾಯ, ತೆರಿಗೆ ಪಾವತಿ, ವರ್ಗಾವಣೆ ಸೇರಿದಂತೆ ಎಲ್ಲಾ ಪ್ರಕ್ರಿಯೆಗಳನ್ನು ಆಯಾ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳೇ ನಡೆಸಬೇಕು ಎಂದು ಮುಡಾ ಕಾರ್ಯದರ್ಶಿ ಪ್ರಸನ್ನಕುಮಾರ್ ತಿಳಿಸಿದ್ದಾರೆ.

ಈ ಹಿಂದೆ 2024ರ ಡಿಸೆಂಬರ್ ಮಾಹೆಯಲ್ಲಿ ಮೈಸೂರು, ಸುತ್ತಮುತ್ತಲಿನ 900 ವಸತಿ ಬಡಾವಣೆಗಳನ್ನು ಮೈಸೂರು ಮಹಾನಗರ ಪಾಲಿಕೆ, ಹೂಟಗಳ್ಳಿ, ಬೋಗಾದಿ ನಗರಸಭೆ, ಶ್ರೀರಾಂಪುರ, ಮಹದೇವಪುರ, ಮಹದೇವಪುರ ಪಟ್ಟಣ ಪಂಚಾಯ್ತಿಗಳಿಗೆ ಮುಡಾ ಅಧಿಕಾರಿಗಳು ಹಸ್ತಾಂತರಿಸಿದ್ದರು. ನಕ್ಷೆ ಅನುಮೋದನೆ ಹೊರತುಪಡಿಸಿ ಉಳಿದ ಯಾವುದೇ ಸೇವೆಗಳನ್ನು ಮುಡಾ ನೀಡುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ಇಂದು 'ಮಹಾನಗರ ಮೈಸೂರು: ಸಮಸ್ಯೆಗಳು ಮತ್ತು ಸವಾಲುಗಳು' ಕುರಿತ ಕಾರ್ಯಾಗಾರ

ಮೈಸೂರು, ಮಾ.14– ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್(ಎಸ್‌ಪಿಎ) ವಿಭಾಗ ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೌನ್ ಪ್ಲಾನರ್ಸ್(ಐಟಿಪಿಐ) ಸಹಯೋಗದಲ್ಲಿ ನಾಳೆ(ಮಾ.15) ಬೆಳಗ್ಗೆ 10.30ಕ್ಕೆ ಮಾನಸಗಂಗೋತ್ರಿಯ ಎಸ್‌ಪಿಎ ವಿಭಾಗದ ಪ್ರೊ.ರಂಗಪ್ಪ ಸಭಾಂಗಣದಲ್ಲಿ **'ಮಹಾನಗರ ಮೈಸೂರು: ಸಮಸ್ಯೆಗಳು ಮತ್ತು ಸವಾಲುಗಳು'** ಕುರಿತು ಕಾರ್ಯಾಗಾರ ಆಯೋಜಿಸಲಾಗಿದೆ.

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಕಾರ್ಯಾಗಾರವನ್ನು ಉದ್ಘಾಟಿಸಲಿದ್ದು, ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಐಟಿಪಿಐನ ಕರ್ನಾಟಕ ಪ್ರಾದೇಶಿಕ ಅಧ್ಯಕ್ಷರೂ ಆದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕ ಡಾ. ಎಲ್.ಶಶಿಕುಮಾರ್, ನವದೆಹಲಿ ಐಟಿಪಿಐ ಕೌನ್ಸಿಲ್ ಸದಸ್ಯ ಎಸ್.ಬಿ.ಹೊನ್ನೂರ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಎ.ಎನ್.ರಘುನಂದನ್ ಮತ್ತಿತರರು ಭಾಗವಹಿಸಲಿದ್ದಾರೆ.

'ಮೈಸೂರು: ನಗರ ಯೋಜನೆ ಮತ್ತು ಆಡಳಿತ' ಕುರಿತ ಸಮಾಲೋಚನಾ ಮಂಡಳಿ ಚರ್ಚೆಯಲ್ಲಿ ನಗರ ಯೋಜಕರು, ಸ್ಥಳೀಯ ಆಡಳಿತದ ಅಧಿಕಾರಿಗಳು ಹಾಗೂ ತಜ್ಞರು ಪಾಲಿಕೆ ಆಡಳಿತ ವ್ಯವಸ್ಥೆ, ಆರ್ಥಿಕತೆ ಹಾಗೂ ಹೊಸ ಯೋಜನೆಗಳ ಕುರಿತು ಚರ್ಚಿಸಲಿದ್ದಾರೆ ಎಂದು ಎಸ್‌ಪಿಎ ನಿರ್ದೇಶಕ ಪ್ರೊ.ಪ್ರಮೋದ್ ಎಂ. ಗವಾರಿ, ಐಟಿಪಿಐ ಮೈಸೂರು ಪ್ರಾದೇಶಿಕ ಕೇಂದ್ರದ ಆಯೋಜಕ ಪ್ರೊ.ಬಿ.ಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮುಂಡಿಬೆಟ್ಟ ಅರಣ್ಯ ಸುರಕ್ಷತೆಗೆ ಡ್ರೋನ್ ಕಣ್ಗಾವಲು

- ಲಲಿತಾದ್ರಿಪುರ, ಬಂಡೀಪಾಳ್ಯ ಭಾಗದಲ್ಲಿ ಆಗಾಗ ಹಾರಾಡುತ್ತಿವೆ ಡ್ರೋನ್‌ಗಳು
- ಬೆಟ್ಟದಂಚಿನ ಪ್ರದೇಶದಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ಚಲನವಲನದ ಮೇಲೆ ನಿಗಾ

ಮೈಸೂರು, ಮಾ. 14(ಎಂಟಿವೈ)– ಕಿಡಿಗೇಡಿಗಳಿಂದ ಅರಣ್ಯ ಸಂಪತ್ತು ನಾಶವಾಗುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಡ್ರೋನ್‌ಗಳ ಗಸ್ತು ಆರಂಭಿಸಿದೆ. ಚಾಮುಂಡಿಬೆಟ್ಟ ಅರಣ್ಯ ಪ್ರದೇಶದಲ್ಲಿ ಈಗ ಡ್ರೋನ್ ಕಣ್ಗಾವಲಿದೆ. ಅರಣ್ಯದಂಚಿನ ಪ್ರದೇಶದಲ್ಲಿನ ಜನರ ಚಲನವಲನಗಳ ಮೇಲೂ ಅವು ನಿಗಾ ಇಟ್ಟಿವೆ.

ಚಾಮುಂಡಿಬೆಟ್ಟಕ್ಕೆ ಬರುವ ಪ್ರವಾಸಿಗರು ಹಾಗೂ ಭಕ್ತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಈ ನಡುವೆ ಬೆಟ್ಟದ ಅರಣ್ಯ ಪ್ರದೇಶಕ್ಕೆ ಕಿಡಿಗೇಡಿಗಳಿಂದ ಅಗ್ನಿ ಆತಂಕವೂ ಹೆಚ್ಚಾಗುತ್ತಿದೆ. ಬೆರಳೆಣಿಕೆಯಷ್ಟು ಸಂಖ್ಯೆಯ ಅರಣ್ಯ ಸಿಬ್ಬಂದಿ ಅರಣ್ಯ ಸಂಪತ್ತಿನ ಸಂರಕ್ಷಣೆಗೆ ಶ್ರಮಿಸುತ್ತಿದ್ದಾರೆ. ಆದರೂ ದುಷ್ಕರ್ಮಿಗಳು ಕಳೆದ ತಿಂಗಳು ಲಲಿತಾದ್ರಿಪುರ ಹಾಗೂ ಉತ್ತನಹಳ್ಳಿ ಭಾಗದಲ್ಲಿ ಬೆಂಕಿ ಹಾಕಿದ್ದರಿಂದ ಅಪಾರ ಪ್ರಮಾಣದ ಅರಣ್ಯ ಸಂಪತ್ತು ನಾಶವಾಗಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿಯ ಗಸ್ತಿನೊಂದಿಗೆ ಡ್ರೋನ್ ಕಣ್ಗಾವಲಾಕಿ ಬೆಟ್ಟದ ಅರಣ್ಯ ಪ್ರದೇಶಕ್ಕೆ ಬೆಂಕಿ ಕಿಡಿ ಹಚ್ಚುವವರ ಪತ್ತೆಗೆ ಅರಣ್ಯ ಇಲಾಖೆ ಮುಂದಾಗಿದೆ.

ತರಬೇತಿ ಪಡೆದ ಸಿಬ್ಬಂದಿಗಳಿಂದ ಡ್ರೋನ್ ಕಾರ್ಯಾಚರಣೆ: ಫೆ.21ರಂದು ಬಿದ್ದ ಬೆಂಕಿಯಿಂದಾಗಿ ಸುಮಾರು 30–35 ಎಕರೆ ಅರಣ್ಯ ಪ್ರದೇಶ ಭಸ್ಮವಾಗಿತ್ತು ಬೆಂಕಿಯಿಂದಾಗಿ ಯಾವುದೇ ವನ್ಯಜೀವಿ ಹಾಗೂ ಪಕ್ಷಿ ಸಂಕುಲಕ್ಕೆ ಜೀವ ಹಾನಿಯಾಗಿಲ್ಲ. ಇದು ಪುನರಾವರ್ತನೆಯಾಗದಂತೆ ಅರಣ್ಯ ಇಲಾಖೆ ಡ್ರೋನ್ ಮೊರೆ ಹೋಗಿದೆ. ಈಗಾಗಲೇ ಚಿರತೆ ಕಾರ್ಯಪಡೆ(ಇಟಿಎಫ್) ಬಳಿ ಇರುವ ಡ್ರೋನ್ ಬಳಸಿ ಬೆಟ್ಟದ ಅರಣ್ಯದ ಅಂಚಿನ



ವಾಚ್ ಟವರ್‌ನಲ್ಲಿ ಕಣ್ಗಾವಲು

ಪ್ರದೇಶದಲ್ಲಿ ಪರಿಶೀಲಿಸಲಾಗುತ್ತಿದೆ. ಪ್ರಮುಖವಾಗಿ ಲಲಿತಾದ್ರಿಪುರ, ಉತ್ತನಹಳ್ಳಿ ಹಾಗೂ ಬಂಡೀಪಾಳ್ಯ ಭಾಗದ ಅರಣ್ಯ ಪ್ರದೇಶದಲ್ಲಿಯೇ ಬೆಂಕಿ ಬೀಳುವ ಆತಂಕ ಇರುವುದರಿಂದ ಅಲ್ಲಿ ಡ್ರೋನ್ ಕಣ್ಗಾವಲು ಹಾಕಲಾಗಿದೆ.

ಸುಧಾರಿತ ತಂತ್ರಜ್ಞಾನದ, ಹೆಚ್ಚು ತೂಕವಿಲ್ಲದ ಡ್ರೋನ್ ಅನ್ನು ಬಳಸಲಾಗುತ್ತಿದ್ದು, ಬೆಟ್ಟದ ಅರಣ್ಯ ಪ್ರದೇಶಕ್ಕೆ ಅಕ್ರಮವಾಗಿ ಪ್ರವೇಶಿಸುವವರ ಚಲನವಲನ ಸೆರೆ ಹಿಡಿಯಲಾಗುತ್ತಿದೆ. ಒಮ್ಮೆಗೆ ಸತತ 30 ನಿಮಿಷ ಬೆಟ್ಟದ ಸುತ್ತಲೂ ಹಾರಾಡುವ ಡ್ರೋನ್ ಜಿಪಿಎಸ್ ಲೊಕೇಷನ್ ಸಹಿತ ಬೆಟ್ಟದಂಚಿನ ಪ್ರದೇಶದಲ್ಲಿ ಅನುಮಾನಾಸ್ಪದವಾಗಿ ಓಡಾಡುವವರ ಚಿತ್ರಣವನ್ನು ಅರಣ್ಯ ಇಲಾಖೆಗೆ ಒದಗಿಸುತ್ತಿದೆ. ಬೆಟ್ಟದಿಂದ ಉತ್ತನಹಳ್ಳಿಗೆ ಹೋಗುವ ರಸ್ತೆಯಿಂದ ಡ್ರೋನ್ ಹಾರಾಟ ಆರಂಭಿಸಿ ನಿಗದಿತ ಪ್ರದೇಶದ ಮೇಲೆ ನಿಗಾ ಇರಿಸಲಾಗುತ್ತಿದೆ.

ಬೆದರಿದ ದನಗಾಹಿಗಳು: ಬೆಟ್ಟದಂಚಿನ ಪಾಳು ಭೂಮಿಯಲ್ಲಿ ಜಾನುವಾರು ಮೇಯಿಸುತ್ತಿದ್ದ ಅನೇಕರು ಡ್ರೋನ್ ಹಾರಾಟದಿಂದ ಬೆಚ್ಚಿ ಬಿದ್ದಿದ್ದಾರೆ. ಅಲ್ಲದೆ, ಬೆಟ್ಟದ ತಪ್ಪಲಲ್ಲಿ ಇಸ್ಪೀಟ್ ಆಡುವವರು ಬೀಡಿ, ಸಿಗರೇಟ್ ಸೇದಿ ಕಿಡಿ ಕೆಡಿಸದೆ ಎಸೆಯುವವರಿಗೂ ಡ್ರೋನ್ ಭೀತಿ ಎದುರಾಗಿದೆ. ಉದ್ದೇಶಪೂರ್ವಕವಾಗಿ ಬೆಟ್ಟದ ಅರಣ್ಯಕ್ಕೆ ಬೆಂಕಿ ಕಿಡಿ ಇಡುವವರಿಗೆ ತಕ್ಕಶಾಸ್ತಿ ಮಾಡಲು ಅರಣ್ಯ ಇಲಾಖೆ ಮುಂದಾಗಿರುವುದರಿಂದ ಕಿಡಿಗೇಡಿಗಳು ಬೆಟ್ಟದಂಚಿಗೆ ಕಾಲಿಡಲು ಹಿಂದೇಟು ಹಾಕುವಂತಾಗಿದೆ.

ಮೂರು ಬೀಟ್: ಚಾಮುಂಡಿಬೆಟ್ಟದ 1516 ಎಕರೆ ಅರಣ್ಯ ಪ್ರದೇಶದಲ್ಲಿ 3 ಬೀಟ್‌ಗಳಲ್ಲಿ ಡಿಸಿಎಫ್ ಡಾ.ಕೆ.ಎನ್.ಬಸವರಾಜು ನೇತೃತ್ವದಲ್ಲಿ ಎಸಿಎಫ್ ರವೀಂದ್ರ, ಆರ್‌ಎಫ್‌ಓ ಶ್ರೀನಿವಾಸ್, ಡಿಆರ್‌ಎಫ್ ಸತೀಶ್ ನೇತೃತ್ವದಲ್ಲಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಜ್ವಾಲಾಮುಖಿ, ಕೊನನೆರೆ, ಕುಂಟಿಕಲ್ ಗುಡ್ಡ ಪ್ರದೇಶದಲ್ಲಿ ಇರುವ ವಾಚ್ ಟವರ್‌ನಲ್ಲಿ ಅರಣ್ಯ ವೀಕ್ಷಣಾ ಕಾರ್ಯದಲ್ಲಿ ತೊಡಗಿರುತ್ತಾರೆ. ಅಲ್ಲದೆ, ಮೂರು ಬೀಟ್‌ಗಳ ಸಿಬ್ಬಂದಿ ಗಸ್ತಿನ ಕಾರ್ಯಾಚರಣೆಯಲ್ಲಿ ತೊಡಗಿರುತ್ತಾರೆ. ಈಗಾಗಲೇ ಚಾಮುಂಡಿಬೆಟ್ಟ ಅರಣ್ಯ ಪ್ರದೇಶದಲ್ಲಿ ಹೆಚ್ಚುವರಿಯಾಗಿ 5 ಕಿ.ಮಿ ಸೇರಿದಂತೆ 70 ಕಿ.ಮಿ ಬೆಂಕಿ ತಡೆ ರೇಖೆ ನಿರ್ಮಿಸಲಾಗಿದೆ. ಬೆಟ್ಟದ ಅರಣ್ಯ ಪ್ರದೇಶ 17 ಕಿ.ಮಿ ಸುತ್ತಳತೆಯ ವಿಸ್ತೀರ್ಣ ಹೊಂದಿದ್ದು, ಕೆಲವೆಡೆ ಸ್ಥಳೀಯರು ಬೆಟ್ಟ ಪ್ರದೇಶಕ್ಕೆ ನುಸುಳಲು, ಜಾನುವಾರು ಮೇಯಿಸಲು ಕಾಲುದಾರಿ ಮಾಡಿಕೊಂಡಿದ್ದಾರೆ ಈ ಭಾಗದಿಂದಲೇ ಅರಣ್ಯ ಇಲಾಖೆಗೆ ಆತಂಕ ಎದುರಾಗಿದೆ.



ಚಾಮುಂಡಿಬೆಟ್ಟದ ಅರಣ್ಯ ಪ್ರದೇಶದ ಮೇಲೆ ಡ್ರೋನ್ ಕಾರ್ಯಾಚರಣೆ.

ಡ್ರೋನ್‌ನಿಂದ ಕಣ್ಗಾವಲು

ಚಾಮುಂಡಿಬೆಟ್ಟದ ಅರಣ್ಯ ಪ್ರದೇಶದಲ್ಲಿ ಬೆಂಕಿ ಅವಘಡ ಮರುಕಳಿಸದಂತೆ ಕಟ್ಟೆಚ್ಚರ ವಹಿಸಲು ಡ್ರೋನ್ ಕಣ್ಗಾವಲು ಹಾಕಲಾಗಿದೆ. ವಾಚ್ ಟವರ್‌ನಲ್ಲಿ ವೀಕ್ಷಣೆ ಹಾಗೂ ಗಸ್ತು ಕಾರ್ಯಾಚರಣೆಯೊಂದಿಗೆ ಡ್ರೋನ್ ಕಣ್ಗಾವಲು ಸಹಕಾರಿಯಾಗಿದೆ. ಇದರಿಂದ ಬೆಟ್ಟದ ಅರಣ್ಯ ಪ್ರದೇಶ ಪ್ರವೇಶಿಸುವವರ ಪತ್ತೆಹಚ್ಚಬಹುದಾಗಿದೆ. - **ಡಾ.ಕೆ.ಎನ್.ಬಸವರಾಜ್,** ಡಿಸಿಎಫ್

ಬೈಕ್ ಡಿಕ್ಕಿ: ವಿಧಾನಸಭಾ ಉಪಾಧ್ಯಕ್ಷ ರುದ್ರಪ್ಪ ಲಮಾಣಿಗೆ ಗಾಯ



ಚಿತ್ರದುರ್ಗ, ಮಾ14– ಕರ್ನಾಟಕ ವಿಧಾನಸಭಾ ಉಪಾಧ್ಯಕ್ಷ ರುದ್ರಪ್ಪ ಲಮಾಣಿ ಅಧಿವೇಶನ ಮುಗಿಸಿ ಸ್ವಗ್ರಾಮದತ್ತ ಕಾರಿನಲ್ಲಿ ಹೋಗುವಾಗ, ಮೂತ್ರ ವಿಸರ್ಜನೆಗೆಂದು ಕಾರಿನಿಂದ ಇಳಿಯುತ್ತಿದ್ದ ವೇಳೆ ಬೈಕ್ ಸವಾರನೊಬ್ಬ ಅವರಿಗೆ ಡಿಕ್ಕಿ ಹೊಡೆದಿದ್ದು, ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದು, ಹಿರಿಯೂರು ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ದಾವಣಗೆರೆಯ ಶಾಮನೂರು ಶಿವಶಂಕರಪ್ಪ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಈ ಘಟನೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಜವನಗೊಂಡನಹಳ್ಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದೆ. ಬೆಂಗಳೂರಿನಲ್ಲಿ ಅಧಿವೇಶನದ ಕಲಾಪವನ್ನು ಮುಗಿಸಿ ಹಾವೇರಿ ಜಿಲ್ಲೆಯ ಸ್ವಗ್ರಾಮಕ್ಕೆ ಹೋಗುವಾಗ ಈ ಘಟನೆ ನಡೆದಿದೆ. ರಾಷ್ಟ್ರೀಯ ಹೆದ್ದಾರಿ ಬಳಿ ಕಾರಿಂದ ಕೆಳಗಿಳಿದು ಮೂತ್ರವಿಸರ್ಜನೆ ಮಾಡುತ್ತಿದ್ದ ರುದ್ರಪ್ಪ ಲಮಾಣಿ ಅವರಿಗೆ ಬೈಕ್‌ನಲ್ಲಿ ಬಂದ ವ್ಯಕ್ತಿಯೊಬ್ಬರು ಡಿಕ್ಕಿ ಹೊಡೆದಿದ್ದಾರೆ. ಡಿಕ್ಕಿ ಹೊಡೆದ ರಭಸಕ್ಕೆ ಕೆಳಗೆ ಬಿದ್ದ ರುದ್ರಪ್ಪ ಲಮಾಣಿ ಅವರ ಹಣೆ, ಹಲ್ಲು ಮತ್ತು ಬಲ ಮೊಣಕಾಲಿಗೆ ಗಾಯವಾಗಿದೆ.

ಏ.30ರವರೆಗೆ ಜೋಗ ಜಲಪಾತಕ್ಕೆ ಪ್ರವೇಶ ನಿಷೇಧ

ಶಿವಮೊಗ್ಗ, ಮಾ.14– ವಿಶ್ವ ವಿಖ್ಯಾತ ಜೋಗ ಜಲಪಾತ ಪ್ರದೇಶದ ವ್ಯಾಪ್ತಿಯಲ್ಲಿ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯ ಒದಗಿಸಲು ಸಮಗ್ರ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು, ಈ ಕಾಮಗಾರಿಗಳಲ್ಲಿ ಜೋಗ ಜಲಪಾತದ ಮುಖ್ಯದ್ವಾರದ ಕಾಮಗಾರಿಯೂ ಒಂದಾಗಿರುವ ಕಾರಣ ಏ.30 ರವರೆಗೆ ಜೋಗ ಜಲಪಾತಕ್ಕೆ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಜೋಗ ಜಲಪಾತದ ಮುಖ್ಯದ್ವಾರದ ಕಾಮಗಾರಿಯು ಕಾಲ ಮಿತಿಯೊಳಗೆ ಪೂರ್ಣಗೊಳಿಸಬೇಕಿದ್ದು, ಕಾಮಗಾರಿ ಅನುಷ್ಠಾನದ ಸಮಯದಲ್ಲಿ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ಯಾವುದೇ ರೀತಿಯ ತೊಂದರೆಯಾಗಬಾರದೆಂಬ ಹಿತದೃಷ್ಟಿಯಿಂದ ಜೋಗ ಜಲಪಾತದ ಪ್ರವೇಶ ದ್ವಾರವನ್ನು ಜ.1 ರಿಂದ ಮಾ.15 ರವರೆ ಮುಚ್ಚಲಾಗಿತ್ತು. ಮಾ.15 ರ ವೇಳೆಗೂ ಜೋಗ ಜಲಪಾತದ ಮುಖ್ಯದ್ವಾರದ ಕಾಮಗಾರಿಯು ಪೂರ್ಣಗೊಳ್ಳದೇ ಇರುವುದರಿಂದ ಏ.30 ರವರೆಗೆ ಮುಚ್ಚಲಾಗಿದೆ. ಆದ್ದರಿಂದ ಸಾರ್ವಜನಿಕರು ಮತ್ತು ಪ್ರವಾಸಿಗರು ಸಹಕರಿಸಬೇಕೆಂದು ಜಿಲ್ಲಾಧಿಕಾರಿಗಳು ಹಾಗೂ ಜೋಗ ನಿರ್ವಹಣಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಗುರುದತ್ತ ಹೆಗಡೆ ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08182–251444 ಸಂಪರ್ಕಿಸಬಹುದಾಗಿದೆ.

ಕ್ಯಾತಮಾರನಹಳ್ಳಿ ವಿವಾದಿತ ಮಸೀದಿ ತೆರೆಯುವ ವಿಚಾರ

ಉಭಯ ಸಮುದಾಯದ ಅಭಿಪ್ರಾಯ ಆಲಿಸಿದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ

- ಇದೊಂದು ಮಸೀದಿ; ಹಿಂದೂಗಳ ಪ್ರತಿಪಾದನೆ
- ಇದು ಮದರಸ; ಮುಸ್ಲಿಂರ ಒಕ್ಕೊರಲ ಸ್ಪಷ್ಟನೆ
- ಹೈಕೋರ್ಟ್ ಸೂಚನೆಯಂತೆ ಡಿಸಿ ಅಭಿಪ್ರಾಯ ಆಲಿಕೆ
- ಹೈಕೋರ್ಟ್ ಮುಂದಿನ ನಿರ್ಧಾರದ ಬಗ್ಗೆ ಕುತೂಹಲ

ಮೈಸೂರು, ಮಾ.14(ಬಿಎಲ್‌ಯು)– ಮೈಸೂರಿನ ಕ್ಯಾತಮಾರನಹಳ್ಳಿಯ ವಿವಾದಿತ ಮಸೀದಿ ತೆರೆಯುವ ಸಂಬಂಧ ನ್ಯಾಯಾಲಯದ ಸೂಚನೆ ಮೇರೆಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಇಂದು ಹಿಂದೂ ಹಾಗೂ ಮುಸ್ಲಿಂ ಸಮುದಾಯದ ಸ್ಥಳೀಯ ನಾಯಕರ ಅಭಿಪ್ರಾಯ ಆಲಿಸಿದರು.

ಆರ್‌ಎಸ್‌ಎಸ್ ಕಾರ್ಯಕರ್ತ ಕ್ಯಾತಮಾರನಹಳ್ಳಿ ರಾಜು ಹತ್ಯೆ ನಂತರ ಸದರಿ ಮಸೀದಿ ವಿಚಾರ ವಿವಾದದ ಸ್ವರೂಪ ಪಡೆದು ಹಲವು ವರ್ಷಗಳಿಂದ ಈ ಕಟ್ಟಡಕ್ಕೆ ಬೀಗ ಬಿದ್ದಿದೆ. ಇದು ಮದರಸವಲ್ಲ ಮಸೀದಿ ಎಂದು ಹಿಂದೂ ಧರ್ಮಿಯರು ವಾದ ಮಾಡಿದರೆ, ಇದು ಮಸೀದಿ ಅಲ್ಲ ಮದರಸ ಎಂದು ಮುಸ್ಲಿಂ ಸಮುದಾಯದವರು ಪ್ರತಿಪಾದಿಸಿದ್ದಾರೆ.

ಇದು ಮದರಸ, ಬಾಗಿಲು ತೆರೆಸುವಂತೆ ಮಸ್ಜಿದ್–ಇ–ಸಿದ್ದಿಕ್–ಇ–ಅಕ್ಬರ್ ಟ್ರಸ್ಟ್ ಹೈಕೋರ್ಟ್ ಮೊರೆ ಹೋಗಿತ್ತು. ಇದಕ್ಕೆ ನ್ಯಾಯಾಲಯದಲ್ಲಿ ಆಕ್ಷೇಪಣೆ ಸಲ್ಲಿಸಿದ ಹಿಂದೂ ಧರ್ಮಿಯರು, ಮದರಸದ ಹೆಸರಿನಲ್ಲಿ ಮಸೀದಿ ತೆರೆಯುತ್ತಿದ್ದು, ಇದಕ್ಕೆ ಅವಕಾಶ ನೀಡದಂತೆ ಮನವಿ ಮಾಡಿದ್ದರು.

ಹಿಂದೂ ಹಾಗೂ ಮುಸ್ಲಿಂ ಧರ್ಮಿಯರ ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್, ಸ್ಥಳೀಯರ ಅಭಿಪ್ರಾಯ ಸಂಗ್ರಹಿಸಿ 12 ವಾರದೊಳಗೆ ವರದಿ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿತ್ತು.

ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು, ತಮ್ಮ ಕಚೇರಿಯಲ್ಲಿ ಹಿಂದೂ ಹಾಗೂ ಮುಸ್ಲಿಂ ಸಮುದಾಯದ ಮುಖಂಡರಿಂದ ಪ್ರತ್ಯೇಕವಾಗಿ ಅಭಿಪ್ರಾಯ ಆಲಿಸಿದರು.

ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿದ ತರುವಾಯ ಪತ್ರಕರ್ತರಿಗೆ ಮಾಹಿತಿ ನೀಡಿದ ಮಾಜಿ ನಗರ ಪಾಲಿಕೆ ಸದಸ್ಯ ಶೌಕತ್ ಅಲಿ, ಕ್ಯಾತಮಾರನಹಳ್ಳಿಯಲ್ಲಿ ನಗರ ಪಾಲಿಕೆಯ ಅನುಮತಿ ಪಡೆದು 2009 ರಲ್ಲಿ ಮದರಸ ನಿರ್ಮಿಸಲಾಯಿತು. ಆದರೆ ಇದು ಮಸೀದಿ ಎಂದು ಕೆಲವರು ಆಕ್ಷೇಪಣೆ ಸಲ್ಲಿಸಿದ ತರುವಾಯ ಗಲಾಟೆಯಾಯಿತು. ಆ ವೇಳೆ 2013 ರಲ್ಲಿ ಅಂದಿನ ಪೊಲೀಸ್ ಆಯುಕ್ತರು ಹಿಂದೂ–ಮುಸ್ಲಿಂರ ಸೌಹಾರ್ದ ಸಭೆ ನಡೆಸಿ ಶಾಂತಿ ವಾತಾವರಣ ನಿರ್ಮಾಣ ಮಾಡಿದರು ಎಂದು ಹೇಳಿದರು.

ಯಾವುದೇ ತೊಂದರೆ ಇಲ್ಲದೆ ಮದರಸ ನಡೆಯುತ್ತಿದ್ದ ಸಂದರ್ಭದಲ್ಲಿ 2016ರಲ್ಲಿ ಆರ್‌ಎಸ್‌ಎಸ್ ಮುಖಂಡ ರಾಜು ಹತ್ಯೆಯಾಯಿತು. ಅಲ್ಲಿಂದ ಇಲ್ಲಿ ತನಕ ಮದರಸಗೆ ಬೀಗ ಹಾಕಲಾಗಿದೆ. ಈಗ ಮದರಸ ಬೀಗ ತೆರೆಯಲು ಅವಕಾಶ ನೀಡುವಂತೆ ನಾವು ಹೈಕೋರ್ಟ್ ಮೊರೆ ಹೋಗಿದ್ದೇವೆ. 12 ವಾರದೊಳಗೆ ಅಭಿಪ್ರಾಯ ಸಂಗ್ರಹಿಸಿ ವರದಿ ನೀಡುವಂತೆ ನ್ಯಾಯಾಲಯ ಸೂಚನೆ ನೀಡಿದ್ದರ ಮೇರೆಗೆ ಜಿಲ್ಲಾಧಿಕಾರಿಗಳ ಬಳಿ ನಮ್ಮ ಅಭಿಪ್ರಾಯ ಮಂಡಿಸಿದ್ದೇವೆ ಎಂದು ಹೇಳಿದರು.

ಅಲ್ಲಿ ಅರೇಬಿಕ್ ಮದರಸ ಮಾತ್ರ ನಡೆಯುತ್ತಿತ್ತು, ಶೈಕ್ಷಣಿಕ ಉದ್ದೇಶಕ್ಕೆ ಆ ಜಾಗ ಬಳಕೆ ಮಾಡಿಕೊಳ್ಳಲಾಗಿತ್ತೆ ವಿನಃ ಮಸೀದಿಗೆ ಅಲ್ಲ ಎಂದು ಶೌಕತ್ ಅಲಿ ಸ್ಪಷ್ಟಪಡಿಸಿದರು.

ಇದೇ ವೇಳೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ತಮ್ಮ ಅಭಿಪ್ರಾಯ ತಿಳಿಸಿ, ಮಾತನಾಡಿದ ಹುಲಿಯಮ್ಮ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ಕಾರ್ಯದರ್ಶಿ ಶಿವಕುಮಾರ್, ವಿವಾದಿತ ಮಸೀದಿ ಜಾಗದ ವಿಚಾರವಾಗಿ ರಾಜು ಹತ್ಯೆ ಸೇರಿದಂತೆ ಹಲವು ಘಟನೆಗಳು ನಡೆದಿವೆ. ಈ ಹಿನ್ನೆಲೆಯಲ್ಲಿ ಬೀಗ ಹಾಕಿರುವ ಆ ಕಟ್ಟಡದಲ್ಲಿ ಯಥಾಸ್ಥಿತಿ ಕಾಪಾಡಬೇಕು. ವಿವಾದಿತ ಆ ಕಟ್ಟಡದ ಬಗ್ಗೆ ಮತ್ತೆ ಅಶಾಂತ ವಾತಾವರಣ ನಿರ್ಮಾಣವಾಗುವುದು ಬೇಡ ಎಂದು ಮನವಿ ಮಾಡಿದ್ದೇವೆ ಎಂದು ತಿಳಿಸಿದರು.

ನಾವು ಮಸೀದಿ ಎಂದು ಹೇಳಿದರೆ, ಅವರು ಮದರಸ ಎನ್ನುತ್ತಾರೆ. ಈ ಒಂದು ಜಾಗದಿಂದ ಸ್ಥಳೀಯವಾಗಿ ಶಾಂತಿ ಸೌಹಾರ್ದತೆ ಕದಡುವುದು ಬೇಡ. ಈ ವಿಚಾರವನ್ನು ಜಿಲ್ಲಾಧಿಕಾರಿಗಳಿಗೆ ಮನದಟ್ಟು ಮಾಡಿಕೊಟ್ಟಿದ್ದೇವೆ ಎಂದು ಶಿವಕುಮಾರ್ ಹೇಳಿದರು.

ಹಿಂದೂ, ಮುಸ್ಲಿಂ ಧರ್ಮದ ತಲಾ 20 ಮಂದಿ ಪ್ರತ್ಯೇಕವಾಗಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ವಿವಾದಿತ ಜಾಗದ ಕುರಿತು ತಮ್ಮ ಅಭಿಪ್ರಾಯ ಮಂಡಿಸಿದ್ದಾರೆ.

ಈ ವೇಳೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿ ಮುತ್ತುರಾಜ್, ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಉಪಸ್ಥಿತರಿದ್ದರು. ಸುಮಾರು ಎರಡು ಗಂಟೆಗಳ ಕಾಲ ಸಭೆ ನಡೆಯಿತು.

ಹುಲಿಯಮ್ಮ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಲೋಕೇಶ್, ಖಜಾಂಚಿ ಕುಮಾರ್, ಸದಸ್ಯರಾದ ಮಹದೇವ್, ಕೃಷ್ಣಪ್ಪ, ನಾಗರಾಜು ಹಿಂದೂ ಧರ್ಮಿಯರ ಪ್ರತಿನಿಧಿಗಳಾಗಿ ಸಭೆಯಲ್ಲಿ ಹಾಜರಿದ್ದರು.

ಮುಸ್ಲಿಂ ಸಮುದಾಯದಿಂದ ಮೌಲಾನಾ ಅಕ್ಬರ್ ಷರೀಫ್, ಮೌಲಾನ ಅಯೂಬ್ ಅನ್ಸಾರಿ, ಷಮಿ ಖಾನ್, ಅಕ್ಬರ್ ಸಾಬ್, ಫಾರೂಕ್ ಪಾಷ, ಸಲೀಂ, ಅಫ್ರೋಜ್ ಸೇರಿದಂತೆ ಹಲವರು ಸಭೆಯಲ್ಲಿ ಉಪಸ್ಥಿತರಿದ್ದರು.

ಈ ವಿಚಾರ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುವ ಕಾರಣ ಸಭೆಯ ಕುರಿತಂತೆ ಯಾವುದೇ ಮಾಹಿತಿ ನೀಡುವುದಿಲ್ಲ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸ್ಪಷ್ಟಪಡಿಸಿದರು.



ಮೈಸೂರಿನ ಕ್ಯಾತಮಾರನಹಳ್ಳಿಯಲ್ಲಿ ವಿವಾದಿತ ಮಸೀದಿ ತೆರೆಯುವ ಬಗ್ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಮ್ಮ ಕಛೇರಿ ಸಭಾಂಗಣದಲ್ಲಿ ಶುಕ್ರವಾರ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದರು. ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ಡಿಸಿಪಿ ಮುತ್ತುರಾಜ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಎರಡನೇ ದಿನವೂ ಸಿಲ್ಕ್ ಸೀರೆಗೆ ಮುಗಿಬಿದ್ದ ಮಹಿಳೆಯರು

ರಿಯಾಯಿತಿ ಮಾರಾಟ ಇಂದು ಮುಕ್ತಾಯ



ಸಿಲ್ಕ್ ಸೀರೆ ಖರೀದಿಗೆ ಆಗಮಿಸಿರುವ ಜನಸ್ತೋಮ

ಮೈಸೂರು, ಮಾ. 14(ಆರ್‌ಕೆ)– ಕೆಎಸ್‌ಐಸಿಯಲ್ಲಿ ಶೇ. 25ರಷ್ಟು ರಿಯಾಯಿತಿ ಕೊಡುಗೆ ಹಿನ್ನೆಲೆಯಲ್ಲಿ ಎರಡನೇ ದಿನವಾದ ಇಂದೂ ಮೈಸೂರು ಸಿಲ್ಕ್ ಸೀರೆಗಳನ್ನು ಖರೀದಿಸಲು ಮಹಿಳೆಯರು ಮುಗಿಬೀಳುತ್ತಿದ್ದರು.

ಮೈಸೂರಿನ ಮಾನಂದವಾಡಿ ರಸ್ತೆಯ ಕೆಎಸ್‌ಐಸಿ ಆವರಣದ ಶತಮಾನೋತ್ಸವ ಭವನದ ಸಭಾಂಗಣದಲ್ಲಿ ರಿಯಾಯಿತಿ ದರದಲ್ಲಿ ರೇಷ್ಮೆ ಸೀರೆ ಕೊಳ್ಳಲು ಶುಕ್ರವಾರವೂ ಮುಂಜಾನೆ 3 ಗಂಟೆಗೇ ಬಂದು ಮಹಿಳೆಯರು ಸಾಲುಗಟ್ಟಿ ನಿಂತಿದ್ದರಾದರೂ, ಬೆಳಗ್ಗೆ 10ರಿಂದ ಆರಂಭವಾದ ಮಾರಾಟ ಪ್ರಕ್ರಿಯೆ ರಾತ್ರಿ 7 ಗಂಟೆವರೆಗೂ ನಡೆಯಿತು.


ನಿನ್ನೆ (ಗುರುವಾರ) 1,200 ಸಿಲ್ಕ್ ಸೀರೆಗಳು ಮಾರಾಟವಾದರೆ, ಇಂದು 1000 ಸೀರೆಗಳನ್ನು ಖರೀದಿಸಲಾಗಿದೆ. ರಿಯಾಯಿತಿ ನಾಳೆ (ಮಾ. 15) ಮುಕ್ತಾಯಗೊಳ್ಳಲಿದ್ದು, ಇನ್ನೂ 1000 ರೇಷ್ಮೆ ಸೀರೆಗಳನ್ನು ಮಾರಾಟ ಮಾಡಲಾಗುವುದು ಎಂದು ಕೆಎಸ್‌ಐಸಿ ಪ್ರಧಾನ ವ್ಯವಸ್ಥಾಪಕ (ಮಾರುಕಟ್ಟೆ) ನವೀನ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಅತೀ ಹೆಚ್ಚು ಮಹಿಳೆಯರು ಜಮಾಯಿಸಿದ್ದ ಕಾರಣ ಗರ್ಭಿಣಿಯರು, ವಯಸ್ಸಾದ ಹಿರಿಯ ಮಹಿಳೆಯರು ಸರತಿ ಸಾಲಿನಲ್ಲಿ ನಿಂತು ಸಭಾಂಗಣಕ್ಕೆ ಹೋಗುವುದು ಕಷ್ಟವಾದ್ದರಿಂದ ಸಂಸ್ಥೆಯ ಅಧಿಕಾರಿಗಳು ಅವರನ್ನು ಪ್ರತ್ಯೇಕಿಸಿ ಅವರ ಪರವಾಗಿ ಬೇರೆಯವರನ್ನು ಸಾಲಿನಲ್ಲಿ ಕಳುಹಿಸುತ್ತಿದ್ದರು.

ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ಕ್ಯಾಷ್ ಕೌಂಟರ್‌ಗಳನ್ನು ಹೆಚ್ಚಿಸಿ ಬಿಲ್ಲಿಂಗ್ ಮತ್ತು ಹಣ ಪಾವತಿಗೆ ಆಲ್‌ಲೈನ್ ವ್ಯವಸ್ಥೆಯನ್ನು ಮಾಡಲಾಗಿತ್ತು. ಪೆಂಡಾಲ್, ಆಸನ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ, ವಾಹನ ನಿಲುಗಡೆ ಸೌಲಭ್ಯ ಕಲ್ಪಿಸಲಾಗಿದೆ.

ದೇಶ - ವಿದೇಶ


ರೈಲು ಹೈಜಾಕ್ ಬೆನ್ನಲ್ಲೇ ಪಾಕಿಸ್ತಾನದ ಮಸೀದಿಯಲ್ಲಿ ಸ್ಫೋಟ!



ಖೈಬರ್: ಬಲೂಚಿಸ್ತಾನದಲ್ಲಿ ನಡೆದ ಪಾಕಿಸ್ತಾನದ ರೈಲು ಅಪಹರಣ ಪ್ರಕರಣ ನಡೆದು ಇನ್ನೂ ವಾರ ಆಗಿಲ್ಲ ಇದರ ಬೆನ್ನಲ್ಲೇ ಇದೀಗ ಪಾಕಿಸ್ತಾನದಲ್ಲಿ ಬಾಂಬ್ ಸ್ಫೋಟ ನಡೆದಿದೆ.

ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದ ದಕ್ಷಿಣ ವಜೀರಿಸ್ತಾನದಲ್ಲಿ ಶುಕ್ರವಾರ (ಮಾ.14) ಪ್ರಾರ್ಥನೆಯ ಸಮಯದಲ್ಲಿ ಮಸೀದಿಯಲ್ಲಿ ಬಾಂಬ್ ಸ್ಫೋಟಗೊಂಡಿದೆ. ದಾಳಿಯಲ್ಲಿ, ಜಮಿಯತ್ ಉಲೇಮಾ–ಎ–ಇಸ್ಲಾಂ (ಜೆಯುಐ) ಜಿಲ್ಲಾ ಮುಖ್ಯಸ್ಥ ಅಬ್ದುಲ್ಲಾ ನದೀಮ್ ಗಂಭೀರವಾಗಿ ಗಾಯಗೊಂಡಿದ್ದು, ಇತರ ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ತಿಳಿದು ಬಂದಿದೆ. ಅಜಮ್ ವಾರ್ಸಾಕ್ ಬೈಪಾಸ್ ರಸ್ತೆಯಲ್ಲಿರುವ ಮೌಲಾನಾ ಅಬ್ದುಲ್ ಅಜೀಜ್ ಮಸೀದಿಯಲ್ಲಿ ಸ್ಫೋಟ ಸಂಭವಿಸಿದೆ ಎಂದು ಜಿಲ್ಲಾ ಪೊಲೀಸ್ ಅಧಿಕಾರಿ (ಡಿಪಿಒ) ಆಸಿಫ್ ಬಹದ್ದೂರ್ ಹೇಳಿದ್ದಾರೆ ಎಂದು ದಿ ಡಾನ್ ವರದಿ ಮಾಡಿದೆ. ಮಧ್ಯಾಹ್ನ 1.45 ಕ್ಕೆ ಮಸೀದಿಯ ಪ್ರವಚನ ಪೀಠದಲ್ಲಿ ಸುಧಾರಿತ ಸ್ಫೋಟಕ ಸಾಧನವನ್ನು ಇರಿಸಲಾಗಿತ್ತು, ಶುಕ್ರವಾರದ ಪ್ರಾರ್ಥನೆಯ ಸಮಯದಲ್ಲಿ ಅದನ್ನು ಸ್ಫೋಟಿಸಲಾಯಿತು ಎಂದು ವರದಿಯಾಗಿದೆ. ರಕ್ಷಣಾ ತಂಡಗಳು ಘಟನಾ ಸ್ಥಳಕ್ಕೆ ತ್ವರಿತವಾಗಿ ಆಗಮಿಸಿ ಗಾಯಾಳುಗಳನ್ನು ವಾನಾದ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದವು.

ಅಮೆರಿಕನ್ ಏರ್‌ಲೈನ್ಸ್‌ಗೆ ಬೆಂಕಿ: 12 ಮಂದಿ ಆಸ್ಪತ್ರೆಗೆ ದಾಖಲು



ಡೆನ್ವರ್: ಅಮೆರಿಕನ್ ಏರ್‌ಲೈನ್ಸ್ ವಿಮಾನ ಡೆನ್ವರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿದಾಗ ಬೆಂಕಿ ಕಾಣಿಸಿಕೊಂಡು ಹನ್ನೆರಡು ಮಂದಿ ಪ್ರಯಾಣಿಕರನ್ನು ಆಸ್ಪತ್ರೆಗೆ ದಾಖಲಿಸಲಾದ ಘಟನೆ ನಡೆದಿದೆ. ಬೆಂಕಿ ಹೊತ್ತಿಕೊಂಡ ಕೂಡಲೇ ಪ್ರಯಾಣಿಕರು ಬೇಗನೆ ಸ್ಥಳಾಂತರಗೊಳ್ಳಲು ಸ್ಲೈಡ್‌ಗಳನ್ನು ನಿಯೋಜಿಸಲಾಯಿತು.

ಭಾರತೀಯ ಕಾಲಮಾನದ ಪ್ರಕಾರ ನಿನ್ನೆ ಸಾಯಂಕಾಲ ಈ ಘಟನೆ ಸಂಭವಿಸಿದ್ದು, ಡೆನ್ವರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಎಕ್ಸ್ ಖಾತೆ ಪ್ರಕಾರ, ಆಸ್ಪತ್ರೆಗಳಿಗೆ ಸಾಗಿಸಲಾದ ಎಲ್ಲಾ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಕೊಲೊರಾಡೋ ಸ್ಪ್ರಿಂಗ್ಸ್ ವಿಮಾನ ನಿಲ್ದಾಣದಿಂದ ಡಲ್ಲಾಸ್ ಫೋರ್ಟ್ ವರ್ತ್‌ಗೆ ತೆರಳುತ್ತಿದ್ದ ವಿಮಾನದ ಎಂಜಿನ್‌ನಲ್ಲಿ ಶಬ್ದ ಉಂಟಾಗಿ ಡೆನ್ವರ್‌ಗೆ ತಿರುಗಿಸಲ್ಪಟ್ಟಿತು. ಸಂಜೆ 5.15 ರ ಸುಮಾರಿಗೆ ಸುರಕ್ಷಿತವಾಗಿ ಇಳಿಯಿತು. ನಂತರ ಬೋಯಿಂಗ್ 737–800ನ ಎಂಜಿನ್‌ಗೆ ಬೆಂಕಿ ಹೊತ್ತಿಕೊಂಡಿತು ಎಂದು ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ ಹೇಳಿಕೆಯಲ್ಲಿ ತಿಳಿಸಿದೆ

172 ಪ್ರಯಾಣಿಕರು ಮತ್ತು ಆರು ಸಿಬ್ಬಂದಿಯನ್ನು ಟರ್ಮಿನಲ್‌ಗೆ ಕರೆದೊಯ್ಯಲಾಯಿತು.

ಪಂಜಾಬ್‌ನಲ್ಲಿ ಶಿವಸೇನಾ ನಾಯಕನಿಗೆ ಗುಂಡಿಕ್ಕಿ ಹತ್ಯೆ



ಪಂಜಾಬ್: ಗುರುವಾರ ತಡರಾತ್ರಿ ಪಂಜಾಬ್‌ನ ಮೋಗಾ ಜಿಲ್ಲೆಯಲ್ಲಿ ಶಿವಸೇನಾ ನಾಯಕನೊಬ್ಬನನ್ನು ಬೈಕ್‌ನಲ್ಲಿ ಬೆನ್ನಟ್ಟಿ ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಪಂಜಾಬ್‌ನ ಮೊಗಾದಲ್ಲಿ ಗುರುವಾರ ರಾತ್ರಿ ನಡೆದಿದೆ. ದಾಳಿಯಲ್ಲಿ ಓರ್ವ ಬಾಲಕ ಗಾಯಗೊಂಡಿದ್ದಾನೆಂದು ಪೊಲೀಸರು ತಿಳಿಸಿದ್ದಾರೆ. ಶಿವಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಮಂಗತ್ ರೈ ಅಲಿಯಾಸ್ ಮಂಗಾ ಹಾಲು ಖರೀದಿಸುತ್ತಿದ್ದಾಗ ಈ ಘಟನೆ ನಡೆದಿದೆ.

ರಾತ್ರಿ 10 ಗಂಟೆ ಸುಮಾರಿಗೆ ಮೂವರು ಅಪರಿಚಿತ ವ್ಯಕ್ತಿಗಳು ಶಿವಸೇನಾ ನಾಯಕನ ಮೇಲೆ ಗುಂಡು ಹಾರಿಸಿದರು. ಆದರೆ, ಮಂಗತ್ ಬದಲಿಗೆ 11 ವರ್ಷದ ಬಾಲಕನಿಗೆ ತಗುಲಿತು. ದಾಳಿಕೋರರು ಬೆನ್ನಟ್ಟಿದಾಗ ಮಂಗಾ ತಕ್ಷಣ ದ್ವಿಚಕ್ರ ವಾಹನದಲ್ಲಿ ಆ ಪ್ರದೇಶದಿಂದ ಪರಾರಿಯಾಗಲು ಯತ್ನಿಸಿದರು. ಬೆನ್ನಟ್ಟಿ ಮತ್ತೆ ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ. ಗಾಯಗೊಂಡ ಬಾಲಕನನ್ನು ಆರಂಭದಲ್ಲಿ ಮೋಗಾ ಸಿವಿಲ್ ಆಸ್ಪತ್ರೆಗೆ ದಾಖಲಿಸಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಲೆಗೆ ಪೇಟ, ಕಪ್ಪು ಕನ್ನಡಕ ಧರಿಸಿ ಯೋಗಿ ಹೋಳಿ ಆಚರಣೆ




ಗೋರಖ್‌ಪುರ: ಹೋಳಿ ಹಬ್ಬದ ಅಂಗವಾಗಿ ಗೋರಖ್‌ಪುರದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ತಲೆಗೆ ಪೇಟ, ಕಪ್ಪು ಕನ್ನಡಕ ಧರಿಸಿ ಬಣ್ಣಗಳಲ್ಲಿ ಮಿಂದೆದ್ದರು.

ಗೋರಖನಾಥ ದೇವಸ್ಥಾನದಲ್ಲಿ ನಡೆದ ಆಚರಣೆಯಲ್ಲಿ ಯೋಗಿ ಅವರು ಭಾಗವಹಿಸಿ, ಫಾಗ್ ಗೀತೆಗಳನ್ನು ಹಾಡುವ ಮೂಲಕ ಮತ್ತು ಗುಲಾಲ್‌ನೊಂದಿಗೆ ಆಡುವ ಮೂಲಕ ಹಬ್ಬದ ಸಂತೋಷದಲ್ಲಿ ಪಾಲ್ಗೊಂಡರು. ಇದೇ ವೇಳೆ, ಅವರು ಭಗವಾನ್ ನರಸಿಂಹ ಶೋಭಾಯಾತ್ರೆಯಲ್ಲೂ ಭಾಗವಹಿಸಿ, ಜನರ ಮೇಲೆ ಪುಷ್ಪವೃಷ್ಟಿ ಮಾಡಿದರು. ಈ ಆಚರಣೆಯಲ್ಲಿ ಸಾಂಪ್ರದಾಯಿಕ ಉತ್ಸಾಹ ಮತ್ತು ಭಕ್ತಿಯ ಸಮ್ಮಿಲನ ಕಂಡುಬಂದಿತು.

ಹೋಳಿಯ ಕುರಿತು ಮಾತನಾಡಿದ ಯೋಗಿ ಆದಿತ್ಯನಾಥ್, ಹೋಳಿಯನ್ನು ಏಕತೆ, ಪ್ರೀತಿ ಮತ್ತು ಸಾಮರಸ್ಯದ ಸಂಕೇತವೆಂದು ವರ್ಣಿಸಿ, ಈ ಹಬ್ಬವು ಸನಾತನ ಧರ್ಮದ ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು. ಇನ್ನು ಇದೇ ಸಂದರ್ಭದಲ್ಲಿ ಅವರು ಎಲ್ಲರಿಗೂ ಹೋಳಿಯ ಶುಭಾಶಯಗಳನ್ನು ಕೋರಿ, ಈ ಪರ್ವವು ಜನರ ಜೀವನದಲ್ಲಿ ಸುಖ, ಸಮೃದ್ಧಿ ಮತ್ತು ಹೊಸ ಉತ್ಸಾಹವನ್ನು ತರಲಿ ಎಂದು ಪ್ರಾರ್ಥಿಸಿದರು.

ಛತ್ತೀಸ್‌ಗಢದಲ್ಲಿ 17 ನಕ್ಸಲೀಯರ ಶರಣಾಗತಿ



ಬಿಜಾಪುರ: ತಲೆಗೆ ರೂ. 24 ಲಕ್ಷ ಬಹುಮಾನ ಘೋಷಿಸಲ್ಪಟ್ಟ 9 ಮಂದಿ ಸೇರಿದಂತೆ 17 ನಕ್ಸಲೀಯರು ಛತ್ತೀಸ್‌ಗಢದ ಬಿಜಾಪುರದಲ್ಲಿ ಗುರುವಾರ ಶರಣಾಗಿದ್ದಾರೆ. ದಂಪತಿ ಸೇರಿದಂತೆ ಕೆಂಪು ಸೇನೆಯ ಎಲ್ಲಾ 17 ಮಂದಿ ಬಿಜಾಪುರದಲ್ಲಿ ಹಿರಿಯ ಪೊಲೀಸ್ ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ ಅಧಿಕಾರಿಗಳ ಮುಂದೆ ಶರಣಾದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಳ್ಳು, ಅಮಾನವೀಯ ನಕ್ಸಲ್ ಸಿದ್ಧಾಂತದಿಂದ ನಿರಾಶೆ, ಹಿರಿಯ ನಕ್ಸಲೀಯರಿಂದ ಅಮಾಯಕ ಆದಿವಾಸಿಗಳ ಶೋಷಣೆ ಮತ್ತು ಭದ್ರತಾ ಪಡೆಗಳ ಪ್ರಭಾವ ಹೆಚ್ಚಳ ಶರಣಾಗತಿಗೆ ಕಾರಣವೆಂದು ನಕ್ಸಲೀಯರು ಹೇಳಿರುವುದಾಗಿ ಬಿಜಾಪುರದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ಯಾದವ್ ಹೇಳಿದ್ದಾರೆ.

ಸರ್ಕಾರದ ನಿಯದ್ ನೆಲ್ಲನಾರ್ ಯೋಜನೆಯಿಂದ (ನಿಮ್ಮ ಒಳ್ಳೆಯ ಗ್ರಾಮ) ಪ್ರಭಾವಿತರಾಗಿದ್ದರು. ಈ ಯೋಜನೆಯಡಿ ರಾಜ್ಯ ಸರ್ಕಾರ ಹಳ್ಳಿಗಳಲ್ಲಿ ರಸ್ತೆಗಳು, ಆರೋಗ್ಯ ಸೇವೆಗಳು, ನೀರು ಮತ್ತು ಇತರ ಸೌಲಭ್ಯಗಳನ್ನು ಒದಗಿಸುವ ಮೂಲಕ ಸಮಾನತೆ ಮತ್ತು ಅಭಿವೃದ್ಧಿಯ ವಾತಾವರಣವನ್ನು ಸೃಷ್ಟಿಸುತ್ತಿದೆ.

ಮೈಸೂರು ಮಿತ್ರ ಶನಿವಾರ 15 ಮಾರ್ಚ್ 2025

ಮಂಡ್ಯ ಶಾಸಕ ರವಿ ಗಣಿಗ ವಿರುದ್ಧ ನಾಚಪ್ಪ ಮಹಿಳಾ ಆಯೋಗಕ್ಕೆ ದೂರು


ಎನ್.ಯು.ನಾಚಪ್ಪ


ರವಿ ಗಣಿಗ

ಮಡಿಕೇರಿ,ಮಾ.14– ಕೊಡಗಿನ ಕುವರಿ ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ವಿಚಾರದಲ್ಲಿ ಮಂಡ್ಯ ಶಾಸಕ ರವಿ ಗಣಿಗ ಹೇಳಿಕೆ ಖಂಡಿಸಿ ರಶ್ಮಿಕಾ ಪರ ನಿಂತಿದ್ದ ಕೊಡವ ನ್ಯಾಷನಲ್ ಸಂಘಟನೆ ಮುಖಂಡ ನಾಚಪ್ಪ ಇದೀಗ ರವಿ ಗಣಿಗ ವಿರುದ್ಧ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ.

ರಶ್ಮಿಕಾ ಮಂದಣ್ಣ ಅತಿ ಸೂಕ್ಷ್ಮ ಕೊಡವ ಬುಡಕಟ್ಟು ಜನಾಂಗದಿಂದ ಬಂದವರು. ರಾಷ್ಟ್ರ ಮಟ್ಟದಲ್ಲಿ ಯಶಸ್ವಿಯಾಗಲು ಅವರ ಸ್ವಂತ ಪರಿಶ್ರಮವೇ ಕಾರಣ. ಹೀಗಿರುವಾಗ ರವಿ ಗಣಿಗ ರಶ್ಮಿಕಾ ವಿಚಾರ ಪ್ರಸ್ತಾಪಿಸಿ ಅನಗತ್ಯ ವಿವಾದ ಮಾಡುತ್ತಿದ್ದಾರೆ. ಮಾತ್ರವಲ್ಲ ರಶ್ಮಿಕಾ ಅವರನ್ನು ಬೆದರಿಸುವ ಮೂಲಕ ಸಂವಿಧಾನ ವಿರೋಧಿ ಕೃತ್ಯ ಮಾಡುತ್ತಿದ್ದಾರೆ ಎಂದು ನಾಚಪ್ಪ ದೂರಿನಲ್ಲಿ ಹೇಳಿದ್ದಾರೆ. ಈ ರವಿ ಗಣಿಗ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸಿದ್ದಾರೆ.

ರಶ್ಮಿಕಾ ಮಂದಣ್ಣ ಅವರನ್ನು ಟೀಕಿಸುವ ಮೊದಲು ರವಿ ಗಣಿಗ ಯಾರೆಂಬುದೇ ಜನರಿಗೆ ಗೊತ್ತಿರಲಿಲ್ಲ. ಇದೀಗ ರಶ್ಮಿಕಾ ಮಂದಣ್ಣ ಅವರನ್ನು ಟೀಕಿಸಿ ರವಿ ಗಣಿಗ ಪ್ರಚಾರ ಪಡೆದುಕೊಂಡಿದ್ದಾರೆ ಎಂದು ನಾಚಪ್ಪ ಟೀಕಿಸಿದ್ದಾರೆ. ಒಂದು ಹೆಣ್ಣುಮಗಳ ಮೇಲೆ ದೌರ್ಜನ್ಯ ಮಾಡುವುದಲ್ಲದೇ ತಮ್ಮ ಅಕ್ರಮಗಳನ್ನು ಮುಚ್ಚಿಕೊಳ್ಳಲು ರಶ್ಮಿಕಾ ಅವರನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಕಿಡಿ ಕಾರಿದ್ದಾರೆ. ಇವೆಲ್ಲವನ್ನು ನಿಲ್ಲಿಸಲೆಂದೇ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ನೀಡಿರುವುದಾಗಿ ನಾಚಪ್ಪ ಸ್ಪಷ್ಟಪಡಿಸಿದ್ದಾರೆ.

ದುಶ್ಚಟ ಬಿಟ್ಟು ಶಿಸ್ತು, ತಾಳ್ಮೆ ಕಲಿತು ಯಶಸ್ಸು ಸಾಧಿಸಿ

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷರ ಕರೆ


ಸಮಾರಂಭದಲ್ಲಿ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಮಡಿಕೇರಿ,ಮಾ.14– ವಿದ್ಯಾರ್ಥಿ ಜೀವನದಲ್ಲಿ ನಾವು ಏನನ್ನು ಪಡೆಯುತ್ತೇವೆಯೋ ಅದನ್ನೇ ಬದುಕಿನಲ್ಲೂ ಅಳವಡಿಸಿಕೊಳ್ಳುತ್ತೇವೆ. ಆದ್ದರಿಂದ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದೆ ಶಿಸ್ತು ಮತ್ತು ತಾಳ್ಮೆಯನ್ನು ಮೈಗೂಡಿಸಿಕೊಂಡು ಯಶಸ್ಸನ್ನು ಸಾಧಿಸಬೇಕೆಂದು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಕರೆ ನೀಡಿದ್ದಾರೆ.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಮತ್ತು ಹಳೇ ವಿದ್ಯಾರ್ಥಿ ಸಂಘದ ಸಹಯೋಗದಲ್ಲಿ ಕಾಲೇಜಿನ ಸಭಾಂಗಣದಲ್ಲಿ ನಡೆದ ವಿದ್ಯಾರ್ಥಿಗಳ ಪ್ರತಿಭಾ ಸಮಾಗಮ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಯಶಸ್ಸನ್ನು ಸಾಧಿಸಬೇಕಾದರೆ ಪೋಷಕರ ಹಾಗೂ ಶಿಕ್ಷಕರ ಆಶೀರ್ವಾದ ಮುಖ್ಯ, ಜೊತೆಯಲ್ಲಿ ಒಳ್ಳೆತನ ಮತ್ತು ತಾಳ್ಮೆ ಅಗತ್ಯ. ಪೋಷಕರು ಮಕ್ಕಳ ತಪ್ಪುಗಳನ್ನು ತಿದ್ದಿ ಅವರಲ್ಲಿ ಮೌಲ್ಯಗಳನ್ನು ತುಂಬುತ್ತಾರೆ, ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಕೌಶಲ್ಯ ಹೆಚ್ಚಿಸುವ ಕಾರ್ಯವನ್ನು ಮಾಡುತ್ತಾರೆ. ಅಲ್ಲದೆ ಉತ್ತಮ ಪ್ರಜೆಗಳನ್ನಾಗಿ ರೂಪಿಸಿ ದೇಶಕ್ಕೆ ಕೊಡುಗೆಯಾಗಿ ನೀಡುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಜೀವನದ ನಂತರವೂ ಶಿಕ್ಷಕರನ್ನು ಸದಾ ಸ್ಮರಿಸುವಂತಾಗಬೇಕು ಎಂದು ಹೇಳಿದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಪಠ್ಯದ ಜೊತೆಗೆ ಪಠ್ಯೇತರವಾಗಿಯೂ ಸಾಧನೆ ಮಾಡಿದ್ದು, ದೇಶಕ್ಕೆ ಹಲವು ಯೋಧರನ್ನು ನೀಡಿದೆ. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಮುಂದೆ ಬರಬೇಕು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಎಲ್ಲಾ ಕಾರ್ಯಗಳಿಗೂ ಹಳೇ ವಿದ್ಯಾರ್ಥಿ ಸಂಘ ಸಂಪೂರ್ಣ ಸಹಕಾರ ನೀಡುವ ಮೂಲಕ ಕಾಲೇಜಿನ ಯಶಸ್ಸಿಗೆ ಸದಾ ಶ್ರಮಿಸಲಿದೆ ಎಂದು ಬೊಳ್ಳಜಿರ ಬಿ.ಅಯ್ಯಪ್ಪ ಭರವಸೆ ನೀಡಿದರು.

ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಎ.ಗಾಯತ್ರಿ ದೇವಿ ಮಾತನಾಡಿ, ವಿಶೇಷ ಜ್ಞಾನ ಪಡೆಯಲು ಶಿಕ್ಷಣ ಮುಖ್ಯವಾಗಿದ್ದು, ವಿದ್ಯಾರ್ಥಿಗಳು ಸಂಯಮವನ್ನು ಬೆಳೆಸಿಕೊಳ್ಳಬೇಕು ಮತ್ತು ಮಾದರಿ ಪ್ರಜೆಗಳಾಗಿ ರೂಪುಗೊಳ್ಳಬೇಕು. ಆಗ ಮಾತ್ರ ಸುಖ ಜೀವನ ನಡೆಸಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಮೇಜರ್ ಪ್ರೊ.ಬಿ.ರಾಘವ ಅವರು, ವಿದ್ಯಾರ್ಥಿಗಳ ಸಾಧನೆಗೆ ಪೋಷಕರ ಬೆಂಬಲ, ನೈತಿಕ ಸ್ಥೈರ್ಯ, ತ್ಯಾಗ ಮನೋಭಾವ ಅತಿ ಮುಖ್ಯ. ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನವಾಗುತ್ತದೆ ಎಂದರು.

ಕ್ಷೇಮ ಪಾಲನಾ ಸಮಿತಿಯ ಸಂಯೋಜಕ ಪ್ರೊ.ಎಂ.ಪಿ.ಕೃಷ್ಣ ಮಾತನಾಡಿ, ವಿದ್ಯಾರ್ಥಿಗಳು ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು ಕೂಡ ಮುಖ್ಯವಾಗಿದ್ದು, ಪುಸ್ತಕಗಳನ್ನು ಓದುವ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಕರೆ ನೀಡಿದರು. ವಿದ್ಯಾರ್ಥಿ ಸಂಘದ ಸಲಹೆಗಾರ ಪ್ರೊ.ಶ್ರೀಧರ್ ಹೆಗಡೆ, ವಿದ್ಯಾರ್ಥಿ ಸಂಘದ ಅಧ್ಯಕ್ಷ ಎನ್.ವಿ. ಮಹೇಂದ್ರ ಅವರು ಮಾತನಾಡಿದರು.

ಸನ್ಮಾನ: ಎನ್‌ಸಿಸಿಯಲ್ಲಿ ಸಾಧನೆ ಮಾಡಿದ ಹೇಮ್ ಮೊಣ್ಣಪ್ಪ, ಎಂ.ಆರ್.ಹೇಮಂತ್ ಹಾಗೂ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅವರನ್ನು ಕಾಲೇಜು ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಪ್ರತಿಭಾ ಸಮಾಗಮ ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಹಾಡುಗಾರಿಗೆ ಸ್ಪರ್ಧೆ, ಭಾಷಣ ಸ್ಪರ್ಧೆ, ನೃತ್ಯ ಸ್ಪರ್ಧೆ, ಸಾಂಪ್ರದಾಯಿಕ ಫ್ಯಾಷನ್ ಶೋ ನಡೆಯಿತು.

ಸುಂಟಿಕೊಪ್ಪದ ಅಂಗಡಿ, ಹೋಟೆಲ್‌ಗಳಿಗೆ ಪೊಲೀಸ್, ಆರೋಗ್ಯ ಇಲಾಖೆ ಭೇಟಿ

ನಿಯಮ ಉಲ್ಲಂಘಿಸಿದ ಕಾರಣ 16 ಪ್ರಕರಣ ದಾಖಲು


ಅಂಗಡಿ, ಹೋಟೇಲುಗಳಿಗೆ ಅನಿರೀಕ್ಷಿತ ಭೇಟಿ ನೀಡಿದ ಅಧಿಕಾರಿಗಳ ತಂಡ.

ಸುಂಟಿಕೊಪ್ಪ,ಮಾ.14– ಸುಂಟಿಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ತಾಲೂಕು ಆರೋಗ್ಯಾಧಿಕಾರಿಗಳ ನಿರ್ದೇಶನದ ಮೇರೆಗೆ ತಂಬಾಕು ಉತ್ಪನ್ನಗಳಾದ ಬೀಡಿ, ಸಿಗರೇಟು, ಗುಟ್ಕಾ ಮಾರಾಟದ ಕುರಿತು ಕಾಯ್ದೆ ಉಲ್ಲಂಘನೆ ಮಾಹಿತಿ ಆಧರಿಸಿ ಸುಂಟಿಕೊಪ್ಪ ಪಟ್ಟಣದ ಅಂಗಡಿ ಹೋಟೇಲುಗಳಿಗೆ ಅನಿರೀಕ್ಷಿತ ಭೇಟಿ ನೀಡಿದ ಪರಿಶೀಲನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಕಾಯಿದೆ ಉಲ್ಲಂಘನೆಯ 16 ಪ್ರಕರಣಗಳು ಪತ್ತೆಯಾಗಿದ್ದು 1950 ರೂ. ದಂಡ ವಿಧಿಸಿ ಸಾರ್ವಜನಿಕರ ಆರೋಗ್ಯ ರಕ್ಷಣೆ ಕುರಿತು ಜಾಗೃತಿ ಮೂಡಿಸಲಾಯಿತು. ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಎಚ್ಚರಿಸಿದರು.

ಈ ಸಂದರ್ಭ ಸುಂಟಿಕೊಪ್ಪ ಠಾಣೆಯ ಎಎಸ್‌ಐ ಸ್ಯಮನ್ ಡಿ ಕುನ್ಹಾ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವಿಶ್ವಜ್ಞ, ಆರೋಗ್ಯ ನಿರೀಕ್ಷಾಧಿಕಾರಿಗಳಾದ ಲೋಕೇಶ್, ಜಿಲ್ಲಾ ತಂಬಾಕು ಸಂಯೋಜಕರಾದ ಪುನೀತ, ಜಿಲ್ಲಾ ತಂಬಾಕು ಕೋಶದ ಮಂಜುನಾಥ್ ಹಾಜರಿದ್ದರು.

ಕಾರ್ಮಿಕರ ಹೊಡೆದಾಟದಲ್ಲಿ ಓರ್ವ ಬಲಿ

ಸಿದ್ದಾಪುರ: ಕ್ಷುಲ್ಲಕ ವಿಚಾರಕ್ಕೆ ಕಾರ್ಮಿಕರ ನಡುವೆ ಹೊಡೆದಾಟ ನಡೆದು ಓರ್ವನ ಕೊಲೆಯಲ್ಲಿ ಅಂತ್ಯವಾದ ಘಟನೆ ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟದ ಖಾಸಗಿ ಸಂಸ್ಥೆಯ ಕಾಫಿ ತೋಟದಲ್ಲಿ ನಡೆದಿದೆ.

ಚೆನ್ನಯ್ಯನಕೋಟೆಯ ಕಾಫಿ ತೋಟದಲ್ಲಿ ಕಾರ್ಮಿಕರಾಗಿರುವ ಪಂಜರಿ ಎರವ ಚಾಮ (52) ಹಾಗೂ ಜೇನು ಕುರುಬರ ರಘು(45) ಎಂಬವರು ಪಾಲಿಬೆಟ್ಟ ಪಟ್ಟಣಕ್ಕೆ ತೆರಳಿ ಬಾಳೆಗೊನೆ ಮಾರಾಟ ಮಾಡಿ ಅದೇ ಹಣದಲ್ಲಿ ಮದ್ಯ ಸೇವಿಸಿ ಲೈನ್ ಮನೆಗೆ ಬರುತ್ತಿದ್ದ ಸಂದರ್ಭ ಕ್ಷುಲ್ಲಕ ಕಾರಣಕ್ಕೆ ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಈ ವೇಳೆ ಚಾಮ ದೊಣ್ಣೆಯಿಂದ ರಘುವಿನ ಮೇಲೆ ಹಲ್ಲೆ ನಡೆಸಿದ್ದಾನೆ. ಪರಿಣಾಮ ರಘುವಿನ ತಲೆ ಹಾಗೂ ಬೆನ್ನಿಗೆ ತೀವ್ರ ಗಾಯವಾಗಿ ಸ್ಥಳದಲ್ಲೇ ಕುಸಿದು ಬಿದ್ದಿದ್ದಾನೆ.

ರಘು ರಾತ್ರಿಯಾದರೂ ಮನೆಗೆ ಬಾರದ ಹಿನ್ನೆಲೆಯಲ್ಲಿ ಆತನ ಕುಟುಂಬಸ್ಥರು ಬೆಳಗಿನ ಜಾವ ರಘುವನ್ನು ಹುಡುಕಿಕೊಂಡು ಹೋದ ಸಂದರ್ಭ ಕಾಫಿ ತೋಟಕ್ಕೆ ತೆರಳುವ ರಸ್ತೆ ಬದಿಯಲ್ಲಿ ರಘುವಿನ ಮೃತದೇಹ ಕಂಡು ಬಂದಿದೆ. ಈ ಬಗ್ಗೆ ರಘುವಿನ ಕುಟುಂಬಸ್ಥರು ಸಿದ್ದಾಪುರ ಠಾಣೆಗೆ ದೂರು ನೀಡಿದ ಮೇರೆಗೆ ಕೊಲೆ ಆರೋಪಿ ಚಾಮನ ವಿರುದ್ಧ ಸಿದ್ದಾಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆತನನ್ನು ಬಂಧಿಸಿದ್ದಾರೆ.

ಕೊಡಗು ಪತ್ರಕರ್ತರ ಸಂಘಕ್ಕೆ ಅನಿಲ್ ಹೆಚ್.ಟಿ.ಅಧ್ಯಕ್ಷ


ಅನಿಲ್.ಹೆಚ್.ಟಿ.


ಸುರೇಶ್ ಬಿಳಿಗೇರಿ

ಮಡಿಕೇರಿ,ಮಾ.14– ಕೊಡಗು ಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾಗಿ ಅನಿಲ್ ಹೆಚ್.ಟಿ. ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ್ ಬಿಳಿಗೇರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಗರದ ಪತ್ರಿಕಾ ಭವನದಲ್ಲಿ ಹಾಲಿ ಅಧ್ಯಕ್ಷ ಎಸ್.ಎ.ಮುರಳೀಧರ್ ಅಧ್ಯಕ್ಷತೆಯಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಹಿರಿಯ ಸಲಹೆಗಾರ ಟಿ.ಪಿ.ರಮೇಶ್ ಅವರು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದ್ದ ಸರ್ವಸದಸ್ಯರ ಒಪ್ಪಿಗೆ ಪಡೆದು ನೂತನ ಆಡಳಿತ ಮಂಡಳಿಗೆ ಪದಾಧಿಕಾರಿಗಳ ಹೆಸರನ್ನು ಪ್ರಕಟಿಸಿದರು. ಸಂಘದ ಉಪಾಧ್ಯಕ್ಷರಾಗಿ ತೇಲಪಂಡ ಕವನ್ ಕಾರ್ಯಪ್ಪ, ಕೋಶಾಧಿಕಾರಿ ಟಿ.ಕೆ. ಸಂತೋಷ್, ಕ್ಷೇಮನಿಧಿ ಅಧ್ಯಕ್ಷರಾಗಿ ಜಿ.ವಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ಅರುಣ್ ಕೂರ್ಗ್, ಸಂಘದ ಸಹ ಕಾರ್ಯದರ್ಶಿಯಾಗಿ ಪ್ರಸಾದ್ ಸಂಪಿಗೆಕಟ್ಟೆ, ಖಾಯಂ ಆಹ್ವಾನಿತರಾಗಿ ಸಂಘದ ನಿಕಟ ಪೂರ್ವ ಅಧ್ಯಕ್ಷ ಎಸ್.ಎ.ಮುರಳೀಧರ್ ಆಯ್ಕೆ ಮಾಡಲಾಯಿತು.

ವೈಭವದ ಗಂಗಾಧರೇಶ್ವರ ಸ್ವಾಮಿ ಮಹಾ ರಥೋತ್ಸವ


ಆದಿಚುಂಚನಗಿರಿಯಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿ ಮಹಾ ರಥೋತ್ಸವ ಹಾಗೂ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ಲಕ್ಷಾಂತರ ಭಕ್ತರ ನಡುವೆ ಬಹಳ ವಿಜೃಂಭಣೆಯಿಂದ ನೆರವೇರಿತು.

ಲಕ್ಷಾಂತರ ಭಕ್ತರು ಭಾಗಿ, ಅಡ್ಡ ಪಲ್ಲಕ್ಕಿಯಲ್ಲಿ ಶ್ರೀಗಳ ಮೆರವಣಿಗೆ

ನಾಗಮಂಗಲ, ಮಾ.14– ಇತಿಹಾಸ ಪ್ರಸಿದ್ಧ, ಪುಣ್ಯಕ್ಷೇತ್ರ ತಾಲೂಕಿನ ಆದಿ ಚುಂಚನಗಿರಿಯಲ್ಲಿ ಗುರುವಾರ ಮುಂಜಾನೆ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಗಂಗಾಧರೇಶ್ವರ ಸ್ವಾಮಿ ಮಹಾ ರಥೋತ್ಸವ ಹಾಗೂ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ಲಕ್ಷಾಂತರ ಭಕ್ತರ ನಡುವೆ ಬಹಳ ವಿಜೃಂಭಣೆಯಿಂದ ನೆರವೇರಿತು.

ಬ್ರಾಹ್ಮೀ ಮುಹೂರ್ತ 4 ಗಂಟೆಗೆ ಶ್ರೀ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರು ಆದಿ ಚುಂಚನ ಗಿರಿಯ ರಥ ಬೀದಿಯಲ್ಲಿ ಸರ್ವಾಲಂಕಾರಗೊಂಡಿದ್ದ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ಲಕ್ಷಾಂತರ ಭಕ್ತರ ಹರ್ಷೋದ್ಗಾರದ ನಡುವೆ ಮಹಾ ರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವದ ಅಂಗವಾಗಿ ಗುರುವಾರ ಇಡೀ ರಾತ್ರಿ ಶ್ರೀ ಕ್ಷೇತ್ರದಲ್ಲಿ ತಿರುಗಣಿ ಉತ್ಸವ ಸೇರಿದಂತೆ ನಾನಾ ಪೂಜಾ ಕೈಂಕರ್ಯಗಳು ನಡೆದವು. ಶ್ರೀ ಕ್ಷೇತ್ರದ ಶ್ರೀ ಗಂಗಾಧರೇಶ್ವರ ಸ್ವಾಮಿಯನ್ನು ಅಲಂಕೃತಗೊಂಡಿದ್ದ ರಥದಲ್ಲಿ ಕೂರಿಸಲಾಗಿತ್ತು. ರಥೋತ್ಸವಕ್ಕೆ ಚಾಲನೆ ನೀಡುತ್ತಿದ್ದಂತೆ ನೆರೆದಿದ್ದ ಲಕ್ಷಾಂತರ ಭಕ್ತರು ರಥವನ್ನು ಎಳೆದರು. ಮಂಗಳ ವಾದ್ಯದೊಂದಿಗೆ ರಥೋತ್ಸವ ಆರಂಭವಾಗುತ್ತಿದ್ದಂತೆ ಭಕ್ತರು ಹಣ್ಣು, ಜವನಗಳನ್ನು ಅರ್ಪಿಸಿ ಭಕ್ತಿ ಭಾವವನ್ನು ಮೆರೆದರು.

ರಥೋತ್ಸವಕ್ಕೆ ಚಾಲನೆ ಸಿಗುತ್ತಿದ್ದಂತೆ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರ ಅಡ್ಡ ಪಲ್ಲಕ್ಕಿ ಉತ್ಸವವೂ ಕೂಡ ಪ್ರಾರಂಭವಾಯಿತು. ಒಂದೆಡೆ ಭಕ್ತರು ರಥವನ್ನು ಎಳೆದು ಧನ್ಯರಾಗುತ್ತಿದ್ದರೆ ಇನ್ನೊಂದೆಡೆ ಸರ್ವಾಲಂಕಾರ ಭೂಷಿತರಾಗಿ ಚಿನ್ನದ ಕಿರೀಟವನ್ನು ಧರಿಸಿ ಪಲ್ಲಕ್ಕಿಯಲ್ಲಿ ಕುಳಿತು ಭಕ್ತಾದಿಗಳಿಗೆ ದರ್ಶನ ನೀಡುತ್ತಿದ್ದ ಶ್ರೀಗಳನ್ನು ನೋಡಿ ಕಣ್ತುಂಬಿಕೊಂಡರು. ಶ್ರೀಗಳು ಹಸನ್ಮುಖಿಯಾಗಿ ಎಲ್ಲರಿಗೂ ದರ್ಶನ ನೀಡಿದರು.

ರಥೋತ್ಸವ ಮತ್ತು ಅಡ್ಡ ಪಲ್ಲಕಿ ಉತ್ಸವ ರಥಬೀದಿಯಲ್ಲಿ ಸಂಚರಿಸಿ ರಥಬೀದಿ ದಕ್ಷಿಣ ದಿಕ್ಕಿನಲ್ಲಿರುವ ಗಣಪತಿ ದೇವಸ್ಥಾನದವರೆಗೆ ಚಲಿಸಿತು. ಶ್ರೀಗಣಪತಿಗೆ ಪೂಜೆ ಸಲ್ಲಿಸಿದ ನಂತರ ವಾಪಸ್ ರಥಬೀದಿಯಲ್ಲೇ ಬಂದ ರಥೋತ್ಸವ ಮೂಲ ಸ್ಥಾನದಲ್ಲಿ ನಿಂತಿತು. ಅಷ್ಟರಲ್ಲಾಗಲೇ ಬೆಳಕು ಮೂಡಿತ್ತು. ನೆರೆದಿದ್ದ ಲಕ್ಷಾಂತರ ಮಂದಿ ಭಕ್ತರ ನಡುವೆ ರಥೋತ್ಸವ ಬಹಳ ವಿಜೃಂಭಣೆಯಿಂದ ನೆರವೇರಿತು. ರಥೋತ್ಸವದ ಹಿನ್ನೆಲೆಯಲ್ಲಿ ಪೊಲೀಸ್ ಬಂದೋಬಸ್ತ್ ಅನ್ನು ಜಿಲ್ಲಾಡಳಿತ ಆಯೋಜಿಸಿತು.


ರಥೋತ್ಸವಕ್ಕೆ ಜನಸಾಗರ: ಆದಿ ಚುಂಚನಗಿರಿ ಜಾತ್ರಾ ಮಹೋತ್ಸವಕ್ಕೆ ನಾಡಿನ ವಿವಿಧೆಡೆಗಳಿಂದ ಲಕ್ಷಾಂತರ ಮಂದಿ ಭಕ್ತರು ಶ್ರೀಕ್ಷೇತ್ರಕ್ಕೆ ಆಗಮಿಸಿದ್ದರು.

ಅನ್ನಪ್ರಸಾದ ಕೇಂದ್ರಗಳಿಗೂ ಚಾಲನೆ: ರಥೋತ್ಸವಕ್ಕೆ ಆಗಮಿಸಿದ ಲಕ್ಷಾಂತರ ಭಕ್ತರಿಗೆ ಊಟಕ್ಕೆ ಯಾವುದೇ ತೊಂದರೆ ಆಗದಂತೆ ಗಿರಿಯ ಐದಾರು ಕಡೆ ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದು ಈ ಕೇಂದ್ರಗಳಿಗೆ ಶ್ರೀಗಳು ಅನ್ನಪ್ರಸಾದ ಕೇಂದ್ರಗಳಿಗೆ ಭೇಟಿ ನೀಡಿ ಚಾಲನೆ ನೀಡಿದರು.

ಪುಷ್ಕರಣಿಯಲ್ಲಿ ತೆಪ್ಪೋತ್ಸವ: ಆದಿಚುಂಚನಗಿರಿ ರಥೋತ್ಸವ ಮುನ್ನ ಗುರುವಾರ ರಾತ್ರಿ ಆದಿಚುಂಚನಗಿರಿಯ ಪುಷ್ಕರಣಿಯಲ್ಲಿ ತೆಪ್ಪೋತ್ಸವ ನಡೆಯಿತು. ಇದೇ ಸಂದರ್ಭದಲ್ಲಿ ಭೈರವೇಶ್ವರ ಸ್ವಾಮಿಯ ದಸರಿಘಟ್ಟದ ಶ್ರೀ ಚೌಡೇಶ್ವರಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದ್ದು, ಭೈರವಾಕ್ಯ ಶ್ರೀ ಬಾಲ ಗಂಗಾಧರನಾಥ ಸ್ವಾಮಿಗಳ ಪುತ್ಥಳಿಯನ್ನು ಇಟ್ಟು ಶ್ರೀ ನಿರ್ಮಾಲಾನಂದನಾಥ ಮಹಾ ಸ್ವಾಮಿಜಿ ಸೇರಿದಂತೆ ತೆಪ್ಪೋತ್ಸವದಲ್ಲಿ ಭಾಗಿಯಾದರು.

ಮಾ.21 ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಡಿಸಿ ಸೂಚನೆ


ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಡಿಸಿ ಕುಮಾರ್ ಮಾತನಾಡಿದರು.

ಮಂಡ್ಯ, ಮಾ.14– ಜಿಲ್ಲೆಯಲ್ಲಿ ಮಾ.21 ರಿಂದ ಏಪ್ರಿಲ್ 4 ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿದ್ದು, ಯಾವುದೇ ಲೋಪವಿಲ್ಲದೆ ಪಾರದರ್ಶಕವಾಗಿ ನಡೆಸಿ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪೂರ್ವಭಾವಿ ಸಿದ್ಧತಾ ಸಭೆ ನಡೆಸಿ ಮಾತನಾಡಿದರು. ಈ ಬಾರಿ ಒಟ್ಟು 20469 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಹೆಸರು ನೊಂದಾಯಿಸಿಕೊಂಡಿದ್ದಾರೆ. ಇವರಲ್ಲಿ 10661 ಗಂಡು ಮಕ್ಕಳು ಹಾಗೂ 9835 ಹೆಣ್ಣು ಮಕ್ಕಳು ಪರೀಕ್ಷೆ ಬರೆಯಲಿದ್ದಾರೆ ಎಂದರು.

62 ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಪ್ರತಿ ಪರೀಕ್ಷಾ ಕೇಂದ್ರಕ್ಕೆ ಓರ್ವ ಮುಖ್ಯ ಶಿಕ್ಷಕರನ್ನು ಪರೀಕ್ಷಾ ಅಧೀಕ್ಷಕರನ್ನು ಹಾಗೂ ಪೇಪರ್ ಕಸ್ಟೋಡಿಯನ್‌ಗಳನ್ನು , ಪ್ರತಿ ಬ್ಲಾಕ್‌ಗೆ ಒಬ್ಬರೂ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದರು.

ಪೂರ್ಣ ಪರೀಕ್ಷೆ ವೆಬ್ ಕ್ಯಾಸ್ಟಿಂಗ್ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಪ್ರಕ್ರಿಯೆ ಪಾರದರ್ಶಕವಾಗಿ ನಡೆಸಲು ಪರೀಕ್ಷೆ ನಡೆಯುವ ಎಲ್ಲಾ ಕೊಠಡಿಗಳಿಗೆ ಸಿಸಿ ಟಿ.ವಿ ಅಳವಡಿಸಲಾಗುವುದು. ಪರೀಕ್ಷೆಯ ಚಲನ–ವಲನಗಳನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತೆರೆಯಲಾಗುವ ಕಂಟ್ರೋಲ್ ರೂಂನಲ್ಲಿ ಅಧಿಕಾರಿಗಳನ್ನು ನೇಮಿಸಿ ವೀಕ್ಷಿಸಲಾಗುವುದು ಎಂದರು.

ಯಾವುದೇ ವಿದ್ಯಾರ್ಥಿ ನೆಲದ ಮೇಲೆ ಕುಳಿತು ಪರೀಕ್ಷೆ ಬರೆಯಬಾರದು. ಪರೀಕ್ಷೆ ಅಚ್ಚುಕಟ್ಟಾಗಿ ನಡೆಸಲು ಉತ್ತಮ ಬೆಂಚ್ ಮತ್ತು ಡೆಸ್ಕ್ ಇರುವುದನ್ನು ಖಾತ್ರಿ ಪಡಿಸಿಕೊಳ್ಳಿ, ಮಕ್ಕಳಿಗೆ ಕುಡಿಯುವ ನೀರು ಹಾಗೂ ಶೌಚಾಲಯಗಳ ವ್ಯವಸ್ಥೆ ಪರೀಕ್ಷಿಸಿಕೊಳ್ಳಿ ಎಂದರು. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಬಳಕೆ ಕಡ್ಡಾಯವಾಗಿ ನಿಷೇಧಿಸಲಾಗಿದೆ. ಈ ಹಿನ್ನಲೆಯಲ್ಲಿ ಶಿಕ್ಷಕರು ಸಹ ಮೊಬೈಲ್‌ನ್ನು ಪರೀಕ್ಷಾ ಕೊಠಡಿಗಳಿಗೆ ತೆಗೆದು ಕೊಂಡು ಹೋಗಬಾರದು ಎಂದರು.

ಸಭೆಯಲ್ಲಿ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಂಗಾಧರ ಸ್ವಾಮಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಶಿವ ರಾಮೇಗೌಡ, ಡಯಟ್ ಪ್ರಾಂಶುಪಾಲ ಪುರುಷೋತ್ತಮ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸ್ಕೂಟಿಗೆ ಬೊಲೇರೋ ವಾಹನ ಡಿಕ್ಕಿ: ತಾಯಿ ಸಾವು, ಮಕ್ಕಳಿಬ್ಬರು ಗಂಭೀರ

ಮಳವಳ್ಳಿ, ಮಾ.14– ವೇಗವಾಗಿ ಬರುತ್ತಿದ್ದ ಬೊಲೇರೋ ವಾಹನ ಸ್ಕೂಟಿಗೆ ಡಿಕ್ಕಿ ಹೊಡೆದ ಪರಿಣಾಮ ಮಹಿಳೆಯೊಬ್ಬರು ಸ್ಥಳದಲ್ಲೇ ಮೃತಪಟ್ಟು ಆಕೆಯ ಇಬ್ಬರು ಮಕ್ಕಳು ತೀವ್ರವಾಗಿ ಗಾಯಗೊಂಡ ಘಟನೆ ಮಳವಳ್ಳಿ ಪಟ್ಟಣದ ಹೊರವಲಯದ ಕೊಳ್ಳೇಗಾಲ ರಸ್ತೆಯ ಕಣಿಗಲ್ ಹಳ್ಳದ ಬಳಿ ಸಂಭವಿಸಿದೆ.

ತಾಲೂಕಿನ ಕುಂದೂರು ಗ್ರಾಮದ ವಾಸಿ ಇಒ ಪ್ರಸಾದ್ ಅವರ ಪತ್ನಿಯಾದ ಶಿಲ್ಪಾ (39)ಎಂಬುವರೇ ಮೃತಪಟ್ಟ ದುರ್ದೈವಿಯಾಗಿದ್ದು ಇವರ ಮಕ್ಕಳಾದ 7 ವರ್ಷದ ಅನನ್ಯ ಹಾಗೂ 5 ವರ್ಷದ ಮಾನ್ಯ ಗಾಯಗೊಂಡವರಾಗಿದ್ದಾರೆ.

ಪಟ್ಟಣದ ರೋಟರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳನ್ನು ಕರೆದು ಕೊಂಡು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ತಮ್ಮ ಸ್ಕೂಟಿಯಲ್ಲಿ ಕುಂದೂರು ಕಡೆಗೆ ಹೊರಟಿದ್ದ ಇವರಿಗೆ ಮುಟ್ಟನಹಳ್ಳಿ ಕಡೆಯಿಂದ ಎಳನೀರು ತುಂಬಿಕೊಂಡು ವೇಗವಾಗಿ ಬರುತ್ತಿದ್ದ ಬೊಲೇರೋ ವಾಹನ ತಿರುವಿನಲ್ಲಿ ಡಿಕ್ಕಿ ಹೊಡೆಯಿತು ಎನ್ನಲಾಗಿದೆ. ತಲೆಗೆ ತೀವ್ರ ಪೆಟ್ಟು ಬಿದ್ದು ಶಿಲ್ಪ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ತೀವ್ರವಾಗಿ ಗಾಯಗೊಂಡಿರುವ ಅನನ್ಯ ಹಾಗೂ ಮಾನ್ಯ ಅವರಿಗೆ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ಸಾಗಿಸಲಾಗಿದೆ.

ಶವವನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆ ಶವಾಗಾರಕ್ಕೆ ಸಾಗಿಸಲಾಗಿದ್ದು, ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇಂದು, ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮಾ.14– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಮಾ.15ಮತ್ತು 16ರ ಅಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಮಾ.16ರಂದು ಹಿರಿಕೆರೆ, ಕಾಳಿಕಾಂಭ ಕಾಲೋನಿ, ಚಂದಕವಾಡಿ, ರೇಚಂಬಳ್ಳಿ, ಸರಗೂರುಮೋಳೆ, ಅಯ್ಯನಪುರ, ಮಲ್ಲೇದೇವನ ಹಳ್ಳಿ, ನವೋದಯ, ಹೊಂಡರಬಾಳು, ಜ್ಯೋತಿಗೌಡನಪುರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಇದೇ ರೀತಿ ಮಾ.15ರಂದು ಹೊಂಗನೂರು, ಮಸಣಾಪುರ, ಕಳ್ಳೀಪುರ, ಗಂಗವಾಡಿ, ಇರಸವಾಡಿ, ಸುತ್ತೂರು, ಚಾಟಿಪುರ, ರೇಚಂಬಳ್ಳಿ, ಹೆಚ್. ಮೂಕಳ್ಳಿ, ಬೂದಂಬಳ್ಳಿ, ಬೂದಂಬಳ್ಳಿ ಮೋಳೆ, ಹೊಮ್ಮ, ಗೂಳಿಪುರ, ಜ್ಯೋತಿಗೌಡನಪುರ, ನಲ್ಲೂರು ಮೋಳೆ, ನಂಜರಾಜಪುರ, ಕುರುಬರ ಹುಂಡಿ, ಕಾಗಲವಾಡಿ ಮೋಳೆ, ಅಮ್ಮನಪುರ ಹಾಗೂ ಕೋಟಂಬಳ್ಳಿ ಗ್ರಾಮಗಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ಆರಂಭ

ಚಾಮರಾಜನಗರ, ಮಾ.14– ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯಲ್ಲಿ ತೆರೆಯಲಾಗಿರುವ ರಾಗಿ ಖರೀದಿ ಕೇಂದ್ರಗಳಲ್ಲಿ ಸರ್ಕಾರದ ಮಾರ್ಗಸೂಚಿಗಳ ಅನುಸಾರ ಮಾ.14 ರಿಂದ ರಾಗಿ ಖರೀದಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

2024–25ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ಮಾಡಲು ಸರ್ಕಾರ ಆದೇಶಿಸಿದ್ದು, ಅದರಂತೆ ಚಾಮರಾಜನಗರ, ಕೊಳ್ಳೇಗಾಲ, ಹನೂರಿನ ಎಪಿಎಂಸಿ ಆವರಣದಲ್ಲಿ ರಾಗಿ ಖರೀದಿ ಕೇಂದ್ರಗಳನ್ನು ತೆರೆದು ರಾಗಿ ಬೆಳೆದಿರುವ ರೈತರಿಂದ ನಿಯಮಾನುಸಾರ ಅಗತ್ಯ ದಾಖಲೆಗಳನ್ನು ಪಡೆದು ನೊಂದಾಯಿಸಿಕೊಳ್ಳಲಾಗಿದೆ.

ಎಲ್ಲಾ ಖರೀದಿ ಕೇಂದ್ರಗಳಲ್ಲಿ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಯೋಜನೆಯಡಿ ನೊಂದಣಿ ಕೇಂದ್ರಗಳಲ್ಲಿ ಈಗಾಗಲೇ ರಾಗಿ ಮಾರಾಟಕ್ಕೆ ನೊಂದಾಯಿಸಿಕೊಂಡಿರುವ ರೈತರು ಸಂಬಂಧಪಟ್ಟ ಖರೀದಿ ಕೇಂದ್ರಗಳಿಗೆ ರಾಗಿಯನ್ನು ನೀಡಬಹುದಾಗಿದೆ.

ರಾಗಿ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಖರೀದಿ ಏಜೆನ್ಸಿಯಾದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತ ಚಾಮರಾಜನಗರ ಶಾಖಾ ವ್ಯವಸ್ಥಾಪಕರಾದ ರವಿ (ಮೊ.ಸಂ 9845661618, 9449864455) ಇವರನ್ನು ಸಂಪರ್ಕಿಸುವಂತೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಯೋಗಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾನಸಿಕ ಅಸ್ವಸ್ಥೆಯನ್ನು ರಕ್ಷಿಸಿದ ಅಗ್ನಿಶಾಮಕ ಅಧಿಕಾರಿಗಳು



ಕೊಳ್ಳೇಗಾಲದ ರಂಗನಾಥನ ಕೆರೆಯೊಳಗಿಳಿದಿದ್ದ ಮಾನಸಿಕ ಅಸ್ವಸ್ಥೆಯನ್ನು ಅಗ್ನಿ ಶಾಮಕ ತಂಡದ ಸಿಬ್ಬಂದಿಗಳು ಕರೆತರುತ್ತಿರುವುದು.

ಕೊಳ್ಳೇಗಾಲ, ಮಾ.14– ಪಟ್ಟಣದ ಚಿಕ್ಕ ರಂಗನಾಥ ಕೆರೆಗೆ ಇಳಿದು ಆತ್ಮಹತ್ಯೆಗೆ ಮುಂದಾಗಿದ್ದ ಮಾನಸಿಕ ಅಸ್ವಸ್ಥೆಯನ್ನು ಅಗ್ನಿ ಶಾಮಕ ದಳದ ಠಾಣಾಧಿಕಾರಿಗಳು, ಸಿಬ್ಬಂದಿಗಳು ರಕ್ಷಿಸಿದ್ದಾರೆ.

ಚಾ.ನಗರ ತಾಲೂಕಿನ ಅಮ್ಮನಪುರ ಗ್ರಾಮದ ವಾಸಿ ಶೇಷು ಎಂಬುವರ ಪತ್ನಿ ಪುಷ್ಪ(27) ಅವರನ್ನು ರಕ್ಷಿಸಲಾಗಿದೆ. ಈಕೆ ಕಳೆದ ಎಂಟು ದಿನಗಳ ಹಿಂದೆ ಅಮ್ಮನಪುರ ಗ್ರಾಮದಿಂದ ಹಲವಾರು ಗ್ರಾಮ ಸುತ್ತಿ, ನಡೆದುಕೊಂಡೆ ಕೊಳ್ಳೇಗಾಲಕ್ಕೆ ಬಂದಿದ್ದರು ಎನ್ನಲಾಗಿದ್ದು, ಶುಕ್ರವಾರ ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಕೆರೆಗೆ ಇಳಿದು ಆತ್ಮಹತ್ಯೆಗೆ ಯತ್ನಿಸುತ್ತಿರುವುದನ್ನು ಕಂಡ ಸ್ಥಳೀಯರು ತಕ್ಷಣ ಪೊಲೀಸರಿಗೆ ಕರೆ ಮಾಡಿ ಬಳಿಕ ಮಾಹಿತಿ ತಿಳಿಸಿದರು.

ಸ್ಥಳಕ್ಕೆ ಆಗಮಿಸಿದ್ದ ಪೊಲೀಸರು ಈಕೆಯ ಹುಚ್ಚಾಟವನ್ನು ಗಮನಿಸಿ ಅಗ್ನಿ ಶಾಮಕ ದಳದವರನ್ನು ಕರೆಯಿಸಿ ನೀರಿನಲ್ಲಿದ್ದ ಮಾನಸಿಕ ಅಸ್ವಸ್ಥಳನ್ನು ಮೇಲೆಕ್ಕೆ ಎತ್ತಿ ಬಳಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಿದರು. ಬಳಿಕ ಪೊಲೀಸರು ಈಕೆಯ ತಾಯಿ ರಾಜಮ್ಮ ಹಾಗೂ ಈಕೆಯ ಗಂಡನನ್ನು ಕರೆಸಿ ಪುಷ್ಪಳ ಪೂರ್ಣ ಮಾಹಿತಿಯನ್ನು ಪಡೆದು ಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ

ಕಾಡ್ಗಿಚ್ಚಿನಿಂದ ಗವಿರಾಯ ಬೆಟ್ಟದಲ್ಲಿ ಬೆಂಕಿ 25 ಎಕರೆ ಅರಣ್ಯ ನಾಶ


ಗವಿರಾಯಸ್ವಾಮಿ ಬೆಟ್ಟದಲ್ಲಿ ಬಿದ್ದಿರುವ ಬೆಂಕಿಯನ್ನು ನಂದಿಸುತ್ತಿರುವುದು.

ಕೊಳ್ಳೇಗಾಲ,ಮಾ.14– ತಾಲೂಕಿನ ಸತ್ತೇಗಾಲ ಹ್ಯಾಂಡ್ ಪೋಸ್ಟ್ ಬಳಿಯಿರುವ ಗವಿರಾಯಸ್ವಾಮಿ ಬೆಟ್ಟದಲ್ಲಿ ಕಾಡ್ಗಿಚ್ಚಿನಿಂದಾಗಿ ಸುಮಾರು 25 ಎಕರೆಯಷ್ಟು ಅರಣ್ಯ ಪ್ರದೇಶ ನಾಶವಾಗಿರುವ ಘಟನೆ ಜರುಗಿದೆ.

ಗುರುವಾರ ಗವಿರಾಯಸ್ವಾಮಿ ಬೆಟ್ಟದಲ್ಲಿ ನಡೆದ ರಥೋತ್ಸವದ ವೇಳೆ ಆಗಮಿಸಿದ್ದ ಭಕ್ತರಿಂದ ಈ ಅನಾಹುತ ಉಂಟಾಗಿದೆ ಎನ್ನಲಾಗಿದೆ. ವಿಷಯ ತಿಳಿದ ಅರಣ್ಯಾಧಿಕಾರಿಗಳು ಸ್ಥಳಕ್ಕೆ ತೆರಳಿ ಹೊತ್ತಿ ಉರಿಯುತ್ತಿದ್ದ ಬೆಂಕಿಯನ್ನು ನಂದಿಸಲು ಹರಸಾಹಸ ಪಡುವಂತಾಯಿತು.

ಬೆಂಕಿಯ ಜ್ವಾಲೆ ಹೆಚ್ಚಾಗಿದ್ದನ್ನು ಕಂಡು ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿಗಳನ್ನು ಕರೆಯಿಸಿ ಸಂಪೂರ್ಣವಾಗಿ ನಂದಿಸಿದರು. ಈ ದುರ್ಘಟನೆಯಿಂದ ಸುಮಾರು 25 ಎಕರೆಯಷ್ಟು ಅರಣ್ಯ ಸಂಪತ್ತು ನಾಶವಾಗಿದೆ.

ಕೆಎಸ್‌ಆರ್‌ಟಿಸಿಯಿಂದ 10 ಲಕ್ಷ ಪರಿಹಾರ ವಿತರಣೆ


ಗೂಡ್ಸ್ ವಾಹನ ಡಿಕ್ಕಿಯಿಂದ ಬಸ್ ಒಳಗಿದ್ದ ಮಹಿಳೆಯ ರುಂಡ ಕತ್ತರಿಸಿ ಮೃತಪಟ್ಟ ಕುಟುಂಬಕ್ಕೆ ಸಂಸ್ಥೆಯ ಅಧಿಕಾರಿ ಅಶೋಕ್‌ಕುಮಾರ್ 10 ಲಕ್ಷ ಪರಿಹಾರ ನೀಡಿದರು.

ಚಾಮರಾಜನಗರ: ಗುಂಡ್ಲುಪೇಟೆಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲೆ ಹೋಗುವಾಗ ಎದುರಿಗೆ ಬಂದ ಗೂಡ್ಸ್ ವಾಹನ ಡಿಕ್ಕಿಯಿಂದ ಬಸ್ ಒಳಗಿದ್ದ ಮಹಿಳೆಯ ರುಂಡ ಕತ್ತರಿಸಿ ಮೃತಪಟ್ಟ ಕುಟುಂಬಕ್ಕೆ ಸಂಸ್ಥೆಯ ಅಧಿಕಾರಿ ಅಶೋಕ್‌ಕುಮಾರ್ 10 ಲಕ್ಷ ಪರಿಹಾರ ನೀಡಿದ್ದಾರೆ.

ಮೃತಪಟ್ಟ ಮಹಿಳೆ ಗುಂಡ್ಲುಪೇಟೆ ತಾಲೂಕಿನ ಹಾಲನಹಳ್ಳಿ ಗ್ರಾಮದ ಶಿವಲಿಂಗಮ್ಮ. ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ನಂಜನಗೂಡು ಮಾರ್ಗವಾಗಿ ಗುಂಡ್ಲಪೇಟೆಗೆ ಹೋಗುವ ವೇಳೆ ಕಡುಬಿನ ಕಟ್ಟೆ ಹತ್ತಿರ ಕಾರನ್ನು ಓವರ್‌ಟೇಕ್ ಮಾಡಲು ಹೋಗಿ ಬಸ್ ರಸ್ತೆಯ ಮಧ್ಯಭಾಗಕ್ಕೆ ಬಂದಿದೆ. ಈ ವೇಳೆ ಶಿವಲಿಂಗಮ್ಮ ತಲೆಯನ್ನು ಕಿಟಕಿಯಿಂದ ಹೊರಹಾಕಿದ ಪರಿಣಾಮ ಎದುರಿಗೆ ಬಂದು ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದು ರುಂಡವು ತುಂಡರಿಸಿತ್ತು.

ಈ ಸಂಬಂಧ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ವಿಭಾಗದ ನಿಯಂತ್ರಣಾಧಿಕಾರಿ ಅಶೋಕ್‌ಕುಮಾರ್ ಮೃತರ ಮಗ ಕಾರ್ತಿಕ್ ಅವರಿಗೆ 10 ಲಕ್ಷ ರೂ.ಗಳ ಚೆಕ್ ಅನ್ನು ಪರಿಹಾರವಾಗಿ ನೀಡಿದ್ದಾರೆ.

ಈ ಸಂದರ್ಭದಲ್ಲಿ ವಿಭಾಗೀಂಯ ಸಂಚಲನಾಧಿಕಾರಿ ಎಸ್.ಎಸ್. ದಶರಥ, ಸಹಾಯಕ ಕಾನೂನು ಅಧಿಕಾರಿ ಶಿವಣ್ಣ, ಸಹಾಯಕ ಲೆಕ್ಕಾಧಿಕಾರಿ ರುದ್ರಮುನಿ, ಭದ್ರತಾ ನಿರೀಕ್ಷಕ ನಾಗೇಂದ್ರ ಇದ್ದರು.

ಜಾನಪದ ಪರಿಷತ್ ತಾಲೂಕು ಅಧ್ಯಕ್ಷರಾಗಿ ಕೈಲಾಸಮೂರ್ತಿ ನೇಮಕ


ಕೈಲಾಸಮೂರ್ತಿ

ಕೊಳ್ಳೇಗಾಲ, ಮಾ.14– ತಾಲೂಕಿನ ಸಿದ್ದಯ್ಯನಪುರ ಗ್ರಾಮದ ಕೈಲಾಸ ಮೂರ್ತಿ ಅವರನ್ನು ಕನ್ನಡ ಜಾನಪದ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷರನ್ನಾಗಿ ರಾಜ್ಯಾಧ್ಯಕ್ಷ ಡಾ.ಎಸ್.ಬಾಲಾಜಿ ನೇಮಿಸಿ ಆದೇಶಿಸಿದ್ದಾರೆ.

ಜಾನಪದ ಕಲೆ ಪ್ರೋತ್ಸಾಹ, ಕಲಾವಿದರ ಗುರುತಿಸುವಿಕೆ, ಸಂಘಟನೆ, ಕಾರ್ಯಕ್ರಮ ಆಯೋಜನೆಗಳ ಮೂಲಕ ಗ್ರಾಮ, ನಗರ ಮಟ್ಟದಲ್ಲಿ ಸಮರ್ಪಕ ರೀತಿ ಕಾರ್ಯ ನಿರ್ವಹಿಸಿ ಪರಿಷತ್ತಿಗೆ ಉತ್ತಮ ಹೆಸರು ತರುವಂತೆ ರಾಜ್ಯಾಧ್ಯಕ್ಷರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಎಂಪಿ ಟಿಕೆಟ್ ಕಳೆದುಕೊಂಡು ಒಂದು ವರ್ಷವಾಯಿತು...!

ಮಾಜಿ ಸಂಸದ ಪ್ರತಾಪ್ ಸಿಂಹ ನೋವಿನ ಟ್ವೀಟ್



ಮೈಸೂರು, ಮಾ.14– ತಮ್ಮ ಮಾತು ಹಾಗೂ ಕೆಲಸದ ಕಾರಣದಿಂದಾಗಿಯೇ ಸುದ್ದಿಯಲ್ಲಿರುವ ಮೈಸೂರು–ಕೊಡಗು ಮಾಜಿ ಸಂಸದ ಪ್ರತಾಪ್ ಸಿಂಹ ಶುಕ್ರವಾರ ನೋವಿನ ಟ್ವೀಟ್ ಮಾಡಿದ್ದಾರೆ. ಎಂಪಿ ಟಿಕೆಟ್ ಕೈ ತಪ್ಪಿದ ಬೇಸರ ಒಂದು ವರ್ಷವಾದರೂ ಕಳೆದಿಲ್ಲ ಎಂಬುದು ಅವರ ಟ್ವೀಟ್‌ನಲ್ಲಿಯೇ ಅರ್ಥವಾಗುವಂತಿದೆ. ಆದರೆ, ಯಾವುದೇ ಹಿಂಜರಿಕೆ ಇಲ್ಲದೆ ಈ ವಿಚಾರವನ್ನು ಸೋಶಿಯಲ್ ಮೀಡಿಯಾದಲ್ಲಿ ಬರೆದುಕೊಂಡಿರುವ ಪ್ರತಾಪ್ ಸಿಂಹ ಅವರಿಗೆ ಅಭಿಮಾನಿಗಳು ಮಾತ್ರವಲ್ಲದೆ ವಿರೋಧಿಗಳು ಕೂಡ ಸಮಾಧಾನ ಹೇಳಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯ ವೇಳೆ ಮೈಸೂರು–ಕೊಡಗು ಕ್ಷೇತ್ರದ ಹಾಲಿ ಸಂಸದರಾಗಿ ಉತ್ತಮವಾಗಿಯೇ ಕೆಲಸ ಮಾಡಿದ್ದ ಪ್ರತಾಪ್ ಸಿಂಹ ಅವರ ಬದಲಿಗೆ ಬಿಜೆಪಿ ಹೈಕಮಾಂಡ್ ರಾಜಮನೆತನದ ಯದುವೀರ್ ಒಡೆಯರ್‌ಗೆ ಟಿಕೆಟ್ ನೀಡಿತ್ತು.

ಎಂಪಿ ಟಿಕೆಟ್ ಕಳೆದುಕೊಂಡು ಇವತ್ತಿಗೆ ಒಂದು ವರ್ಷವಾಯಿತು. ಆದರೆ ಕಾರ್ಯಕರ್ತರ ಪ್ರೀತಿ, ಜನರ ಆಶೀರ್ವಾದ ಇವತ್ತಿಗೂ ಹಾಗೇ ಇದೆ ಮತ್ತು ನೀವು ಕೊಟ್ಟಿರುವ ಈ ಶಕ್ತಿಯಿಂದಲೇ ಇವತ್ತಿಗೂ ಸೈದ್ಧಾಂತಿಕ ಕೆಲಸ ಮತ್ತು ಹೋರಾಟವನ್ನು 8 ಎಫ್‌ಐಆರ್ ಹಾಕಿಸಿಕೊಂಡರೂ ಮುಂದುವರಿಸುತ್ತಿದ್ದೇನೆ. ನಿಮ್ಮ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದ ಹೀಗೇ ನಿರಂತರವಾಗಿರಲಿ' ಎಂದು ಪ್ರತಾಪ್ ಸಿಂಹ ಬರೆದುಕೊಂಡಿದ್ದಾರೆ.

ಇದಕ್ಕೆ ಕಾಮೆಂಟ್ ಮಾಡಿರುವ ಬಿಜೆಪಿ ಕಾರ್ಯಕರ್ತರೊಬ್ಬರು, 'ನೀವು 8 ಎಫ್‌ಐಆರ್ ಹಾಕಿಸಿಕೊಂಡಿದ್ದಿರಾ, ನಾನು ಕಳೆದ 25 ವರ್ಷದಿಂದ ಸೈದ್ಧಾಂತಿಕ ಹೋರಾಟವನ್ನು ಮಾಡುತ್ತಾ ಬಂದಿದ್ದೇನೆ. ನನಗೆ ಜಮಖಂಡಿ ಯುವ ಮೋರ್ಚಾ ಜವಾಬ್ದಾರಿ ಬಿಟ್ಟರೆ ಮತ್ತೆಯಾವುದೇ ಜವಾಬ್ದಾರಿ ಸಿಕ್ಕಿಲ್ಲ. ನಾನು ಒಟ್ಟು 17 ಎಫ್‌ಐಆರ್ ಹಾಕಿಸಿಕೊಂಡರೂ ಪರಿವಾರದ ಕಾರ್ಯ ಮುಂದುವರಿಸುತ್ತಿದ್ದೇನೆ' ಎಂದು ಬರೆದುಕೊಂಡಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಪ್ರತಾಪ್ ಸಿಂಹ, 'ಎಂಪಿ ಆಗಿದ್ದಾಗ ಎಫ್‌ಐಆರ್‌ಗಳು ಮಾತ್ರವಲ್ಲ ಹುಣಸೂರು ಹನುಮಾನ್ ಜಯಂತಿ ಸಂಬಂಧ 2 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು' ಎಂದು ಬರೆದಿದ್ದಾರೆ.

'ಹೋರಾಟ ಮಾಡಿ ಅಂತ ನಿಮಗೆ ಬೊಮ್ಮಾಯಿ ಹೇಳಿದ್ನಾ? ಏನಾದರೂ ಆದರೆ ಕಠಿಣ ಕ್ರಮ ತಕೋತೀನಿ ಅಂತ ಹೇಳಿದ್ನಾ? ಗುರೂಜಿ ನೀವು ಮೊದಲು ನಿಮ್ ಫ್ಯಾಮಿಲಿಗೆ ಪ್ರಾಮುಖ್ಯತೆ ಕೊಡಿ. ಈ ಬಿಜೆಪಿನಾ ನಂಬಿಕೊಂಡು ಹೋರಾಡಿದ್ರೆ ಸ್ಮಶಾನದಲ್ಲಿ ಜಾಗಾನು ಇರಲ್ಲ' ಎಂದು ಮತ್ತೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕೆಲಸ ಮಾಡೋರಿಗೆ mla,mp ಆಗಬೇಕು ಅಂತೇನೂ ಇಲ್ಲ, ಚಕ್ರವರ್ತಿ ಸೂಲಿಬೆಲೆ ಹುಡ್ಕೊಂಡು ಕೆಲಸ ಮಾಡುತ್ತಾರೆ, ನೀವೂ ಮಾಡಿ ಮುಂದೆ ಒಳ್ಳೆಯ ದಿನಗಳು ಬರ್ತವೆ. ಆದ್ರೆ ಯತ್ನಾಳ್, ಜಾರಕಿಹೊಳಿ ಇಂತಹವರ ತರ ಕಚಡಾ ರಾಜಕೀಯ ಮಾಡಬೇಡಿ. ಅವ್ರಿಗೆ ಬೇನಾಮಿ ಹಣ ಇದೆ ಹಣ ಬಲಕ್ಕಿಂತ ಜನ ಬಲಬೇಕು. ಉತ್ತರದ ರಾಜಕೀಯ ಬೇರೆ, ದಕ್ಷಿಣದ ರಾಜಕೀಯ ಬೇರೆ' ಎಂದು ಧೈರ್ಯ ತುಂಬಿದ್ದಾರೆ.

'ಎಫ್‌ಐಆರ್ ಅನ್ನುವುದು ಒಳ್ಳೆಯ ಬಿರುದಲ್ಲ, ಹಾಗೆಯೇ ಎಫ್‌ಐಆರ್ ಬಿದ್ದ ಕೂಡಲೇ ವ್ಯಕ್ತಿ ಕೆಟ್ಟವ ಅಂತಲ್ಲ! ಅಂದ ಹಾಗೆ ವೈಯಕ್ತಿಕವಾಗಿ ನೋಡುವುದಾದರೆ ನಿಮಗೆ ಸ್ವಲ್ಪ ದೃಢತೆಯಲ್ಲಿ ಕೊರತೆಯಿದ್ದರೂ ಕೂಡ ಜನಪ್ರತಿನಿಧಿಯಾಗುವ ಅರ್ಹತೆ ಇದೆ. ಸೈದ್ಧಾಂತಿಕವಾಗಿ ನಿಮ್ಮ ವಿರೋಧಿಯಾದರೂ ವೈಯುಕ್ತಿಕವಾಗಿ ನಿಮಗೆ ಉತ್ತಮ ಭವಿಷ್ಯವಿದೆ ಅನ್ನುವುದು ನನ್ನ ನಂಬಿಕೆ' ಎಂದು ಪ್ರತಾಪ್ ಸಿಂಹರಿಗೆ ಕೆಲವರು ರಾಜಕೀಯ ಬೆಂಬಲ ಸೂಚಿಸಿದ್ದಾರೆ.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ವಿಜೃಂಭಣೆಯ ನೂರಾಳೇಶ್ವರಸ್ವಾಮಿ ಜಾತ್ರಾ ಮಹೋತ್ಸವ



ಹುಸ್ಕೂರುಹಾಡಿಯಲ್ಲಿ ನೂರಾಳೇಶ್ವರಸ್ವಾಮಿ ಜಾತ್ರಾ ಮಹೋತ್ಸವ ನಡೆಯಿತು.

ಸರಗೂರು, ಮಾ.14– ತಾಲೂಕಿನ ಹುಸ್ಕೂರು ಹಾಡಿಯಲ್ಲಿ ನೂರಾಳೇಶ್ವರಸ್ವಾಮಿ ಜಾತ್ರಾ ಮಹೋತ್ಸವ, ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.

ಜಾತ್ರೆ ಅಂಗವಾಗಿ ನುಗು ಜಲಾಶಯದ ಹಿನ್ನೀರಿನಲ್ಲಿರುವ ದೇವಸ್ಥಾನವನ್ನು ವಿಶೇಷವಾಗಿ ಅಲಂಕಾರ ಮಾಡಲಾಗಿತ್ತು. ಗುರುವಾರ ಬೆಳಗ್ಗೆ ನುಗು ಜಲಾಶಯಕ್ಕೆ ದೇವರನ್ನು ಹೊಯ್ದು ದೇವರಿಗೆ ಗಂಗಾಸ್ನಾನ ಮಾಡಿಸಿ, ದೇವಸ್ಥಾನದ ಬಳಿಗೆ ಕರೆ ತರಲಾಯಿತು. ಬಾಯಿ ಬೀಗ ಸೇವೆ, ಸತ್ತಿಗೆ ಸೂರಿಪಾನಿ, ವಾದ್ಯಗೋಷ್ಠಿಗಳು ಮೊಳಗಿದವು. ದಾರಿಯುದ್ದಕ್ಕೂ ಭಕ್ತರು ದೇವರಿಗೆ ನಮಿಸಿ, ಕತ್ತಿ ಹಿಡಿದು ಭಕ್ತಿಭಾವ ಮೆರೆದರು. ಮಹಿಳೆಯರು, ಮಕ್ಕಳು ಬಾಯಿ ಬೀಗ ಸೇವೆ ಮಾಡಿ ಹರಕೆ ತೀರಿಸಿದರು. ದೇವಸ್ಥಾನದ ಮುಂಭಾಗ ಹಾಕಲಾಗಿದ್ದ ಕೊಂಡೋತ್ಸವಕ್ಕೆ ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು. ನಂತರ ಭಕ್ತರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ದರ್ಶನ ಪಡೆದು ಪುನೀತರಾದರು. ಈ ವೇಳೆ ಹುಸ್ಕೂರು ಹಾಡಿ, ದಡದಹಳ್ಳಿ, ಹಳೆಯೂರು, ಬೆದ್ದಲಪುರ, ಹೊಸಹೆಗ್ಗುಡಿಲು, ಹಲಸೂರು, ಹೊಸ ಬಿರ್ವಾಳ್ ಸೇರಿದಂತೆ ಅಕ್ಕಪಕ್ಕದ ಗ್ರಾಮಸ್ಥರು ಹಾಜರಿದ್ದರು. ಸರಗೂರು ಠಾಣಾ ಎಸ್ಐ ಕಿರಣ್, ಎಎಸ್ಐ ಕೃಷ್ಣಕುಮಾರ್, ಸಿಬ್ಬಂದಿಗಳಾದ ಸತೀಶ್, ಸುರೇಶ್, ಇಮ್ರಾನ್ ಅಹಮದ್, ಅನಂದ್, ಶಿವಕುಮಾರ್ ಸೇರಿದಂತೆ ಇನ್ನಿತರರು ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದರು.

ಚಾಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ಸುನೀತಾ ವೀರಪ್ಪಗೌಡರ ಬಣ ಜಯಭೇರಿ

ಹನುಮನಾಳು ಸಿದ್ದೇಗೌಡರ ಬಣಕ್ಕೆ ಒಂದೂ ಸ್ಥಾನವಿಲ್ಲ!



ಚುನಾವಣೆಯಲ್ಲಿ ಗೆಲುವು ಸಾಧಿಸಿದ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡರ ಬಣದ ಸದಸ್ಯರು ವಿಜಯೋತ್ಸವ ಆಚರಿಸಿದರು.

ತಿ.ನರಸೀಪುರ, ಮಾ.14– ತಾಲೂಕಿನ ಚಾಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡರ ಬಣ ಭರ್ಜರಿ ಜಯ ಸಾಧಿಸಿದ್ದು, ಹನುಮನಾಳು ಸಿದ್ದೇಗೌಡರ ನೇತೃತ್ವದ ಬಣ ಒಂದೇ ಒಂದು ಸ್ಥಾನ ಗೆಲ್ಲದೇ ತೀವ್ರ ಮುಖಭಂಗ ಅನುಭವಿಸಿದೆ.

ಕಳೆದ ತಿಂಗಳು ಸಂಘದ ಕಚೇರಿಯಲ್ಲಿ ನಿರ್ದೇಶಕರ ಆಯ್ಕೆಗಾಗಿ ನಡೆದ ಚುನಾವಣೆಯ ಮತ ಎಣಿಕೆ ಇಂದು ನಡೆದು ಸಹಕಾರ ಸಂಘದ 12 ನಿರ್ದೇಶಕರ ಫಲಿತಾಂಶ ಪ್ರಕಟಿಸಲಾಯಿತು. ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡರ ಬಣದಿಂದ ಸ್ಪರ್ಧಿಸಿದ್ದ ಎಲ್ಲಾ 12 ಸದಸ್ಯರು ಭರ್ಜರಿ ಜಯಗಳಿಸಿದರೆ, ಪ್ರಬಲ ಎದುರಾಳಿ ಹನುಮನಾಳು ಸಿದ್ದೇಗೌಡರ ತಂಡದಿಂದ ಸ್ಪರ್ಧಿಸಿದ್ದ ಯಾವೊಬ್ಬ ಅಭ್ಯರ್ಥಿಯೂ ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ. ಸಾಲಗಾರರ ಕ್ಷೇತ್ರದಿಂದ 11, ಸಾಲಗಾರರಲ್ಲದ ಕ್ಷೇತ್ರದಿಂದ ಒಬ್ಬರು ಸದಸ್ಯರು ಸುನೀತಾ ವೀರಪ್ಪಗೌಡರ ಬಣದಿಂದಲೇ ಸ್ಪರ್ಧಿಸಿ ಭರ್ಜರಿ ಜಯ ಸಾಧಿಸಿದರು. ಈ ಪೈಕಿ ಕಾಂಗ್ರೆಸ್ ಪಕ್ಷದಿಂದ ಇಬ್ಬರು ಜಯಗಳಿಸಿದರೆ ಇನ್ನುಳಿದ 10 ಅಭ್ಯರ್ಥಿಗಳು ಜೆಡಿಎಸ್ ಪಕ್ಷದ ಬೆಂಬಲಿತ ಅಭ್ಯರ್ಥಿಗಳಾಗಿ ಜಯ ಗಳಿಸಿದರು. ಆದರೆ ಸುನೀತಾ ವೀರಪ್ಪಗೌಡರು ಕೇವಲ ತಂಡದ ನೇತೃತ್ವ ವಹಿಸಿದ್ದರು.

ಸಹಕಾರ ಸಂಘದ ಚುನಾವಣೆಯಲ್ಲಿ ಸುನೀತಾ ವೀರಪ್ಪಗೌಡರು ಪಕ್ಷಾತೀತವಾಗಿ ತಮ್ಮ ತಂಡದ ನಾಯಕತ್ವ ವಹಿಸಬೇಕೆಂದು ಚುನಾವಣಾ ಕಣದಲ್ಲಿದ್ದ ಅಭ್ಯರ್ಥಿಗಳ ಕೋರಿಕೆ ಮೇರೆಗೆ ಮಾಜಿ ಶಾಸಕರು ತಂಡದ ನೇತೃತ್ವ ವಹಿಸಿದ್ದರು. ಆದರೆ ಯಾವುದೇ ಪ್ರಚಾರ ಕಾರ್ಯದಲ್ಲಿ ಭಾಗಿ ಯಾಗದೇ ಆಂತರಿಕ ಬೆಂಬಲ ಸೂಚಿಸಿದ್ದರು. ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ ಎಂಬ ನಿರ್ಧಾರದಿಂದ ಕಣದಿಂದ ಹಿಂದೆ ಸರಿದಿದ್ದರೂ, ಕಾರ್ಯಕರ್ತರು ಸ್ಪರ್ಧೆ ಮಾಡಲೇಬೇಕೆಂಬ ಒತ್ತಾಯ ಮಾಡಿದ್ದರಿಂದ ಚುನಾವಣೆಗೆ ಸ್ಪರ್ಧೆ ಮಾಡಬೇಕಾಯಿತು ಎಂದು ಸುನೀತಾ ವೀರಪ್ಪಗೌಡ ತಿಳಿಸಿದರು.

ಬಹು ಮುಖ್ಯವಾಗಿ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಸ್ಪರ್ಧೆ ಮಾಡಬೇಕೆಂಬ ಆಶಯದೊಂದಿಗೆ ನಿರ್ದೇಶಕಿಯಾಗಿ ಆಯ್ಕೆಯಾಗಿದ್ದೇನೆ. ಇಲ್ಲಿ ಯಾವುದೇ ಪಕ್ಷ ಇಲ್ಲ. ಪಕ್ಷಾತೀತವಾಗಿ ಚುನಾವಣೆ ನಡೆದಿದೆ. ಅನೇಕ ಮುಖಂಡರು ಪ್ರೀತಿಯಿಂದ ನನ್ನ ನೇತೃತ್ವ ಬೇಕೆಂದು ಬಯಸಿದ್ದರು. ಅವರ ವಿಶ್ವಾಸಕ್ಕೆ ನೇತೃತ್ವ ವಹಿಸಿದ್ದೆ. ಈಗ ನನ್ನ ನೇತೃತ್ವದಲ್ಲೇ 12 ಸ್ಥಾನ ಗೆದ್ದಿದ್ದೇವೆ ಎಂದರು.

ಸಾಲಗಾರ ಕ್ಷೇತ್ರದಿಂದ ಬಿ.ದೇವರಾಜು (921), ಎಂ.ಎಸ್ ಜಯರಾಮೇಗೌಡ (880), ಉಮೇಶ್ (864), ಹೆಚ್.ಎಂ. ಮಹದೇವೇಗೌಡ (757), ವಿ.ಶಂಕರೇಗೌಡ (742), ಚನ್ನಮಲ್ಲು(780), ಲಕ್ಷ್ಮಮ್ಮ (700) ಗೋಪಾಲ (722), ಎಂ.ಸತೀಶ್ (788), ಜೆ.ಸುನೀತಾ ವೀರಪ್ಪಗೌಡ (715), ಸಿ.ಪಿ.ವಿದ್ಯಾ(677) ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ ಮಂಜುನಾಥ್ (305) ಮತಗಳನ್ನು ಪಡೆದು ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ರಘು ಕಾರ್ಯ ನಿರ್ವಹಿಸಿದರು. ಈ ವೇಳೆ ಜೆಡಿಎಸ್ ಮುಖಂಡ ಹೋಟೆಲ್ ರಾಮಸ್ವಾಮಿ, ಗುತ್ತಿಗೆದಾರ ಚಾಮನಹಳ್ಳಿ ಸತೀಶ್, ಉಮೇಶ್ ಇತರರಿದ್ದರು.

ಜೆಡಿಎಸ್ ಶಾಲು ನಿರಾಕರಿಸಿದ ಮಾಜಿ ಶಾಸಕಿ

ಚುನಾವಣಾ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಜಯ ಸಾಧಿಸಿದ ಅಭ್ಯರ್ಥಿಗಳು ಸಹಕಾರ ಸಂಘದ ಮುಂದೆ ವಿಜಯೋತ್ಸವ ಆಚರಿಸುತ್ತಿದ್ದರು. ಈ ವೇಳೆ ಹೆಚ್.ಡಿ.ದೇವೇಗೌಡ, ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಪರ ಜಯಘೋಷಗಳು ಕೇಳಿ ಬಂದವು. ಈ ವೇಳೆ ಅಲ್ಲಿ ಕಾರ್ಯಕರ್ತರ ಜೊತೆಯಾದ ಸುನೀತಾ ವೀರಪ್ಪಗೌಡರಿಗೆ ಜೆಡಿಎಸ್ ಶಾಲು ಹಾಕಲು ಕಾರ್ಯಕರ್ತರು ಮುಂದಾಗುತ್ತಿದ್ದಂತೆ ಅವರು ಶಾಲು ಹಾಕಿಸಿಕೊಳ್ಳಲು ನಿರಾಕರಿಸಿದರು.

ಸೃಜನಶೀಲತೆಯಿಂದ ಕ್ರಿಯಾಶೀಲತೆ ಹೆಚ್ಚುತ್ತದೆ: ಡಾ.ಮಂಟೇಲಿಂಗು



ಕಾರ್ಯಕ್ರಮವನ್ನು ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಮಂಟೇಲಿಂಗು ಉದ್ಘಾಟಿಸಿದರು.

ನಂಜನಗೂಡು, ಮಾ.14– ವಿದ್ಯಾರ್ಥಿಗಳು ಸೃಜನಶೀಲತೆ ಮೈಗೂಡಿಸಿಕೊಂಡರೆ ಉನ್ನತ ವ್ಯಾಸಂಗ ಮಾಡುವಾಗ ಸಂಶೋಧನೆಯಲ್ಲಿ ಹೆಚ್ಚು ಕ್ರಿಯಾಶೀಲತೆಯಿಂದ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಮೈಸೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಮಂಟೇಲಿಂಗು ತಿಳಿಸಿದರು.

ತಾಲೂಕಿನ ಸುತ್ತೂರು ಜೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ಪರಿಚಯಾತ್ಮಕ ಕಾರ್ಯಕ್ರಮ ಹಾಗೂ ವಿದ್ಯಾರ್ಥಿ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಹಾಗೂ ಕ್ರಿಯಾಶೀಲತೆ ಹೆಚ್ಚಾದಂತೆ ಸಂಶೋಧನೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಹೊಸ ಹೊಸ ಆವಿಷ್ಕಾರಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುವ ಜೊತೆಗೆ ಬೌದ್ಧಿಕ ಸಾಮರ್ಥ್ಯವೂ ಕೂಡ ಹೆಚ್ಚುತ್ತದೆ. ಇದರಿಂದ ತಾವು ಆಯ್ಕೆ ಮಾಡಿಕೊಂಡ ಕ್ಷೇತ್ರದಲ್ಲಿ ಪರಿಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಮಾಡಲು ಸಹಕಾರಿಯಾಗುತ್ತದೆ ಎಂದರು.

ವಿದ್ಯಾರ್ಥಿ ಸಂಘಗಳು ಸಾಮಾಜಿಕ ಜೀವನದ ಸೇತುವೆಗಳಾಗಿವೆ. ವಿದ್ಯಾರ್ಥಿಗಳಲ್ಲಿ ಸಂಘಟನಾ ಮನೋಭಾವ ಹೆಚ್ಚಿದಷ್ಟು ನಾಯಕತ್ವ ಗುಣ ಬೆಳೆಯುತ್ತದೆ. ಜೆಎಸ್ಎಸ್ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ವಿದ್ಯಾರ್ಥಿಗಳು ಧನಾತ್ಮಕ ಚಿಂತನೆಗಳ ಜೊತೆಗೆ ಹವ್ಯಾಸಗಳನ್ನು ರೂಢಿಸಿಕೊಂಡಾಗ ಯಶಸ್ಸಿನೆಡೆಗೆ ಸಾಗಬಹುದು ಎಂದರು.

ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ.ಜ್ಞಾನೇಶ್ ಮಾತನಾಡಿ, ಆಧುನಿಕ ಜಗತ್ತು ಕ್ಷಣ ಕ್ಷಣಕ್ಕೂ ಬದಲಾಗುತ್ತಿದೆ. ಬದಲಾದ ಪ್ರಪಂಚಕ್ಕೆ ತಕ್ಕಂತೆ ವಿದ್ಯಾರ್ಥಿಗಳಿಗೆ ಭೋದಿಸಬೇಕು. ಬದಲಾಗುತ್ತಿರುವ ಸ್ಪರ್ಧಾತ್ಮಕ ಜಗತ್ತಿಗೆ ತಕ್ಕಂತೆ ವಿದ್ಯಾರ್ಥಿಗಳು ವೈವಿಧ್ಯಮಯ ಸಂವಹನ ಕೌಶಲಗಳು ಹಾಗೂ ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಂಡು ಸತತ ಅಭ್ಯಾಸ ಮಾಡಬೇಕು ಎಂದರು. ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ಎಂ. ಮಹೇಶ್ ಮಾತನಾಡಿ, ಶಿಕ್ಷಣವು ನಿಂತ ನೀರಾಗದೆ ಹರಿಯುವ ನೀರಿನಂತೆ ಎಲ್ಲರಿಗೂ ಪಸರಿಸಬೇಕು. ಉತ್ತಮ ಬೀಜ ಬಿತ್ತಿದರೆ ಸಂಪತ್ಭರಿತ ಫಲ ಬರುತ್ತದೆ. ಹಾಗೆ ಗುಣಾತ್ಮಕ ಶಿಕ್ಷಣದಿಂದ ಉತ್ತಮ ಸಮಾಜ ಸೃಷ್ಟಿ ಸಾಧ್ಯ. ಸ್ವಾಸ್ಥ ಸಮಾಜ ಹಾಗೂ ಉತ್ತಮ ಜೀವನಕ್ಕೆ ವಿದ್ಯಾರ್ಥಿ ಸಂಘಗಳು ಶ್ರಮಿಸಬೇಕು ಎಂದರು.

ಸಹಾಯಕ ಪ್ರಾಧ್ಯಾಪಕ ಮಂಜುನಾಥ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಹಾಯಕ ಸಂಯೋಜನಾಧಿಕಾರಿ ವೀರಭದ್ರಯ್ಯ, ಜೆಎಸ್ಎಸ್ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ತಾಯಿ ಮಗು ನಾಪತ್ತೆ



ಮಲ್ಲುಂಡಿ, ಮಾ.14– ತಾಯಿ ಮಗು ನಾಪತ್ತೆಯಾಗಿರುವ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಂಜನಗೂಡು ತಾಲೂಕಿನ ತರಗನಹಳ್ಳಿ ಗ್ರಾಮದ ನಿವಾಸಿ ರಾಧಿಕಾ(22), ಗಾನವಿ (2) ನಾಪತ್ತೆಯಾದವರು. ಮಾ.4 ರಂದು ಜಾತಿ ಪ್ರಮಾಣ ಪತ್ರ ಮಾಡಿಸಿಕೊಂಡು ಬರುವುದಾಗಿ ಮನೆಯಿಂದ ಹೋದ ನನ್ನ ಪತ್ನಿ ಇಲ್ಲಿವರೆಗೂ ಮನೆಗೆ ಆಗಮಿಸಿಲ್ಲ ಎಂದು ರಾಧಿಕಾ ಪತಿ ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹುಲ್ಲಹಳ್ಳಿ ಠಾಣೆ ಮೊ.9480805066 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಿರ್ದೇಶಕರಿಗೆ ಸನ್ಮಾನ



ತಿ.ನರಸೀಪುರ ತಾಲೂಕು ನೆರಗ್ಯಾತನಹಳ್ಳಿ ಪಿಎಸಿಎಸ್ ನಿರ್ದೇಶಕರ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪುಟ್ಟಸ್ವಾಮಿ ಅವರನ್ನು ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಸನ್ಮಾನಿಸಿದರು. ಈ ವೇಳೆ ನಿಲಸೋಗೆ ಮಹದೇವ್ ಪ್ರಸಾದ್, ಮಹದೇವಸ್ವಾಮಿ ಇತರರಿದ್ದರು.

ಅಭಿನಂದನೆ



ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ಕುರುಬರ ಸಂಘದ ನೂತನ ಅಧ್ಯಕ್ಷ ಕೆ.ಎಸ್.ಮಾಲೇಗೌಡರನ್ನು ಆದಿಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ ಅಭಿನಂದಿಸಿದರು. ಈ ವೇಳೆ ಟೌನ್ ಕಾಂಗ್ರೆಸ್ ಮಹಿಳಾ ಅಧ್ಯಕ್ಷ ಸೌಮ್ಯ, ಮುಖಂಡರಾದ ಸುರೇಶ್, ಅಜರ್, ಶಿವಲಿಂಗಯ್ಯ, ನಾಗರಾಜು, ಸೋಮೇಶ್, ಬಸವರಾಜು, ನಾಗೇಂದ್ರ, ಪ್ರಕಾಶ್, ಶಿವರಾಜು, ಚಂದ್ರು, ನಾಗೇಶ, ನಂದೀಶ್ ಇತರರಿದ್ದರು.

ಪೋಷಕರು ಮಕ್ಕಳನ್ನು ಕಡ್ಡಾಯವಾಗಿ ಸರ್ಕಾರಿ ಶಾಲೆಗೆ ಸೇರಿಸಿ

ಸ್ಮಾರ್ಟ್ ಕ್ಲಾಸ್ ಉದ್ಘಾಟಿಸಿ ಪುರಸಭೆ ಅಧ್ಯಕ್ಷ ಶಿವುನಾಯಕ್ ಮನವಿ



ಶಾಲೆ ಅಭಿವೃದ್ಧಿಗೆ ಆರ್ಥಿಕ ಸಹಕಾರ ನೀಡಿದ ಕೆ.ಎ.ಮಹೇಶ್ ಅವರನ್ನು ಪುರಸಭೆ ಅಧ್ಯಕ್ಷ ಶಿವುನಾಯಕ್ ಸನ್ಮಾನಿಸಿದರು.

ಕೆ.ಆರ್.ನಗರ, ಮಾ.14– ಪೋಷಕರ ಖಾಸಗಿ ಶಾಲೆಗಳ ವ್ಯಾಮೋಹದಿಂದ ದಿನದಿಂದ ದಿನಕ್ಕೆ ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚುವ ಹಂತ ತಲುಪುತ್ತಿದ್ದು, ಇದನ್ನು ತಪ್ಪಿಸಲು ಎಲ್ಲರೂ ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಿಗೆ ಸೇರಿಸಬೇಕು ಎಂದು ಪುರಸಭೆ ಅಧ್ಯಕ್ಷ ಶಿವುನಾಯಕ್ ಮನವಿ ಮಾಡಿದರು.

ಪಟ್ಟಣದ ಆಂಜನೇಯ ಬಡಾವಣೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಸ್ಮಾರ್ಟ್ ಕ್ಲಾಸ್ ಉದ್ಘಾಟಿಸಿ, ನಂತರ ನಡೆದ ದಾನಿಗಳ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ತಾವು ಓದಿದ ಶಾಲೆಗೆ ಪ್ರತಿಯೊಬ್ಬರೂ ಕೊಡುಗೆ ನೀಡಬೇಕು ಎಂದರು.

ದಶಕಗಳ ಹಿಂದೆ ಸರ್ಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದ ಹಲವು ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ್ದು, ಇದರೊಂದಿಗೆ ವಿದೇಶಗಳಿಗೂ ಹೋಗಿ ತಮ್ಮ ಸಾಮರ್ಥ್ಯ ತೋರಿದ್ದು, ಇದನ್ನು ಅರಿತು ಎಲ್ಲರೂ ಸರ್ಕಾರಿ ಶಾಲೆಗಳ ಉಳಿವಿಗೆ ಕಂಕಣಬದ್ಧರಾಗಿ ಕೆಲಸ ಮಾಡಬೇಕೆಂದು ಮನವಿ ಮಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಕೃಷ್ಣಪ್ಪ ಮಾತನಾಡಿ, ಸರ್ಕಾರಿ ಶಾಲೆಗಳ ಶೈಕ್ಷಣಿಕ ಗುಣಮಟ್ಟದ ಏಳಿಗೆಗಾಗಿ ರಾಜ್ಯ ಸರ್ಕಾರ ಹತ್ತು ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದರೂ ಸಹ ಪೋಷಕರು ಆಂಗ್ಲ ಭಾಷಾ ವ್ಯಾಮೋಹದಿಂದ ಖಾಸಗಿಯತ್ತ ಒಲವು ತೋರಿಸುತ್ತಿರುವುದು ವಿಷಾದನೀಯ. ಭವಿಷ್ಯದಲ್ಲಿ ಸಮುದಾಯದ ಪ್ರತಿನಿಧಿಗಳು ಸರ್ಕಾರಿ ಶಾಲೆಗಳ ಒಲವು ತೋರಬೇಕೆಂದು ಕೋರಿಕೊಂಡರು.

ಗ್ರಾಮೀಣ ಸರ್ಕಾರಿ ಶಾಲೆಗಳು ಉತ್ತಮ ಶೈಕ್ಷಣಿಕ ಪ್ರಗತಿ ಸಾಧಿಸಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ದಾರಿ ದೀಪವಾಗಿದ್ದು, ಪ್ರಸ್ತುತ ಈ ನಿಟ್ಟಿನಲ್ಲಿ ಸಾಧನೆಗೈಯುತ್ತಿದ್ದು ಪೋಷಕರು ಇದನ್ನು ಅರಿತು ಶಿಕ್ಷಣ ಇಲಾಖೆಯೊಂದಿಗೆ ಸಹಕರಿಸಬೇಕೆಂದು ಹೇಳಿದರು. ಪುರಸಭೆ ಉಪಾಧ್ಯಕ್ಷೆ ವಸಂತಮ್ಮ, ಶಾಲೆ ಹಳೇ ವಿದ್ಯಾರ್ಥಿಗಳ ಸಂಘದ ಗೌರವಾಧ್ಯಕ್ಷ ನರಸಿಂಹರಾಜು, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ. ನಟರಾಜು, ಶಾಲಾ ಭೂ ದಾನಿಗಳಾದ ಹೇಮಾವತಿ, ಎಸ್‌ಡಿಎಂಸಿ ಅಧ್ಯಕ್ಷೆ ಮೀನಾಕ್ಷಿ ಮಾತನಾಡಿದರು.

ಈ ಸಂದರ್ಭ ಶಾಲೆ ಏಳಿಗೆಗೆ ಅವಿರತವಾಗಿ ಸಹಕಾರ ನೀಡುತ್ತಿರುವ ದಾನಿಗಳಾದ ಮೆಗ್ನಟಾಸ್ ಸೆಕ್ಯೂರಿಟಿ ಏಜೆನ್ಸಿ ಕೆ.ಎ.ಮಹೇಶ್, ಲಕ್ಷ್ಮಿಕಾಂತ್, ದಯಾನಂದ, ರವಿಕುಮಾರ್, ಅಶೋಕ್ ಕುಮಾರ್, ಲಕ್ಷ್ಮಿನಾರಾಯಣ್, ಕರ್ನಾಟಕ ತಮಿಳು ಭಾಷಿಕರ ಸಂಘದ ತಾಲೂಕು ಅಧ್ಯಕ್ಷ ಶಿಲ್ಪ ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಯಿತು.

ತಾಲೂಕು ಅಕ್ಷರ ದಾಸೋಹ ಅಧಿಕಾರಿ ಸ್ವಾಮಿಗೌಡ, ಸಿಆರ್‌ಪಿ ಉದಯಕುಮಾರ್, ಶಾಲಾ ಮುಖ್ಯಶಿಕ್ಷಕಿ ಬೇಬಿ, ಶಿಕ್ಷಕರಾದ ನಾಗರತ್ನ, ರಂಗಪ್ಪ, ವಿನುತ, ಸೌಮ್ಯ, ಕವಿತಾ ಮತ್ತಿತರರಿದ್ದರು.

ಶ್ರೀಕೈವಾರ ತಾತಯ್ಯ ಜಯಂತಿ: ಹಣ್ಣು ಹಂಪಲು ವಿತರಣೆ



ವೈದ್ಯಾಧಿಕಾರಿ ಡಾ.ಉಮೇಶ್ ಅವರನ್ನು ಸನ್ಮಾನಿಸಲಾಯಿತು.

ಹುಣಸೂರು, ಮಾ.14– ಶ್ರೀಕೈವಾರ ತಾತಯ್ಯ ಅವರ 299ನೇ ಜಯಂತಿ ಅಂಗವಾಗಿ ತಾಲೂಕು ಬಲಿಜ ಸಮಾಜದಿಂದ ತಾತಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಗರದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ತಾಲೂಕು ಬಲಿಜ ಸಂಘದ ಗೌರವಾಧ್ಯಕ್ಷ ಜಯರಾಮು ಮಾತನಾಡಿ, ಶ್ರೀತಾತಯ್ಯನವರು ಶ್ರೀಕಾಲಜ್ಞಾನ ಪುಸ್ತಕ ಬರೆದು ಈಗ ನಡೆಯುತ್ತಿರುವ ಅನೇಕ ಘಟನೆಗಳನ್ನು ಈ ಹಿಂದೆಯೇ ಜನರಿಗೆ ತಿಳಿಸಿದ್ದರು. ಅವರು ಪವಾಡ ಪುರುಷರಾಗಿದ್ದರು. ಸಮಾಜದ ಏಳಿಗೆಗಾಗಿ ದುಡಿದರು ಎಂದರು. ಈ ವೇಳೆ ವೈದ್ಯಾಧಿಕಾರಿ ಡಾ.ಉಮೇಶ್ ಅವರನ್ನು ಸನ್ಮಾನಿಸಲಾಯಿತು. ತಾಲೂಕು ಬಲಿಜ ಸಂಘದ ಉಪಾಧ್ಯಕ್ಷ ಚಂದ್ರಣ್ಣ, ಕಾರ್ಯದರ್ಶಿ ಗಜೇಂದ್ರ, ಸಹ ಕಾರ್ಯದರ್ಶಿ ಚಂದ್ರು, ಖಜಾಂಚಿ ಮಂಜುನಾಥ್, ರಂಗಸ್ವಾಮಿ, ಮಂಜುನಾಥ್, ದಾಮೋದರ್, ಯೋಗೇಶ್, ರಕ್ಷಿತ್ ಇತರರಿದ್ದರು.

ಅಸ್ಪೃಶ್ಯತಾ ನಿರ್ಮೂಲನಾ ಜಾಗೃತಿ ಕಾರ್ಯಕ್ರಮ



ಕಾರ್ಯಕ್ರಮವನ್ನು ಗಾವಡಗೆರೆ ನಟರಾಜ ಸ್ವಾಮೀಜಿ ಉದ್ಘಾಟಿಸಿದರು.

ಹುಣಸೂರು, ಮಾ.14– ಜಗಜ್ಯೋತಿ ಬಸವಣ್ಣನವರ ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ ಎಂಬ ನಾಣ್ಣುಡಿಯಂತೆ ಸಮಾಜದಲ್ಲಿ ನಾವೆಲ್ಲರೂ ಸಾಗಬೇಕಾಗಿದೆ ಎಂದು ಗಾವಡಗೆರೆಯ ನಟರಾಜ ಸ್ವಾಮೀಜಿ ತಿಳಿಸಿದರು.

ತಾಲೂಕು ಆಡಳಿತದಿಂದ ಗಾವಡಗೆರೆ ಹೋಬಳಿ ಮಟ್ಟದಲ್ಲಿ ಆಯೋಜಿಸಿದ್ದ ಅಸ್ಪೃಶ್ಯತಾ ನಿರ್ಮೂಲನಾ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶತ ಶತಮಾನಗಳಿಂದ ಅಸ್ಪೃಶ್ಯತೆ, ಜಾತೀಯತೆ ಅವಮಾನದಲ್ಲಿ ಬದುಕುತ್ತಿದ್ದ ದಲಿತ ಸಮುದಾಯಗಳ ದನಿಯಾಗಿ ನಿಂತವರು ಬಸವಣ್ಣನವರು. ಮಾತನಾಡುವುದಕ್ಕೂ ಅವಕಾಶವಿಲ್ಲದ ಎಲ್ಲಾ ಕ್ಷೇತ್ರಗಳಲ್ಲೂ ನಿರ್ಬಂಧ ಹೇರಿ ಅವಮಾನದಿಂದ ಬದುಕುತ್ತಿದ್ದ ಅಸ್ಪೃಶ್ಯರಿಗೆ ಅಂದೇ ಬಸವಣ್ಣನವರು ಅನುಭವ ಮಂಟಪದ ಮೂಲಕ ಸಮಾನತೆ ಕಲ್ಪಿಸಿಕೊಟ್ಟರು. ದಲಿತ ಸಮುದಾಯದ ಹುಡುಗನಿಗೂ ಬ್ರಾಹ್ಮಣ ಸಮುದಾಯದ ಹುಡುಗಿಗೂ ಮದುವೆ ಮಾಡಿ ಸಾಮಾಜಿಕ ಕ್ರಾಂತಿಯನ್ನೇ ಮಾಡಿದರು. ಬಸವಣ್ಣನವರ ಸಾಮಾಜಿಕ ಬದಲಾವಣೆಯಿಂದ ದಲಿತರಿಗೆ ಆತ್ಮಗೌರವ ಬಂದಂತಾಯಿತು. ತಮ್ಮ ಅಭಿಪ್ರಾಯ ಮಂಡಿಸುವ ಅವಕಾಶ ಸಿಕ್ಕಿತು. ನಂತರದಲ್ಲಿ ಅಂಬೇಡ್ಕರ್ ಅವರು ಬಸವಣ್ಣನವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಸಂವಿಧಾನ ರಚನೆ ಮಾಡಲು ಕಾರಣವಾಯಿತು ಎಂದರು.

ಸಂವಿಧಾನ ಜಾರಿಗೆ ಬಂದು 75 ವರ್ಷ ಕಳೆದರೂ ಇಂದಿಗೂ ಕೆಲವು ಭಾಗಗಳಲ್ಲಿ ಅಸ್ಪೃಶ್ಯತೆ, ಅಸಮಾನತೆ ಜೀವಂತವಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ದಲಿತರನ್ನು ಇತರೆ ಸಮುದಾಯಗಳು ನೋಡುವ ಮನಸ್ಥಿತಿ ನಮ್ಮಲ್ಲಿ ಬದಲಾಗಬೇಕು. ಕೇವಲ ಕಾನೂನುಗಳಿಂದ ಸಾಮಾಜಿಕ ಪಿಡುಗನ್ನು ನಿರ್ಮೂಲನೆ ಮಾಡಲು ಕಷ್ಟವಾಗಿದ್ದು, ಜನರಲ್ಲಿ ಜಾಗೃತಿ ಮೂಡಿಸಿ ಈ ಅನಿಷ್ಟ ಪದ್ಧತಿಯನ್ನು ನಾವು ನೀವೆಲ್ಲರೂ ಸೇರಿ ತೊಲಗಿಸಬೇಕಾಗಿದೆ. ಎಂದರು.

ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ, ಮಾನವ ಹಕ್ಕುಗಳ ಹೋರಾಟ ಗಾರರು ಹಾಗೂ ವಕೀಲ ಗುರುಪ್ರಸಾದ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಸಮಾಜ ಕಲ್ಯಾಣಾಧಿಕಾರಿ ಅಶೋಕ್ ಕುಮಾರ್, ಜ್ಞಾನಜ್ಯೋತಿ ಸಂಸ್ಥೆ ಹೇಮಾವತಿ, ಗಾವಡಗೆರೆ ಉಪ ತಹಸೀಲ್ದಾರ್ ಶೋಭಾ, ಆರ್‌ಐ ಹೇಮಂತ್, ಕಂದಾಯ ಅಧಿಕಾರಿ ವಿಜಯ್ ಕುಮಾರ್, ಪಲ್ಲವಿ, ಗಾವಡಗೆರೆ ಗ್ರಾಪಂ ಅಧ್ಯಕ್ಷೆ ಶೋಭಾ, ಪಿಡಿಓ ಮಂಜುಳಾ, ಜಾಬಗೆರೆ ಗ್ರಾಪಂ ಅಧ್ಯಕ್ಷೆ ಯಶೋಧಬಾಯಿ, ಕಟ್ಟೆಮಳಲವಾಡಿ ಪಿಡಿಓ ವಿಜಯಕುಮಾರಿ, ಬಿಳಿಗೆರೆ ಪಿಡಿಓ ಶೀಲಾ, ಪರಿಶಿಷ್ಟ ಪಂಗಡ ಇಲಾಖೆಯ ಪುಷ್ಪಾ, ದಲಿತ ಮುಖಂಡ ಆಂಜನೇಯ, ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಅಡಿಗೆ ಸಹಾಯಕರು, ಆರೋಗ್ಯ ಇಲಾಖೆ ಸಿಬ್ಬಂದಿ, ಕಂದಾಯ, ಪಂಚಾಯತ್ ರಾಜ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿ ಹಾಜರಿದ್ದರು.

ಕಾನೂನುಗಳು ಮಹಿಳೆಯರ ಸಬಲೀಕರಣಕ್ಕೆ ಪೂರಕ

ಮುಕ್ತ ವಿವಿ ಅರ್ಥಶಾಸ್ತ್ರ ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ



ಹೆಚ್.ಡಿ.ಕೋಟೆಯಲ್ಲಿ ಮಹಿಳಾ ದೌರ್ಜನ್ಯ ತಡೆ ಮತ್ತು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು.

ಹೆಚ್.ಡಿ.ಕೋಟೆ, ಮಾ.14– ಪ್ರಸ್ತುತ ಸರ್ಕಾರದ ಹಲವು ಯೋಜನೆಗಳು ಮತ್ತು ಕಾನೂನುಗಳು ಮಹಿಳೆಯರ ಸಬಲೀಕರಣಕ್ಕೆ ಮತ್ತು ಸಮಾನತೆಗೆ ಪೂರಕವಾಗಿವೆ ಎಂದು ಮೈಸೂರಿನ ಕರ್ನಾಟಕ ಮುಕ್ತ ವಿವಿಯ ಅರ್ಥಶಾಸ್ತ್ರ ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಕಾಲೇಜು ಆವರಣದಲ್ಲಿ ನಡೆದ ಮಹಿಳಾ ದೌರ್ಜನ್ಯ ತಡೆ ಮತ್ತು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಷ್ಟ್ರದಲ್ಲಿ ರಾಮರಾಜ್ಯದ ಕನಸು ಕಂಡಿದ್ದ ಗಾಂಧೀಜಿಯವರ ಕನಸನ್ನು ನನಸು ಮಾಡಲು ಇಂದಿಗೂ ಸಹ ಸಾಧ್ಯವಾಗಿಲ್ಲ. ಒಬ್ಬ ಮಹಿಳೆ ನಿರ್ಭೀತಿಯಿಂದ ಓಡಾಡಲು ಇಂದಿಗೂ ಸಹ ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತುತ ಭಾರತದಲ್ಲಿ ಶೇ.86 ರಷ್ಟು ಪುರುಷರು ಮತ್ತು ಶೇ.68 ರಷ್ಟು ಮಹಿಳೆಯರು ಅಕ್ಷರವಂತರಿದ್ದಾರೆ. ಇಂತಹ ತಾರತಮ್ಯದ ವಿರುದ್ಧ ಹೋರಾಡಿ ಆ ಮಹಿಳೆಯರಿಗೂ ಸಹ ಶಿಕ್ಷಣದ ಅವಶ್ಯಕತೆ ಪೂರೈಸಬೇಕು ಎಂದರು.

ತಿ.ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಪ್ರಾಧ್ಯಾಪಕಿ ಡಾ.ರೇಷ್ಮ ಚಂಗಪ್ಪ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಹಿಳೆ ಕೆಲಸಕ್ಕೆ ತೆರಳುತ್ತಿರುವ ಸ್ಥಳಗಳಲ್ಲಿಯೂ ಸಹ ಮಹಿಳೆಯರಿಗೆ ದೌರ್ಜನ್ಯ ಎಗ್ಗಿಲ್ಲದೇ ನಡೆಯುತ್ತಿವೆ. ಇವುಗಳಲ್ಲಿ ಕೆಲವು ಪ್ರಕರಣಗಳು ಬೆಳಕಿಗೆ ಬಂದರೆ, ಮತ್ತೆ ಕೆಲವು ಪ್ರಕರಣಗಳು ಬೆಳಕಿಗೆ ಬಾರದ ಸ್ಥಿತಿ ಎದುರಾಗಿದೆ ಎಂದರು. ಸದೃಢ ಸಮಾಜ ಕಟ್ಟಬೇಕಾದರೆ ಹೆಣ್ಣು ಗಂಡೆನ್ನದೇ ಭೇದ ಭಾವ ಮರೆತು ಶ್ರಮಿಸಿದಾಗ ಸದೃಢ ಸಮಾಜ ನಿರ್ಮಾಣವಾಗಲಿದೆ ಎಂದರು.

ಈ ವೇಳೆ ಮೈಸೂರು ವಿವಿ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿನಿ ಹೆಬ್ಬಲಗುಪ್ಪೆ ಗ್ರಾಮದ ನಗ್ಮಾ, ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಭಾಗವಹಿಸಿದ್ದ ಎನ್‌ಸಿಸಿ ವಿದ್ಯಾರ್ಥಿನಿ ಪ್ರಿಯಾಂಕ, ವಿಶ್ವವಿದ್ಯಾಲಯ ಮಟ್ಟದಲ್ಲಿ ಕುಡ್ಡಿ ಪಂದ್ಯಾವಳಿಗೆ ಆಯ್ಕೆಯಾದ ಚಂದನ, ಎನ್‌ಎಸ್‌ಎಸ್ ನ ರಾಜ್ಯ ಮಟ್ಟದ ಶಿಬಿರದಲ್ಲಿ ಭಾಗವಹಿಸಿದ ಚೈತ್ರ, ವಲಯ ಮಟ್ಟದ ಪಥ ಸಂಚಲನದಲ್ಲಿ ಭಾಗಿಯಾದ ಶರಣ್ಯ, ಜೀವನ್ ಅವರನ್ನು ಅಭಿನಂದಿಸಲಾಯಿತು.

ಇದೇ ಸಂದರ್ಭ ಭೈರಾಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಂಗ್ಲಿಷ್ ಪ್ರಾಧ್ಯಾಪಕಿ ಡಾ.ಎಂ.ನೇತ್ರಾವತಿ, ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಭೈರೇಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಬಿ.ಕಲ್ಲೇಶ್ ಗೌಡ, ಉಪನ್ಯಾಸಕರಾದ ಅವೀನಾ, ಡಿ. ಚಂದನ, ಸಿ.ಚಿತ್ರ, ಬಿ.ಚಿಕ್ಕದೇವಿ, ಸಂಗೀತಾ ಗೌಡ, ಶಾಂಭವಿ, ಮುಖಂಡ ಭಾಸ್ಕರ್, ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಕುಮಾರ್, ಕಲ್ಲೇಶ್‌ಗೌಡ, ಚನ್ನಕೇಶವ, ರಾಮಚಂದ್ರ ಅಂಕಪ್ಪ ಕ್ರೀಡಾ ಕಾರ್ಯದರ್ಶಿ ಬಿ.ಸಿ.ಮಹೇಂದ್ರ, ಸಿದ್ದೇಗೌಡ, ಮಂಜು, ಮಹದೇವು, ಸಿದ್ದರಾಜು, ಪ್ರಕಾಶ್ ಇದ್ದರು.

ಮೈಸೂರು ಮಿತ್ರ

ಮೈಸೂರಲ್ಲಿ ಶ್ರೀ ಯೋಗಿ ನಾರಾಯಣ ಕೈವಾರ ತಾತಯ್ಯನವರ ಜಯಂತಿ

ಶ್ರೀಯುತರ ತತ್ವ-ಆದರ್ಶ ಪಾಲನೆ ಸಂದೇಶ ಸಾರಿದ ಮಹನೀಯರು



ಮೈಸೂರಿನ ಡಿ.ದೇವರಾಜ ಅರಸ್ ರಸ್ತೆಯಲ್ಲಿ ಶ್ರೀ ಯೋಗಿ ನಾರಾಯಣ ಕೈವಾರ ತಾತಯ್ಯ ಅವರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು.

ಮೈಸೂರು,ಮಾ.14(ಎಂಟಿವೈ)– ಮೈಸೂರಿನ ವಿವಿಧೆಡೆ ಶ್ರೀ ಯೋಗಿ ನಾರಾಯಣ ಕೈವಾರ ತಾತಯ್ಯ ಅವರ 299ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿ, ಗೌರವ ಸಮರ್ಪಿಸಲಾಯಿತು.

ಮೈಸೂರಿನ ಶ್ರೀ ಕೈವಾರ ತಾತಯ್ಯ ಬಣಜಿಗ (ಬಲಿಜ)ಸಂಘದ ವತಿಯಿಂದ ಡಿ. ದೇವರಾಜ ಅರಸು ರಸ್ತೆ ಹಾಗೂ ಸರಸ್ವತಿಪುರಂನಲ್ಲಿರುವ ಶ್ರೀ ಯೋಗಿ ನಾರೇಯಣ ಬಣಜಿಗ ಸಂಘದ ಕಚೇರಿಯಲ್ಲಿ ಪ್ರತ್ಯೇಕವಾಗಿ ತಾತಯ್ಯ ಅವರ 299ನೇ ಜಯಂತಿಯನ್ನು ಆಚರಿಸಿ, ತಾತಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು.

ಡಿ.ದೇವರಾಜ ಅರಸು ರಸ್ತೆ: ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯೋಗಿ ನಾರಾಯಣ ಕೈವಾರ ತಾತಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಬಳಿಕ ಸಾರ್ವಜನಿಕರಿಗೆ ಲಾಡು, ಮಜ್ಜಿಗೆ ವಿತರಿಸಲಾಯಿತು.

ಈ ವೇಳೆ ಅಂಕಣಕಾರ ಗುಬ್ಬಿಗೂಡು ರಮೇಶ್ ಮಾತನಾಡಿ, ಮಹನೀಯರ ಜಯಂತಿಗಳು ಆಚರಣೆಗಷ್ಟೆ ಸೀಮಿತವಾಗಬಾರದು. ಮಹನೀಯರ ಆದರ್ಶ, ತತ್ವಗಳನ್ನು ನಾವು ಮೈಗೂಡಿಸಿಕೊಳ್ಳಬೇಕು. ಜೀವನ ಸಾರ್ಥಕತೆಗಾಗಿ ಸಮಾಜದ ಒಳಿತಿಗಾಗಿ ಶ್ರಮಿಸುವ ಮೂಲಕ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಜಯನಗರ ಬಲಿಜರ ಸಂಘದ ಗೌರವಾಧ್ಯಕ್ಷರಾದ ಮೀನಾ ತೂಗುದೀಪ್, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್ ಗೌಡ, ಮುಖಂಡರಾದ ಆನಂದ್ ಶೆಟ್ಟಿ, ಜಿ.ಶ್ರೀನಾಥ್ ಬಾಬು, ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮ್ ಕುಮಾರ್, ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ನರೇಶ್ ಬಾಬು, ಸಮಾಜದ ಮುಖಂಡರಾದ ಗುರುರಾಜ್ ಶೆಟ್ಟಿ, ಎಸ್.ಎನ್.ರಾಜೇಶ್, ಶೇಖರ್, ಉಮೇಶ್, ರಮೇಶ್, ನಿತಿನ್, ಗುರುಪ್ರಸಾದ್, ಕಿರಣ್, ಉಮೇಶ್, ರಘು, ಸಂತೋಷ್ ನಾಯ್ಡು, ಹರೀಶ್ ನಾಯ್ಡು, ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಸರಸ್ವತಿಪುರಂ: ಶ್ರೀ ಯೋಗಿ ನಾರೇಯಣ ಬಣಜಿಗ ಸಂಘದ ಕಚೇರಿಯಲ್ಲಿ ಅಯೋಜಿಸಿದ್ದ ಶ್ರೀ ಯೋಗಿ ನಾರಾಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತಿಯನ್ನು ಶ್ರೀ ಯೋಗಿ ನಾರೇಯಣ ಬಣಜಿಗ(ಬಲಿಜ) ಸಂಘದ ಗೌರವಾಧ್ಯಕ್ಷ ಹೆಚ್.ಎ.ವೆಂಕಟೇಶ್ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ನಮ್ಮ ಸಮುದಾಯಕ್ಕೆ ಸೇರಿದ ಶ್ರೀ ಯೋಗಿ ನಾರಾಯಣ ಯತೀಂದ್ರರು ರಚಿಸಿದ ಕಾಲಜ್ಞಾನದ ಕೃತಿಯಲ್ಲಿ ಎಲ್ಲಾ ಸಂದೇಶವು ಅಡಗಿದ್ದು, ಅದನ್ನು ಜನರಿಗೆ ತಿಳಿಸಿಕೊಡುವ ನಿರಂತರ ಪ್ರಯತ್ನ ಮಾಡಬೇಕು. ಸಮಾಜದಲ್ಲಿ ಶ್ರೀಮಂತಿಕೆಯೇ ಶ್ರೇಷ್ಠವಲ್ಲ. ಶ್ರೀಮಂತರಿಂದಲೇ ಎಲ್ಲವೂ ಅಲ್ಲ. ಮನುಷ್ಯ ತನ್ನ ಅಂತರಂಗವನ್ನು ಶುದ್ಧಿಯಾಗಿ ಇಟ್ಟುಕೊಳ್ಳಬೇಕು. ಮನುಷ್ಯ ಯಾವ ರೀತಿ ಬದುಕಬೇಕೆಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಯೋಗಿ ನಾರೇಯಣ ಬಣಜಿಗ(ಬಲಿಜ) ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಗೋಪಾಲಕೃಷ್ಣ, ಖಜಾಂಚಿ ಕೆ.ಚಂದ್ರಶೇಖರ್, ಲೆಕ್ಕಪರಿಶೋಧಕ ಡಿ.ನಾಗರಾಜ, ನಿರ್ದೇಶಕರಾದ ಹೆಚ್.ಕೆ.ಜಗನ್ನಾಥ್, ಗೋವಿಂದ ರಾಜು, ಎಂ.ವಿ.ವೆಂಕಟೇಶ್, ರಮೇಶ್, ಸರ್ಕಾರಿ ಪದವಿಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಚಿನ್ನ ಜಗದೀಶ್, ಉಪನ್ಯಾಸಕ ಹೇಮಕುಮಾರ್, ವ್ಯವಸ್ಥಾಪಕ ಹೆಚ್.ಆರ್.ವೆಂಕಟೇಶ್, ರಘು ಶೆಟ್ಟಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಗನ ಕುಸುಮ(ಕ) + ರಾಬರ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೀಮ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಕ್ರಾಂತಿಕು ವಸ್ತುನಾರು (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಸ್ವೀಟ್ ಹಾರ್ಟ್(ತ)	4 ಪ್ರದರ್ಶನಗಳು
ಸಂಗಂ	
ಕೋರ್ಟ್(ತೆ)	4 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಸ್ಟರ್ (ತ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಡಿಪ್ಲೊಮೆಟ್ (ಹಿಂ): ಬೆ.10ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ಇಂಟರ್‌ಸ್ಟೆಲ್ಲರ್ (ಇಂ): ಮ.3.40ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ನೊವೊಕೇನ್ (ಇಂ): ಬೆ.10.30ಕ್ಕೆ, ರಾ.10.20ಕ್ಕೆ, ಡ್ರ್ಯಾಗನ್ (ತ): ಮ.1ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಸಂ.4.10ಕ್ಕೆ, ದಿಲ್‌ರೂಬ (ತೆ): ರಾ.7.15ಕ್ಕೆ.
ಸ್ಕ್ರೀನ್ 3	ಡ್ರ್ಯಾಗನ್ (ತ): ಬೆ.10ಕ್ಕೆ, ಸ್ವೀಟ್‌ಹಾರ್ಟ್ (ತ): ಮ.1.05ಕ್ಕೆ, ಅ (ಕ): ಸಂ.4.10ಕ್ಕೆ, ಛಾವಾ (ಹಿಂ): ರಾ.7.10ಕ್ಕೆ, ದಿ ಡಿಪ್ಲೊಮೆಟ್ (ಹಿಂ): ಬೆ.10
ಸ್ಕ್ರೀನ್ 4	ಅಪ್ಪು (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.30ಕ್ಕೆ, ಪೆರುಸು (ತ): ಸಂ.6.30ಕ್ಕೆ, ಸ್ವೀಟ್ ಹಾರ್ಟ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅಪ್ಪು (ಕ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ದಿಲ್‌ರೂಬಾ (ತೆ): ರಾ.9.25ಕ್ಕೆ.
ಸ್ಕ್ರೀನ್ 3	ಛಾವಾ (ಹಿಂ): ಸಂ.6.10ಕ್ಕೆ, ಅಪ್ಪು (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಕೇಳುತ್ತಿರುವುದು ತಪ್ಪು; ಸ್ವಾಮೀಜಿ ಹೇಳಿಕೆಗೆ ಖಂಡನೆ

ಮೈಸೂರು, ಮಾ.14(ಜಿಎ)–ಪಂಚಚಾರ್ಯರ ಒಂದು ಗುಂಪಿನ ರಂಭಾಪುರಿ ಸ್ವಾಮೀಜಿ ಹಾಗೂ ಕೇದಾರ ಸ್ವಾಮೀಜಿ ಈಚೆಗೆ ಲಿಂಗಸಗೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಎಲ್ಲಾ ಲಿಂಗಾಯತ ಸಂಘಟನೆಗಳು ಒಟ್ಟುಗೂಡಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಕೇಳುತ್ತಿರುವುದು ತಪ್ಪು ಎಂದು ಟೀಕಿಸಿ ಹೇಳಿಕೆ ನೀಡಿರುವುದು ಖಂಡನೀಯ ಎಂದು ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಮಹಾದೇವಪ್ಪ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪಂಚಚಾರ್ಯರು ಮತ್ತು ಅವರ ಅನುಯಾಯಿಗಳು ವೈದಿಕ ಧರ್ಮದ ಎಲ್ಲ ನಂಬಿಕೆಗಳನ್ನು ನಂಬಲು ಮತ್ತು ಆಚರಿಸಲು ಸ್ವತಂತ್ರರು. ಅವರು ಯಾವುದೇ ವೈದಿಕ ಗ್ರಂಥಗಳನ್ನು ಓದಲು, ಪ್ರಸ್ತಾಪಿಸಲು ಸಂಪೂರ್ಣ ಅಧಿಕಾರವುಳ್ಳವರು. ಆದರೆ ಶರಣ ತತ್ವಗಳ ವಿರೂಪಗೊಳಿಸುವುದು, ತಪ್ಪಾಗಿ ಅರ್ಥೈಸುವುದು ಹಾಗೂ ಶರಣ ಧರ್ಮದಲ್ಲಿ ಮಧ್ಯ ಪ್ರವೇಶಿಸುವುದು ಸರಿಯಲ್ಲ ಎಂದರು.

ತಾವು ಸ್ವರ್ಗದಿಂದ ನೇರವಾಗಿ ಭೂಮಿಗೆ ಬಂದವರೆಂದು ಹೇಳಿಕೊಳ್ಳುವ ಈ ಪಂಚಚಾರ್ಯರು ಲಿಂಗಾಯತ ಧರ್ಮದಲ್ಲಿ ಹಸ್ತಕ್ಷೇಪ ಮಾಡುವುದನ್ನು ಮತ್ತು ಅದನ್ನು ವಿರೂಪಗೊಳಿಸುವುದನ್ನು ಲಿಂಗಾಯತರು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ಪಂಚಚಾರ್ಯರ ಉಗಮದ ಬಗೆಗಿನ ಪುರಾಣಗಳ ಕಾಲ್ಪನಿಕ ಕಥೆಗಳು ತಮ್ಮ ಮಹತ್ವ ಕಳೆದುಕೊಂಡಿವೆ. ಅವರ ಕೆಲವು ಆಚರಣೆಗಳಲ್ಲಿ ಶಿವಲಿಂಗದ ಮೇಲೆ ತಮ್ಮ ಪಾದ ಇಡುವಂತಹ ವಿಚಿತ್ರ ಆಚರಣೆಗಳು ಲಿಂಗಾಯತರ ಮತ್ತು ಹಿಂದೂ ಶೈವರ ಆಕ್ರೋಶಕ್ಕೆ ಕಾರಣವಾಗಿದೆ ಇದೇನೇ ಇದ್ದರೂ ಇವರು ಶರಣ ಧರ್ಮದಲ್ಲಿ ಮಧ್ಯ ಪ್ರವೇಶಿಸುವುದು ಸರಿಯಲ್ಲ ಎಂದು ತಾಕೀತು ಮಾಡಿದರು. ಸುದ್ದಿಗೋಷ್ಠಿಯಲ್ಲಿ ಜೈಶಂಕರ್, ಗಂಗಾಧರಸ್ವಾಮಿ, ನಂಜುಂಡಸ್ವಾಮಿ, ಎಲ್.ಶಿವಲಿಂಗಪ್ಪ ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮೈಸೂರಲ್ಲಿ ವಿಶೇಷ ಚೇತನರ ಹಕ್ಕುಗಳ ಹೋರಾಟ ಸಮಿತಿ ಪ್ರತಿಭಟನೆ



ವಿಶೇಷ ಚೇತನರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮೈಸೂರು ಡಿಸಿ ಕಚೇರಿ ಮುಂಭಾಗ ಸ್ವಾಭಿಮಾನಿ ವಿಶೇಷ ಚೇತನರ ಹಕ್ಕುಗಳ ಹೋರಾಟ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.14(ಜಿಎ)–ವಿಶೇಷ ಚೇತನರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಸ್ವಾಭಿಮಾನಿ ವಿಶೇಷ ಚೇತನರ ಹಕ್ಕುಗಳ ಹೋರಾಟ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ಬಜೆಟ್‌ನಲ್ಲಿ ವಿಶೇಷ ಚೇತನರ ಬೇಡಿಕೆಗಳನ್ನು ಈಡೇರಿಸುತ್ತೇನೆ ಎಂದು ಭರವಸೆ ನೀಡಿದ್ದರು. ಆದರೆ, ಬಜೆಟ್‌ನಲ್ಲಿ ಸಮಾಜದ ಎಲ್ಲಾ ವರ್ಗಗಳಿಗೆ ವಿಶೇಷ ಅನುದಾನ ನೀಡಿದ್ದಾರೆ. ವಿಶೇಷ ಚೇತನರ ವರ್ಗವನ್ನು ನಿರ್ಲಕ್ಷಿಸಿದ್ದಾರೆ ಎಂದು ಪ್ರತಿಭಟನಾಕಾರರು ಬೇಸರ ವ್ಯಕ್ತಪಡಿಸಿದರು.

ವಿಶೇಷ ಚೇತನರಿಗೆ ಪ್ರಮುಖವಾಗಿ ಉಚಿತ ಬಸ್ ಪಾಸ್ ನೀಡಬೇಕು. ಪಿಂಚಣಿ ಹೆಚ್ಚಳ ಮಾಡಬೇಕು, ಪ್ರತ್ಯೇಕ ಕಾಲೋನಿ ನಿರ್ಮಾಣ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು.


ಪ್ರತಿಭಟನೆಯಲ್ಲಿ ಸ್ವಾಭಿಮಾನಿ ವಿಶೇಷ ಚೇತನರ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ಎಂ.ಗಿರೀಶ್, ಕಾರ್ಯದರ್ಶಿ ದಿಲೀಪ್, ಖಜಾಂಚಿ ಮಹದೇವಸ್ವಾಮಿ, ಆರ್.ರಾಮಚಂದ್ರ, ಪ್ರಭುಸ್ವಾಮಿ, ನರಸಿಂಹೇಗೌಡ, ರಿಜ್ವಾನ್ ಖಾನ್, ವೀರರಾಜೇ ಅರಸ್, ಪ್ರಸನ್ನ, ನಿತಿನ್, ಸುಜಾತ, ಸಂತೋಷ್ ಶೀಲವಂತ್, ವೆಂಕೋಬರಾವ್, ಶರಣಯ್ಯ, ಶಿಹಾಬುದ್ದೀನ್ ಮತ್ತಿತರರು ಪಾಲ್ಗೊಂಡಿದ್ದರು.

ಸೋಮಶೇಖರ್, ಶಿವರಾಮ್ ಹೆಬ್ಬಾರ್ ಉಚ್ಚಾಟನೆಗೆ ವರದಿ

ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ



ಸೋಮಶೇಖರ್



ಹೆಬ್ಬಾರ್

ಹುಬ್ಬಳ್ಳಿ, ಮಾ.14– ಶಾಸಕರಾದ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ್ ಅವರನ್ನು ಪಕ್ಷದಿಂದ ಉಚ್ಚಾಟಿಸುವಂತೆ ಕೇಂದ್ರ ಸಮಿತಿಗೆ ವರದಿ ನೀಡಿದ್ದೇನೆ. ರಾಷ್ಟ್ರ ಮತ್ತು ರಾಜ್ಯ ನಾಯಕರು ಈ ತಿಂಗಳ ಅಂತ್ಯದೊಳಗೆ ಎಲ್ಲಾ ಗೊಂದಲಕ್ಕೂ ಅಂತ್ಯ ಹಾಡಲಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ ವಿಶ್ವಾಸ ವ್ಯಕ್ತಪಡಿಸಿದರು.

ಭಿನ್ನಮತೀಯ ಚಟುವಟಿಕೆ ನಡೆಸುತ್ತಿದ್ದ ಮುಖಂಡರ ಕುರಿತು ವರದಿ ನೀಡುವಂತೆ ಪಕ್ಷದ ಕೇಂದ್ರ ಸಮಿತಿ ಸೂಚಿಸಿತ್ತು. ಮಂಡಳ ಅಧ್ಯಕ್ಷರ ಮತ್ತು ಜಿಲ್ಲಾ ಘಟಕದ ಅಧ್ಯಕರ ವರದಿಯಾಧರಿಸಿ ಇಬ್ಬರು ಶಾಸಕರನ್ನು ಪಕ್ಷದಿಂದ ಹೊರಗೆ ಹಾಕುವಂತೆ ಒಂದು ವರ್ಷದ ಹಿಂದೆಯೇ ವರದಿ ನೀಡಿದ್ದೇನೆ. ಆದರೆ, ಯಾವುದೇ ಸಂಸದರ, ಶಾಸಕರ ವಿರುದ್ಧ ಕ್ರಮಕೈಗೊಳ್ಳಲು ನನಗೆ ಅಧಿಕಾರವಿಲ್ಲ. ವರದಿ ನೀಡುವುದಷ್ಟೇ ನನ್ನ ಕಾರ್ಯವ್ಯಾಪ್ತಿ ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಶಿಸ್ತು ಸಮಿತಿ ಅಧ್ಯಕ್ಷನಾದ ನಂತರ ಸಾಕಷ್ಟು ಪ್ರಕರಣಗಳು ಬಂದಿದ್ದವು. ಬಹುತೇಕ ಪ್ರಕರಣಗಳನ್ನು ಪಕ್ಷದ ವರಿಷ್ಠರ ಎದುರು ಕೂತು ಚರ್ಚಿಸಿ ಪರಿಹಾರಕಂಡುಕೊಳ್ಳಲಾಗಿದೆ. ಕೆಲವಷ್ಟು ಪ್ರಕರಣದ ಕುರಿತು ವರದಿ ನೀಡಿದ್ದೇನೆ. ಪಕ್ಷದ ತತ್ವ ಸಿದ್ಧಾಂತ ಮತ್ತು ನಿಯಮಗಳ ಅಡಿಯಲ್ಲಿ ಶಿಸ್ತುಕ್ರಮದ ವರದಿ ಸಿದ್ಧಪಡಿಸಲಾಗುತ್ತದೆ ಎಂದರು.

ಕೆರೆಗಳಿಗೆ ಚರಂಡಿ ನೀರು ಹೋಗದಂತೆ ತಡೆಯಲು ಕ್ರಿಯಾ ಯೋಜನೆ ತಯಾರಿಸಿ

ಇಂಜಿನಿಯರ್‌ಗಳಿಗೆ ಪಾಲಿಕೆ ಕಮಿಷ್ನರ್ ಶೇಖ್ ತನ್ವೀರ್ ಆಸಿಫ್ ಸೂಚನೆ



ಮೈಸೂರು ಮಹಾ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಕೆರೆಗಳ ಪರಿಶೀಲನೆ ನಡೆಸಿದರು

ಮೈಸೂರು, ಮ.14(ಆರ್‌ಕೆ)–ವಸತಿ ಬಡಾವಣೆಗಳ ಯುಜಿಡಿ, ಚರಂಡಿ ನೀರು ಹಾಗೂ ಕೈಗಾರಿಕಾ ಪ್ರದೇಶದ ರಾಸಾಯನಿಕ ತ್ಯಾಜ್ಯ ಕೆರೆಗಳಿಗೆ ಸೇರುವುದನ್ನು ತಡೆಯಲು ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ವಾಣಿ ವಿಲಾಸ ವಾಟರ್ ವರ್ಕ್ಸ್ ಇಂಜಿನಿಯರ್‌ಗಳಿಗೆ ಸೂಚನೆ ನೀಡಿದ್ದಾರೆ.

ಲಿಂಗಾಂಬುದಿ, ಬೋಗಾದಿ ಮತ್ತು ಹೆಬ್ಬಾಳು ಕೆರೆಗಳಿಗೆ ವಾಣಿ ವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಅಶ್ವಿನ್, ಶಿಲ್ಪ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಧನುಷ್‌ರೊಂದಿಗೆ ಭೇಟಿ ನೀಡಿ ಪರಿಶೀಲಿಸಿದ ಅವರು, ಮಲಿನ ನೀರು ಸೇರುತ್ತಿರುವುದರಿಂದ ಕೆರೆಗಳು ಕಲುಷಿತಗೊಂಡು ಅಲ್ಲಿನ ವಾತಾವರಣ ಹಾಳಾಗುತ್ತಿರುವುದು ಮನವರಿಕೆ ಆಯಿತು. ಇತ್ತೀಚೆಗಷ್ಟೇ ಹೆಬ್ಬಾಳು ಕೆರೆಯ ದುಸ್ಥಿತಿ ಬಗ್ಗೆ 'ಮೈಸೂರು ಮಿತ್ರ'ನಲ್ಲಿ ಸಚಿತ್ರ ವರದಿ ಪ್ರಕಟವಾಗಿತ್ತು. ಮೈಸೂರು ಗ್ರಾಹಕರ ಪರಿಷತ್ (MGP) ಸದಸ್ಯರು ಕೆರೆಗಳ ನೀರು ಮಲಿನವಾಗುತ್ತಿರುವ ಬಗ್ಗೆ ದೂರು ನೀಡಿದ ಹಿನ್ನೆಲೆಯಲ್ಲಿ ಖುದ್ದು ಪರಿಶೀಲಿಸಿದ ಪಾಲಿಕೆ ಕಮಿಷ್ನರ್ ಒಳಚರಂಡಿ, ಕೈಗಾರಿಕೆಗಳ ತ್ಯಾಜ್ಯ ತಡೆಯಲು ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಸೂಚಿಸಿದರು. ಮುಂದಿನ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ ಯೋಜನೆಗೆ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುವುದು ಎಂದು ಆಸಿಫ್ ತಿಳಿಸಿದರು.

ಪೊಲೀಸ್ ಬಡಾವಣೆಯಲ್ಲಿ ಮನೆಗೇ ನುಗ್ಗಿ ಚಿನ್ನದ ಸರ ಕಳವು

ಮೈಸೂರು, ಮಾ. 14(ಆರ್‌ಕೆ)– ಮನೆಗೆ ನುಗ್ಗಿ ಮಚ್ಚು ತೋರಿಸಿ ವ್ಯಕ್ತಿ ಕೊರಳಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಯುವಕನೋರ್ವ ಪರಾರಿಯಾದ ಘಟನೆ ಮೈಸೂರಿನ ಪೊಲೀಸ್ ಬಡಾವಣೆ 2ನೇ ಹಂತದಲ್ಲಿ ಕಳೆದ ರಾತ್ರಿ ಸಂಭವಿಸಿದೆ.

ಗಿರೀಶ್, ಚಿನ್ನದ ಸರ ಕಳೆದುಕೊಂಡವರಾಗಿದ್ದು, ಗುರುವಾರ ರಾತ್ರಿ ಸುಮಾರು 8.30ರಲ್ಲಿ ಹೆಲ್ಮೆಟ್ ಧರಿಸಿದ್ದ ಯುವಕ ದಿಢೀರ್ ಮನೆಗೆ ನುಗ್ಗಿ, ಮಚ್ಚು ತೋರಿಸಿ ಗಿರೀಶ್ ಅವರಿಂದ 23 ಗ್ರಾಂ ತೂಕದ ಸರ ಕಸಿದುಕೊಂಡು, ಹಿಂಬಾಲಿಸಿದರೆ ಕೊಲೆ ಮಾಡುವುದಾಗಿ ಬೆದರಿಸಿ ಪರಾರಿಯಾಗಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಪೊಲೀಸರು, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಅಭಿನಂದನೆ



ಶ್ರೀರಂಗಪಟ್ಟಣ ತಾಲೂಕು ಗಂಜಾಂನ ನಿಮಿಷಾಂಬ ದೇವಸ್ಥಾನ ಸಮಿತಿಯ ನೂತನ ಅಧ್ಯಕ್ಷರಾದ ಧನಂಜಯ ಅವರನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಕಾಂಗ್ರೆಸ್ ಮುಖಂಡ ಜಯರಾಮ ಆಚಾರ್ ಸನ್ಮಾನಿಸಿದರು. ಈ ವೇಳೆ ಮುಖಂಡ ಶ್ರೀನಿವಾಸ್ ಸೂರ್ಯನಾರಾಯಣ ಭಟ್ ಉಪಸ್ಥಿತರಿದ್ದರು.

'ದಿ ಮೊನಾರ್ಕ್ ಆಫ್ ಮೈಸೂರು', 'ಪುರಾತತ್ವ ಶೋಧನೆ', 'ಎ ಲೈಫ್ ಇನ್ ಹಿಸ್ಟರಿ' ಕೃತಿಗಳ ಲೋಕಾರ್ಪಣೆ



ಡಾ.ಎಸ್.ಶ್ರೀಕಂಠ ಶಾಸ್ತ್ರಿ ಅವರ 50ನೇ ಪುಣ್ಯಸ್ಮರಣೆ ಅಂಗವಾಗಿ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ದಿ ಮೊನಾರ್ಕ್ ಆಫ್ ಮೈಸೂರು', 'ಪುರಾತತ್ವ ಶೋಧನೆ' ಮತ್ತು 'ಎ ಲೈಫ್ ಇನ್ ಹಿಸ್ಟರಿ' ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು, ಮಾ.14(ಜಿಎ)– ಡಾ.ಎಸ್.ಶ್ರೀಕಂಠ ಶಾಸ್ತ್ರಿ ಅವರ 50ನೇ ಪುಣ್ಯಸ್ಮರಣೆ ಅಂಗವಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗವು ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ದಿ ಮೊನಾರ್ಕ್ ಆಫ್ ಮೈಸೂರು', 'ಪುರಾತತ್ವ ಶೋಧನೆ' ಮತ್ತು 'ಎ ಲೈಫ್ ಇನ್ ಹಿಸ್ಟರಿ' ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮಂಟೇಸ್ವಾಮಿ ಮಠದ ಮಠಾಧಿಪತಿ ಎಂ.ಎಲ್.ವರ್ಚಸ್ವಿನ್ ಎಸ್.ಎಸ್.ರಾಜೇ ಅರಸ್, ಖ್ಯಾತ ವೈಣಿಕರಾದ ವಿದ್ವಾನ್ ಆರ್.ವಿಶ್ವೇಶ್ವರನ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಟಿ.ವೆಂಕಟಾಚಲ ಶಾಸ್ತ್ರಿ ಅವರುಗಳು ಕೃತಿಗಳನ್ನುಲೋಕಾರ್ಪಣೆಗೊಳಿಸಿದರು.

ನಂತರ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಭಾಷಾಂತರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಹೆಚ್.ಎಸ್.ಹರಿಶಂಕರ್ ಮಾತನಾಡಿ, ಎಸ್.ಶ್ರೀಕಂಠ ಶಾಸ್ತ್ರಿಯು ತಮ್ಮ ಅರಿವಿನ ವಿಸ್ತಾರವನ್ನು ಪುಸ್ತಕ ರೂಪಕ್ಕಿಳಿಸಿದ್ದರು, ಆದರೆ ಅವರ ಅಸಾಧಾರಣ ಸೇವೆಯನ್ನು ಸರ್ಕಾರವು ಗುರುತಿಸಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಶಾಸ್ತ್ರಿಗಳ ಬರವಣಿಗೆಯು ಚರಿತ್ರೆ ಸಾಹಿತ್ಯ, ಬೋಧನಾ ವಿಧಾನ, ಅಲಂಕಾರ ಶಾಸ್ತ್ರ, ಪುರಾತತ್ವ ಶಾಸ್ತ್ರದ ವಿಚಾರಗಳನ್ನು ಒಳಗೊಂಡಿತ್ತು. ಅವರ ಮಗ ನಾಗನಾಥ್ ಅವರು ತಂದೆಯ ಕುರಿತು ಬರೆದಿರುವ ಪುಸ್ತಕವು ಜೀವನ ಚರಿತ್ರೆಗಷ್ಟೇ ಸೀಮಿತವಾಗದೆ, ಶಾಸ್ತ್ರಿಗಳ ಸಾಧನೆಯ ಗ್ರಂಥವಾಗಿ ಹೊರಹೊಮ್ಮಿದೆ' ಎಂದರು.

ಮಾನಸಗಂಗೋತ್ರಿಯ ಇಂಗ್ಲೀಷ್ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಎ.ಶಂಕರ್ ಮಾತನಾಡಿ, 'ದಿ ಮೊನಾರ್ಕ್ ಆಫ್ ಮೈಸೂರು' ಅನುವಾದ ಕೃತಿಯು ಮೈಸೂರಿನ ಇತಿಹಾಸಕ್ಕೆ ನೀಡಿದ ಕೊಡುಗೆಯಾಗಿದೆ. ಈ ಪುಸ್ತಕವನ್ನು ಶ್ರೀಕಂಠಶಾಸ್ತ್ರಿಗಳು ಕನ್ನಡದಲ್ಲಿ ಬರೆದಾಗ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕುರಿತು ಕನ್ನಡಿಗರಿಗೆ ತಿಳಿಯಿತು. ಈಗ ಆಂಗ್ಲ ಭಾಷೆಗೆ ತರ್ಜುಮೆಯಾಗಿರುವುದರಿಂದ. ಕನ್ನಡ ಗೊತ್ತಿಲ್ಲದವರೂ ಇಲ್ಲಿನ ಪರಂಪರೆಯನ್ನು ಕ್ರಮವಾಗಿ ಕಾಣಲು ಸಾಧ್ಯ ಎಂದು ತಿಳಿಸಿದರು.

ಮೂಲ ಲೇಖನದಲ್ಲಿರುವ ನ್ಯೂನ್ಯತೆಗಳನ್ನು ಅನುವಾದ ಮಾಡುವಾಗ ಸರಿಪಡಿಸಬಾರದು. ಇದರಿಂದ ಕೃತಿಯಲ್ಲಿ ಸ್ವಾದ ಉಳಿಯುವುದಿಲ್ಲ. ಆದರೆ ಈ ಪುಸ್ತಕದಲ್ಲಿ ಆ ರೀತಿಯ ವ್ಯತ್ಯಾಸಗಳಾಗಿಲ್ಲ. ಅಂದವಾದ ಕನ್ನಡವನ್ನು ಯಥಾವತ್ ಇಂಗ್ಲೀಷ್‌ಗೆ ಅನುವಾದಿಸಲಾಗಿದ್ದು, ಇತಿಹಾಸದ ಸ್ವಾದ ಉಳಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶ್ರೀಕಂಠ ಶಾಸ್ತ್ರಿ ಅವರ ಪುತ್ರ ಪ್ರೊ.ಎಸ್.ನಾಗನಾಥ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಅಧ್ಯಕ್ಷ ವಿ.ಶೋಭಾ ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾಸ್ಪತ್ರೆ ಡಯಾಲಿಸಿಸ್ ಘಟಕದಿಂದ ವಿಶ್ವ ಕಿಡ್ನಿ ದಿನಾಚರಣೆ

ಕಿಡ್ನಿ ಸುರಕ್ಷತೆ ಸಂಬಂಧ ವೈದ್ಯರ ಕಿವಿಮಾತು



ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ವಿಶ್ವ ಕಿಡ್ನಿ ದಿನ ಆಚರಿಸಲಾಯಿತು.

ಮೈಸೂರು, ಮಾ.14(ಎಂಕೆ)– ಮೈಸೂರಿನ ಮೇಟಗಳ್ಳಿಯಲ್ಲಿರುವ ಜಿಲ್ಲಾಸ್ಪತ್ರೆಯಲ್ಲಿನ ಡಯಾಲಿಸಿಸ್ ಘಟಕದ ವತಿಯಿಂದ ವಿಶ್ವ ಕಿಡ್ನಿ ದಿನ ಆಚರಿಸಲಾಯಿತು.

ಕೇಕ್ ಕತ್ತರಿಸಿ, ಸಿಹಿ ತಿನಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಟಿ.ಅಮರನಾಥ್, ಜಗತ್ತಿನಾದ್ಯಂತ ವಿಶ್ವ ಕಿಡ್ನಿ ದಿನ ಆಚರಿಸಲಾಗುತ್ತಿದೆ. ಇತ್ತೀಚೆಗಂತೂ ತುಂಬಾ ಜನರು ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದು, ಕಿಡ್ನಿ ಆರೋಗ್ಯ ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯವಾಗಿದೆ. ವಿಶ್ವ ಕಿಡ್ನಿ ದಿನಾಚರಣೆ ಮೂಲಕ ಜಾಗೃತಿ ಮೂಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು, ಪ್ರತಿಯೊಬ್ಬರು ದೇಹದ ಬಹುಮುಖ್ಯ ಅಂಗವಾದ ಕಿಡ್ನಿಯನ್ನು ಆರೋಗ್ಯವಾಗಿಟ್ಟುಕೊಳ್ಳುವಂತೆ ಎಚ್ಚರಿಸಿದರು.

ಕಿಡ್ನಿ ಆರೋಗ್ಯ ಕುರಿತು ಮಾತನಾಡಿದ ಕೆ.ಆರ್.ಆಸ್ಪತ್ರೆಯ ಕಿಡ್ನಿ ತಜ್ಞ ಡಾ. ನಿರಂಜನ್, 2006ರಿಂದ ಪ್ರತೀ ವರ್ಷ ಮಾರ್ಚ್ ತಿಂಗಳ ಎರಡನೇ ವಾರ ಕಿಡ್ನಿ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವ ಕಿಡ್ನಿ ದಿನ ಆಚರಿಸಲಾಗುತ್ತಿದೆ. ಹುಟ್ಟಿನಿಂದ ಸಾಯುವವರೆಗೂ ಒಂದೇ ಒಂದು ಕ್ಷಣವೂ ವಿಶ್ರಾಂತಿ ಇಲ್ಲದೆ ಸೈಲೆಂಟ್ ಆಗಿ ಕೆಲಸ ಮಾಡುವ ದೇಹದ ಬಹುಮುಖ್ಯ ಅಂಗ ಕಿಡ್ನಿ ಆಗಿದ್ದು, ದೇಹಕ್ಕೆ ಯಾವುದು ಬೇಕು ಎಂಬುದನ್ನು ಸ್ವೀಕರಿಸಿ, ಬೇಡವಾದುದನ್ನು ಹೊರಗಡೆ ಹಾಕುವ ಕೆಲಸವನ್ನು ಮಾಡಲಿದೆ. ಆಹಾರದಿಂದ ಬಂದ ಪೋಷಕಾಂಶಗಳನ್ನು ದೇಹದ ಇನ್ನಿತರೆ ಅಂಗಾಂಗಗಳಿಗೆ ಪೂರೈಸುವ ಕೆಲಸವನ್ನು ಕಿಡ್ನಿ ಮಾಡಲಿದೆ ಎಂದರು.

ಎಂಟು ನಿಯಮ ಪಾಲಿಸಿ: ಕಿಡ್ನಿ ಆರೋಗ್ಯ ಕಾಪಾಡಿಕೊಳ್ಳಲು ಎಂಟು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕಿದೆ. ಅಗತ್ಯ ಇರುವಷ್ಟು ನೀರು ಕುಡಿಯುವುದು, ಬಿಪಿ ಮತ್ತು ಶುಗರ್ ಇರುವವರು ಸರಿಯಾದ ವಿಧಾನದಲ್ಲಿ ತಪ್ಪದೆ ಮಾತ್ರೆಗಳನ್ನು ಸೇವಿಸುವುದು, ದೇಹದ ತೂಕ ನಿರ್ವಹಣೆ, ಧೂಮಪಾನ ಮಾಡಬಾರದು, ವೈದ್ಯರ ಸಲಹೆ ಇಲ್ಲದೆ ಮಾತ್ರೆಗಳನ್ನು ಸೇವನೆ ಮಾಡದಿರುವುದು, ದೈಹಿಕ ವ್ಯಾಯಾಮ ಹಾಗೂ ವರ್ಷಕ್ಕೊಮ್ಮೆ ಇಡೀ ದೇಹದ ಮಾಸ್ಟರ್ ಹೆಲ್ತ್ ಚೆಕಪ್ ಮಾಡಿಸುವುದರಿಂದ ಕಿಡ್ನಿ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ ಎಂದು ಸಲಹೆ ನೀಡಿದರು. ಉಚಿತ ಡಯಾಲಿಸಿಸ್ ಘಟಕದ ಅಧಿಕಾರಿ, ಸಿಬ್ಬಂದಿ ಹಾಗೂ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು ಉಪಸ್ಥಿತರಿದ್ದರು.

ವರ್ಷದ ಅವಧಿಯಲ್ಲಿ ಸಾಧನೆಯ ಚಿಕಿತ್ಸೆ ಸಲ್ಲಿಕೆ...

ನೆಫ್ರೊಪ್ಲಸ್ ಸಂಸ್ಥೆ ಸಹಕಾರದೊಂದಿಗೆ ಜಿಲ್ಲಾಸ್ಪತ್ರೆಯಲ್ಲಿ ಉಚಿತ ಡಯಾಲಿಸಿಸ್ ಚಿಕಿತ್ಸಾ ಘಟಕ ಆರಂಭವಾಗಿ ಒಂದು ವರ್ಷ ಕಳೆದಿದ್ದು, ಮೂರು ಬೆಡ್‌ನಿಂದ ಹತ್ತು ಬೆಡ್‌ಗಳಿಗೆ ವಿಸ್ತರಿಸಲಾಗಿದೆ. ಆರಂಭದಲ್ಲಿ 8–9 ಮಂದಿಗೆ ಡಯಾಲಿಸಿಸ್ ಚಿಕಿತ್ಸೆ ನೀಡಲಾಗುತ್ತಿತ್ತು. ಈಗ ದಿನವೊಂದಕ್ಕೆ 66 ಮಂದಿ ಚಿಕಿತ್ಸೆ ನೀಡಲಾಗುತ್ತಿದೆ. ತಿಂಗಳಿಗೆ ಸುಮಾರು 550–560 ಡಯಾಲಿಸಿಸ್ ಚಿಕಿತ್ಸೆ ನೀಡಲಾಗುತ್ತಿದೆ. ಇದೆಲ್ಲವೂ ಜಿಲ್ಲಾಸ್ಪತ್ರೆಯ ಆಡಳಿತ, ನೆಫ್ರೊಪ್ಲಸ್ ಸಂಸ್ಥೆ ಅಧಿಕಾರಿ–ಸಿಬ್ಬಂದಿ ಹಾಗೂ ಡಯಾಲಿಸಿಸ್ ಘಟಕದ ಎಲ್ಲಾ ಸಿಬ್ಬಂದಿಗಳ ಸಹಕಾರದಿಂದ ಸಾಧ್ಯವಾಗಿದೆ. ಡಯಾಲಿಸಿಸ್ ಚಿಕಿತ್ಸೆ ಪಡೆಯಲು ಸಾಧ್ಯವಾಗದೆ ಇರುವವರು ಜಿಲ್ಲಾಸ್ಪತ್ರೆಗೆ ಬಂದು ಗುಣಮಟ್ಟದ ಡಯಾಲಿಸಿಸ್ ಚಿಕಿತ್ಸೆ ಪಡೆಯಬಹುದಾಗಿದೆ.

– ಜಿ.ರವಿ, ನರ್ಸಿಂಗ್ ಅಧಿಕಾರಿ, ಜಿಲ್ಲಾಸ್ಪತ್ರೆ ಡಯಾಲಿಸಿಸ್ ಘಟಕ


ತ್ಯಾಗು ಏಜೆನ್ಸೀಸ್ ಮಾಲೀಕರು ಮತ್ತು ಕಾಂಗ್ರೆಸ್ ಮುಖಂಡರು
ಎಸ್.ತ್ಯಾಗರಾಜು
ಬೋಗಾದಿರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ವಿನ್ಯಾಸ
ಮೊ: 74 1115 1112
ಶುಭಕೋರುವವರು : ಬೋಗಾದಿ ಗ್ರಾಮಸ್ಥರು
ಹಾಗೂ ತ್ಯಾಗರಾಜು ಗೆಳೆಯರ ಬಳಗ